(SRI B. D. JATTI)

(2) of Section 16 of the Mysore Motor Vehicles Taxation Act, 1957.

INTRODUCTION OF BILLS

SRI S. NIJALINGAPPA.—I beg to introduce the Mysore Public Service Commission (Conduct of Business and Additional Functions) (Amendment) Bill, 1966.

I beg to introduce the Mysore Prohibition of Beggary (Extension and Amendment) Bill, 1966.

MR. SPEAKER.—The Bills are introduced. I present the 40th Report of the Business Advisory Committee.

BUDGET ESTIMATES OF THE MYSORE STATE ELECTRICITY BOARD FOR 1966-67.

General Discussion (Contd.)

SRI P. F. D'MELLOW (Nominated).—Mr. Speaker, Sir, I Congratulate the Hon'ble Minister for P.W.D for providing as a printed Copy of his Speech when the financial statement on the Mysore Electricity Board. It is helpful to us in many ways. It is clear that the administration of the Board is better now. While introduing the Financial Statement the Minister pleaded for co-operation and encouragement for the work of the Board purticularly for the plans for the future. For my part I do accept the Hon'ble Minister's statement that in fixing the tariff rates, both the Government and the Board have been actuated by the interest of the consumers with a desire, as the Minister has explained, to avoid inflicting undue hardship by fixing a higher and steeper rise over the previous tariff. These things we do appreciate and I do hope that they will conform to the policy that the Minister has explained, that it is part of the Government's desire and that of the Board to make rapid extension of power for rural areas, for agricultural purposes and for establishment of both heavy and small scale industries. As I said, it is a wise and far reaching policy that prompted the Government and the Board to accept moderate rise against possible temptation to compensate any loss by making a higher and steeper rise. There is however a matter which I feel I must bring to the notice of the Hon'ble Minister and it is only to allay unnecessary misunderstanding in the public mind. It concerns the request that has

been made from time to time to Government for the publication of the Tariff Committee's report. I have no doubt that the Board and the Government have very good reasons. But there it is. I feel I am voicing the opinin and the request of a section of the public, a section which is composed of thinking men, men who influence public opinion. My request to the Minister again is to consider the publication of that report, because I feel that it would help and go a long way to allaying whatever suspicion that remains in the minds of certain sections that by withholding that report the Government are in fact allowing the Electricity Board to impose arbitrarily their own tariff. It is not that I share that view. But I say there is the Minister's advice that public must co-operate and it is from that point of view I appeal that he must remove one of the causes of lurking suspicion in the minds of thinking public.

2-30 P.M.

[Mr. Deputy Speaker in the Chair.]

Sir, speaking as a domestic user and claiming to represent nobody but the common man, I would like to say that with that helpful attitude of the Minister in charge and of the Board goes right down to some of the categories of the staff in the lower formations like the Junior staff where we do not find not always the same helpful approach that the senior members of the Electricity Board display. I speak, Sir, in particular about the difficulties experienced by the ordinary consumer who wishes to avail himself of the advantages of the all-electric houses. I understand that they come up against a great deal of unnecessary trouble in dealing at the levels of ordinary man today, and in fact they do not understand the whys and where-fors of converting a residence into an all-electric home. I mention this merely not by way of criticism, but I hope that it would reach through the Minister and the Chairman of the Board to the administrative staff to see how it may be possible for the Electricity Board to adopt a more reasonable, shall I say, a more up-to-date policy in dealing with even a small consumer. I say this merely because I share the Minister's view that it will depend very largely on the encouragement and support that the Board receives from the consumer both large and small if his dreams of the future are to be realised. I agree with the Minister that the future of our State itself depends very largely on increasing investments in the field of electricity and I feel that it is a matter of great congratulation to the State that it possesses two dynamic leaders in the shape of Chief Minister and the Minister in charge of power who are seized with the importance that this power presents for the future of the Mysore State. I do hope and echo his suggestion that with this co-operation I talked about on the part of the staff, we shall soon see that the public will come forward all the way and not half the way to meet the requests of the Minister and eliminate the difficulties things that the public are now suffering from.

† Sri K. DEVAYA (Malleswaram).—Mr. Speaker, Sir, we have just received the budget for the year 1966-67 in respect of Electricity Board. It is heartening to note that of all the undertakings by the Government, the Electricity Board has done wonderful work and it has made available electricity to the needy and almost 25 per cent of the villages of Mysore State. The people in the villages have got illumination by electricity and many irrigation pumps are working in different parts of the villages, giving solace to the farmer and enabled him to put farming on a sound basis. It is also heartening to note that within the end of this year, double or more than the existing number of irrigation pumps will be installed in other villages and the Electricity Board must be thanked for having done this work at the shortest period in its history.

I have to say something about the state of affairs of the Industries Department. There should be co-ordination between the Electricity Board and the Industries Department. We have got enough and more supply of electricity but there is not enough factories, especially small scale industries. We have heard much about industrial development and improvement in the Punjab. Almost every house has become centre of cottage industry but the sad thing in Mysore State is that though a few persons have been fortunate enough to run their business with the help of HMT, HAL, ITI and some other big concerns, we have not progressed very much in the industry's sector. As I told you in previous sessions, there is very good scope for starting motor industry in Bangalore. We have got so many factories spread out throughout the City of Bangalore and in surrounding areas. If only the Government of Mysore make up its determination to start an industry like this, it will go a great deal not only in getting cheap cars, but providing employment for thousands and thousands of persons in the State of Mysore. And similarly other industries can be started provided it is taken up very seriously. It has been a sorry state of affairs that all the industries coming up all round Bangalore City, the small-scale industries are not having enough work, practically no work, except manufacturing some cradles, cots and chairs I therefore, appeal to the Chief Minister through you Mr. Speaker that has he has already said on several occasions that the Mysore State must go in for small car industry, I request him to make up his mind and gather strength and make the small car industry a success which will bring credit not only to Mysore State but to all industry-loving people in Mysore.

Coming to the Electricity Department, there is much risk on the part of the employees of the Electricity Board. There have been several deaths due to falling down from poles, etc. It involves hazardous work. There is some case of trouble brewing in some Departments. If these people are accommodated properly, I think they will do better work and render better service to the people.

I have once again to thank the Minister for Public Works for taking keen interest and a personal determination to carry out whatever he wants in shortest period of time. It was our good fortune to go to Sharavathi twice once for inspection and another time when the generator

was inaugurated. It was a wonderful piece of work and every one of us must appreciate the hardship which the people of the Electricity Department and Engineers, electricians and everybody connected with the work, must have faced. Their work must be appreciated and they must be thanked.

I only wish to say that there is a bright future for Mysore and I am sure that Mysore will be leading in the matter of providing electricity for the people of the State for all their needs at the same time giving due share of power to the neighbouring States for their needs. As stated by the Hon'ble Minister the *per capita* consumption of electricity in the State is likely to go up and very soon Mysore will be leading in Electricity.

With these words, I thank you Sir, for giving me an opportunity to speak.

†ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಮಾನ್ಯ ಸಭಾಪತಿಯವರೆ, 1966-67ನೆ ಇಸವಿಯ ಎಲೆಕ್ಟ್ರಿಸಿಟಿಬೋರ್ಡಿನ ಬಜೆಟ್ಟನ್ನು ಮಾನ್ಯ ಲೋಕೋಪಯೋಗಿ ಶಾಖಾ ಸಚಿವರು ಸಭೆಯ ಮುಂದಿಟ್ಟಿದ್ದಾರೆ. ಈ ವಿದ್ಯುಚ್ಛಕ್ತಿಯ ಆಡಳಿತವು ದ್ವಿಮುಖವಾಗಿದೆ. ಎಲ್ಲ ವಿದ್ಯುಚ್ಛಕ್ತಿಯನ್ನು ತಯಾರು ಮಾಡತಕ್ಕಂತಹ ಕೇಂದ್ರಗಳೂ ಸಂಪೂರ್ಣವಾಗಿ ವಿದ್ಯುಚ್ಛಕ್ತಿ ಮಂಡಳಿಯವರ ಆಡಳಿತದಲ್ಲಿ ಇಲ್ಲ.

ಕೆಲವನ್ನು ಸರ್ಕಾರದವರೇ ನೇರವಾಗಿ ತಮ್ಮ ಆಡಳಿತದಲ್ಲಿ ಇಟ್ಟು ಕೊಂಡಿದ್ದಾರೆ. ಇದರಿಂದಾಗಿ ವಿದ್ಯುಚ್ಛಕ್ತಿ ಮಂಡಳಿಯವರು ಸರ್ಕಾರದಿಂದ ವಿದ್ಯುಚ್ಛಕ್ತಿಯನ್ನು ಕೊಂಡು ಅದನ್ನು ಹಂಚತಕ್ಕ ಏರ್ಪಾಡನ್ನು ಕೂಡ ಮಾಡುತ್ತಿದೆ. ಈ ವಿದ್ಯುಚ್ಛಕ್ತಿ ಮಂಡಳಿಯವರ ಬಜೆಟ್ ನೋಡುವುದಾದರೆ, ಅವರು 1966-67 ರಲ್ಲಿ ಸುಮಾರು 13 ಕೋಟಿ 83 ಲಕ್ಷ ರೂಪಾಯಿಯಷ್ಟು ವಿದ್ಯುಚ್ಛಕ್ತಿಯನ್ನು ಮಾರಾಟ ಮಾಡುತ್ತಾರೆ ಮತ್ತು ಅದಕ್ಕಾಗಿ ಅಗತಕ್ಕಂತಹ ಖರ್ಚು ಸುಮಾರು 13 ಕೋಟಿ 60 ಲಕ್ಷ ಎಂಬ ವ್ಯವಹಾರಗಳನ್ನು ತೋರಿಸಿ ಅದರಿಂದ 45.50 ನೆಟ್ ರೆವೆನ್ಯೂ ಬರುತ್ತದೆಂದು ಹೇಳಿದ್ದಾರೆ. ಹೀಗಾಗಿ ವಿದ್ಯುಚ್ಛಕ್ತಿಯ ದರವು ಕೂಡ ಅನೇಕ ಕಾರಣಗಳಿಗಾಗಿ ಜಾಸ್ತಿಮಾಡಬೇಕೆಂದು ಹೇಳಿದ್ದಾರೆ. ಇದರಿಂದ ಏನಾಗಿದೆ ಎಂದರೆ, ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡತಕ್ಕವರು ಒಂದು ಇಲಾಖೆ ಮತ್ತು ವಿದ್ಯುಚ್ಛಕ್ತಿ ಹಂಚತಕ್ಕದ್ದು ಒಂದು ಮಂಡಳಿ. ಇದರಿಂದಾಗಿ ದರವನ್ನು ನಿಷ್ಕರ್ಷೆ ಮಾಡತಕ್ಕ ಮತ್ತು ಖರ್ಚನ್ನು ಸರಿದೂಗಿಸತಕ್ಕ ಕಾರ್ಯ ಕೈಗೂಡಲಾರದು ; ಮತ್ತು ಅದರ ಉತ್ಪತ್ತಿಯ ಮೇಲೆ ಇವರಿಗೆ ಹತೋಟಿ ಇರಲಾರದು. ಬರೀ ಹಂಚತಕ್ಕ ಜವಾಬ್ದಾರಿ ಮಾತ್ರ ಇದೆ. ನಮ್ಮ ಮೈಸೂರು ದೇಶವು ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವುದರಲ್ಲಿ ಅತಿ ಪ್ರಸಿದ್ಧಿ ಪಡೆದದ್ದು, ಹಾಗೂ ಇಲ್ಲಿ ಎಲ್ಲಾ ಅನುಕೂಲತೆಗಳೂ ಪ್ರಕೃತಿ ಸೌಲಭ್ಯಗಳೂ ಇರುವಾಗ ಇಲ್ಲಿ ವಿದ್ಯುಚ್ಛಕ್ತಿ ದರ ಕಡಿಮೆಯಾಗಬೇಕಾಗಿತ್ತು. ಆದರೆ ಇಲ್ಲಿ ಎಲ್ಲಕ್ಕಿಂತಲೂ ಜಾಸ್ತಿಯಾಗಿದೆ. ಇದಕ್ಕೆ ಕಾರಣ ಏನೆಂದು ಹುಡುಕಬೇಕು. ಇವತ್ತಿನ ದಿವಸ ಶರಾವತಿಯಂತಹ ಯೋಜನೆಯಿಂದ ಹೇರಳವಾಗಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುತ್ತಿದ್ದರೂ ಕೂಡ ನಮ್ಮ ದರವು ಜಾಸ್ತಿಯಾಗಿದೆ. ಇವತ್ತಿನ ದಿವಸ ನಾವು ಈ ಶರಾವತಿ ಯೋಜನೆಗೆ ಹೇರಳವಾಗಿ, ಇನ್ನಿತರ ವೆಚ್ಚಗಳನ್ನು ಬಿಟ್ಟು ಖರ್ಚು ಮಾಡಿದ್ದೇವೆ. ಇದರಲ್ಲಿ ಅಪವ್ಯಯವೇ ಈ ದರದ ಏರಿಕೆಗೆ ಮುಖ್ಯ ಕಾರಣವೆಂದು ನಾನು ಹೇಳುತ್ತೇನೆ. ಶರಾವತಿಯೇ ಆಗಲಿ, ಇದಕ್ಕೆ ಒಂದು ಸರಿಯಾದ ಜವಾಬ್ದಾರಿಯುತವಾದ ಏರ್ಪಾಡನ್ನು ಮಾಡಬೇಕು, ಅದು ಸರ್ಕಾರದವರೇ ಆಗಲೀ, ಅಥವಾ ಮಂಡಳಿಯವರೇ ಆಗಲೀ. ಇದು ಒಂದು ದೊಡ್ಡ ಸಮಸ್ಯೆ. ನಾನಾದರೂ ಹೇಳುತ್ತೇನೆ, ಈ ವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ಹಂಚತಕ್ಕ ಕಾರ್ಯವನ್ನು ಒಂದು ಮಂಡಳಿಗೆ ವಹಿಸತಕ್ಕಂಥದ್ದು ಬಹಳ ಒಳ್ಳೆಯದು. ಏಕೆಂದರೆ, ಆವಾಗ ಅವರ ಮೇಲೆ ಸರ್ಕಾರಕ್ಕೆ ಒಂದು ಹಿಡಿತವಿರುತ್ತದೆ. ಉತ್ಪಾದನಾ ಖರ್ಚು ಹೆಚ್ಚು ಕಡಮೆಯಾದರೂ ಅದನ್ನು ಕೇಳತಕ್ಕ ಶಕ್ತಿ ಇರುತ್ತದೆ ; ಮತ್ತು ಒಂದು ಆಡಳಿತ ಬಗಿಯಿಂದ ಅವರಮೇಲೆ ಸವಾರಿ ಮಾಡಬಹುದು. ಇಲ್ಲದಿದ್ದರೆ ಎಷ್ಟು ಏರುಪೇರು ಆದರೂ ಕೂಡ ನಿಮಗೆ ಕೇಳುವುದಕ್ಕೆ ಸಾಧ್ಯವಿಲ್ಲ. ಈ ಖರ್ಚಿನ ಮೇಲೆ ಹತೋಟಿ ಇಲ್ಲದಿರುವುದರಿಂದ ಇವತ್ತಿನ ದಿವಸ ವಿದ್ಯುಚ್ಛಕ್ತಿ ದರವು ಏರತಕ್ಕ ಸಂದರ್ಭವಿದೆ. ಇದಕ್ಕಾಗಿ ಸರ್ಕಾರದವರು ವಿದ್ಯುಚ್ಛಕ್ತಿಯ ಉತ್ಪಾದನೆ ಕೇಂದ್ರವನ್ನು ಒಂದು ಕಾರ್ಪೊರೇಶನಿಗೆ ವಹಿಸಿಕೊಡುವುದು ಸೂಕ್ತ ಮತ್ತು ಅದರಿಂದ ಅವರ ಮೇಲೆ ಹಿಡಿತವನ್ನು ಹಿಡಿಯುವುದಕ್ಕೆ ಸಾಧ್ಯವಾಗುತ್ತದೆಂದು ನನಗನ್ನಿಸುತ್ತದೆ. ಈ ನಮ್ಮ ಮೈಸೂರು ದೇಶ ಅಪಾರ ಶಕ್ತಿಯನ್ನು

(ಶ್ರೀ ಎಸ್. ಶಿವಪ್ಪ)

ಹೊಂದಿರತಕ್ಕಂತಹ ದೇಶ. ಇವತ್ತಿನ ದಿವಸ ವಿದ್ಯುಚ್ಛಕ್ತಿಯ ಸೌಲಭ್ಯ ಕಡಿಮೆಯಾಗಿರುವುದರಿಂದ ಮೈಸೂರು ದೇಶದಲ್ಲಿ ಕೈಗಾರಿಕೆಗಳ ಸ್ಥಾಪನೆ ಕಡಿಮೆಯಾಗಿ ಅದು ಕುಗ್ಗಿದೆ. ಈ ಬಡ್ಜೆಟ್ ನೋಡುವುದಾದರೆ 65-66ರಲ್ಲಿ ನೀವು ಸುಮಾರು 12 ಕೋಟಿ ಉತ್ಪತ್ತಿ ಬರುತ್ತದೆ ಎಂದು ಹಾಕಿಕೊಂಡಿದ್ದರೂ ಕೂಡ ಬಂದಿರತಕ್ಕದ್ದು ಹತ್ತುವರೆ ಕೋಟಿ ಮಾತ್ರ. ಇದಕ್ಕೆ ಕಾರಣ "Industrial loads had not been built as anticipated" ಎಂದು ಹೇಳುತ್ತಾರೆ. ಯಾವಾಗ ನಮ್ಮ ದೇಶದಲ್ಲಿ ದೊಡ್ಡದೊಡ್ಡ ಕೈಗಾರಿಕೆಗಳ ಸ್ಥಾಪನೆಯಾಗಬೇಕಾಗಿತ್ತೋ ಅದು ಆಗಲಿಲ್ಲ. ಇದರಿಂದಾಗಿ ನಮ್ಮಲ್ಲಿರ ತಕ್ಕ ವಿದ್ಯುಚ್ಛಕ್ತಿಯನ್ನು ನೆರೆ ರಾಜ್ಯಗಳಿಗೆ ಮಾರಾಟಮಾಡಬೇಕಾಯಿತು. ಇದಕ್ಕೋಸ್ಕರ ಇಂಟರ್ ಸ್ಟೇಟ್ ಗ್ರಿಡ್ ಆಗಿದೆ. ಅದರಿಂದ ನಮಗೆ ಯಾವ ರೀತಿಯ ಪ್ರಯೋಜನವೂ ಆಗಲಿಲ್ಲ. ಅದ್ದರಿಂದ ನಮ್ಮ ಮೈಸೂರು ದೇಶ, ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಳ್ಳತಕ್ಕಂತಹ ಶಕ್ತಿಯನ್ನು ನಿರ್ಮಾಣ ಮಾಡದೆ ಹೋದರೆ. ನಾವು ತುಂಗಭದ್ರಾದ ನೀರನ್ನು ಯಾವ ರೀತಿಯಲ್ಲಿ, ಆಂಧ್ರ ಸರ್ಕಾರದವರು ಕೇಳಿದಾಗ ಕೊಟ್ಟಿದ್ದೇವೆಯೋ, ಅದೇ ರೀತಿ ಈ ಇಂಟರ್ ಸ್ಟೇಟ್ ಗ್ರಿಡ್‌ನಿಂದ ನಮ್ಮಲ್ಲಿರ ತಕ್ಕ ವಿದ್ಯುಚ್ಛಕ್ತಿಯನ್ನು ಅವರು ನೇರವಾಗಿ ತೆಗೆದುಕೊಂಡು ಅದನ್ನು ಮುಂದೆ ಕೂಡ ಕೊಡತಕ್ಕ ಪರಿಸ್ಥಿತಿ ಬರಬಹುದು ಎಂದು ನಾನು ಇಲ್ಲಿ ಹೇಳುತ್ತೇನೆ.

ಏಕೆಂದರೆ, ನಾವು ವಿದ್ಯುಚ್ಛಕ್ತಿಯನ್ನು ಒದಗಿಸಿ ಅವರೇನಾದರೂ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಮಾಡಿದ್ದೇ ಆದರೆ, ಅವರು ನಮ್ಮನ್ನು ಈ ರೀತಿ ಕೇಳಲಿಕ್ಕೆ ಒಂದು ಹಕ್ಕನ್ನು ಮಾಡಿಕೊಟ್ಟಂತಾಗುತ್ತದೆ. ಮೊದಲು ನಮಗೆ ವಿದ್ಯುಚ್ಛಕ್ತಿಯನ್ನು ಕೊಡಿ, ಆಮೇಲೆ ಬೇಕಾದ ಕಾರ್ಖಾನೆಗಳನ್ನು ನೀವು ಸ್ಥಾಪನೆ ಮಾಡಿಕೊಳ್ಳಿ ಎಂದು ಹೇಳತಕ್ಕ ಅವಕಾಶ ಅವರಿಗಿರುತ್ತದೆ. ಆದ್ದರಿಂದ ಸರ್ಕಾರದವರು ಮೊದಲೇ ಈ ವಿಷಯದಲ್ಲಿ ಎಚ್ಚರಿಕೆ ತೆಗೆದುಕೊಳ್ಳಬೇಕು ಇಲ್ಲದಿದ್ದರೆ ಇಂಟರ್ ಸ್ಟೇಟ್ ಗ್ರಿಡ್‌ನೆಪದಲ್ಲಿ ಏನೋ ಕರಾರು ಮಾಡಿಕೊಂಡು, ಈಗ ಏನು ವಿದ್ಯುಚ್ಛಕ್ತಿ ಕೊಡುತ್ತಿದೆಯೋ ಅದನ್ನೇ ಖಾಯಂ ಆಗಿ ಕೊಡಬೇಕಾಗಿ ಬರಬಹುದು ನಾವು ಕೊಡುತ್ತಿರುವ ವಿದ್ಯುಚ್ಛಕ್ತಿಯನ್ನು ಹೆಚ್ಚಿಕೊಂಡು ಇಂತಿಂಥಾ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದ್ದೇವೆ, ಅದಕ್ಕಾಗಿ ಇಷ್ಟು ಲಕ್ಷ ಕಿಲೋವಾಟ್‌ಗಳು, ಇಷ್ಟು ಮೆಗಾವಾಟ್‌ಗಳು ಬೇಕೆಂದು ಹೇಳಿ ತಮ್ಮ ಹಕ್ಕನ್ನು ಮುಂದಿಡುವ ಸಂದರ್ಭಬರಬಹುದು. ಇದನ್ನು ಸರ್ಕಾರದವರು ಬಹಳ ಚಾಕ ಚಕ್ಯತೆಯಿಂದ, ಹಾಗೂ ದಿಟ್ಟತನದಿಂದ ಎದುರಿಸಬೇಕಾಗುತ್ತದೆ. ಇದನ್ನು ಗಮನದಲ್ಲಿಟ್ಟು ನಮ್ಮಲ್ಲಿನ ವಿದ್ಯುಚ್ಛಕ್ತಿಯನ್ನು ಇಲ್ಲೇ ಉಪಯೋಗಿಸಿಕೊಳ್ಳುವುದಕ್ಕೆ ಸರ್ವ ಸಾಹಸ ಮಾಡಿ ಹೆಚ್ಚಿಗೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವ ಕಾರ್ಯವನ್ನು ಕೈಗೊಳ್ಳಬೇಕೆಂದು ನಾನು ಹೇಳುತ್ತೇನೆ. ಅಲ್ಯೂಮಿನಿಯಂ ಫ್ಯಾಕ್ಟರಿ, ಫರ್ಟಿಲೈಸರ್ ಫ್ಯಾಕ್ಟರಿ, ಹಾಸ್ಪೇಟಿನ ಉಕ್ಕಿನ ಕಾರ್ಖಾನೆ ಮುಂತಾದುವುಗಳನ್ನು ಸ್ಥಾಪನೆ ಮಾಡಬೇಕೆಂದು ನಾವು ಹೇಳುತ್ತಲೇ ಇದ್ದೇವೆ. ಇನ್ನೂ ದೊಡ್ಡ ದೊಡ್ಡ ಕಾರ್ಖಾನೆಗಳನ್ನು ಮಾಡಬೇಕಾದ್ದು ಎಷ್ಟೋ ಇವೆ. ಅವು ಕಾರ್ಯ ರೂಪಕ್ಕೆ ಬಂದಾಗ ಈ ವಿದ್ಯುಚ್ಛಕ್ತಿಯನ್ನೆಲ್ಲಾ ನಾವೇ ಉಪಯೋಗಿಸಿಕೊಳ್ಳಬಹುದು ಈಗೇನೋ ನಮ್ಮಲ್ಲಿ ವಿದ್ಯುಚ್ಛಕ್ತಿ ಹೇರಳವಾಗಿದೆಯೆನ್ನಬಹುದು ಇದನ್ನು ಉಪಯೋಗಿಸಿಕೊಳ್ಳುವುದಕ್ಕೆ ಸರಿಯಾಗಿ, ಕೇಂದ್ರ ಸರ್ಕಾರದಿಂದ ಅನುಮತಿ ಪಡೆದು ದೊಡ್ಡ ದೊಡ್ಡ ಕಾರ್ಖಾನೆಗಳನ್ನು ಸ್ಥಾಪನೆ ಮಾಡಿದರೆ ಮಾತ್ರ ನಾವು ಇದರ ಪೂರ್ಣ ಪ್ರಯೋಜನ ಪಡೆದಂತಾಗುತ್ತದೆ. ಇಲ್ಲದಿದ್ದರೆ ಈ ವಿದ್ಯುಚ್ಛಕ್ತಿಯನ್ನೆಲ್ಲ ಬೇರೆ ಪ್ರಾಂತ್ಯಗಳಿಗೆ ಕೊಡುವ ಅವಕಾಶ ಉತ್ಪನ್ನವಾಗುತ್ತದೆ. ಕೇಂದ್ರ ಸರ್ಕಾರದವರೂ ನಮ್ಮ ವಿದ್ಯುಚ್ಛಕ್ತಿಯ ಮೇಲೆ ಕಣ್ಣಿಟ್ಟು ಅದನ್ನು ಕಿತ್ತುಕೊಳ್ಳಬಹುದೆಂದು, ಅವರು ನಮ್ಮ ಮೇಲೆ ಯೇನಾದರೂ 'ಮಾರಿಯ ಕಣ್ಣು' ಇಟ್ಟಿದ್ದಾರೋ ಎಂದು ಕೂಡ ನನಗನ್ನಿಸುತ್ತದೆ.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ಅಂಥಾದ್ದೇನೂ ಇಲ್ಲ; ತಾವು ಹಾಗೆ ಹೇಳಕೂಡದು.

ಶ್ರೀ ಎಸ್. ಶಿವಪ್ಪ.—ಬಹಳ ಸಂತೋಷ ಸ್ವಾಮಿ, ಮಾರಿಯ ಕಣ್ಣು ಆ ರೀತಿ ಬೀಳುವುದಕ್ಕೆ ಅವಕಾಶ ಬರಕೂಡದು. ವಿದ್ಯುಚ್ಛಕ್ತಿ ಹೇರಳವಾಗಿ ಇರತಕ್ಕ ಈ ದೇಶದಲ್ಲಿ, ಈ ಸೌಲಭ್ಯವನ್ನು ಉಪಯೋಸಿಕೊಂಡು ದೊಡ್ಡ ದೊಡ್ಡ ಕೈಗಾರಿಕಾ ಕಾರ್ಖಾನೆಗಳನ್ನು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ನಡೆಸುವುದು ಕೇಂದ್ರ ಸರ್ಕಾರದವರ ಮತ್ತು ರಾಜ್ಯ ಸರ್ಕಾರದವರ ಕರ್ತವ್ಯವೆಂದು ನಾನು ಹೇಳುತ್ತೇನೆ.

ಆಮೇಲೆ, ವಿದ್ಯುಚ್ಛಕ್ತಿಯನ್ನು ನಮ್ಮ ದೇಶದಲ್ಲಿ ವ್ಯವಸಾಯದ ಬಾಬಿನಲ್ಲಿ ಎಷ್ಟರಮಟ್ಟಿಗೆ ಉಪಯೋಗಿಸಬೇಕೋ ಅಷ್ಟರಮಟ್ಟಿಗೆ ಉಪಯೋಗಿಸುತ್ತಿಲ್ಲವೆಂದು ನಾನು ವಿಷಾದದಿಂದ ಹೇಳ

ಬೇಕಾಗಿದೆ. ಈಗ ನಮಗೆ ಅಗತ್ಯವಾಗಿ ಬೇಕಾಗಿರತಕ್ಕ ಅನ್ನದ ಉತ್ಪನ್ನದ ಕೇಂದ್ರಗಳಲ್ಲಿ ನಾವು ಎಷ್ಟು ಉಪಯೋಗಿಸುತ್ತಿದ್ದೇವೆ ಎಂಬುದನ್ನು ತಾವು ಸ್ವಲ್ಪ ಯೋಚನೆ ಮಾಡಿ. ಮಾನ್ಯ ಸದಸ್ಯರುಗಳು ಈ ಬಗ್ಗೆ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ನನ್ನ ಸಲಹೆಯೇನೆಂದರೆ—ಈಗ ನಮ್ಮ ದೇಶದಲ್ಲಿರತಕ್ಕ ನೀರು ಎಲ್ಲಾ ಉಪಯೋಗವಾಗುತ್ತಿಲ್ಲ. ಅನೇಕ ಕಡೆಗಳಲ್ಲಿ ನೀರು ವ್ಯಥಾ ಸಮುದ್ರಕ್ಕೆ ಹೋಗುತ್ತಿದೆ. ನಮ್ಮಲ್ಲಿರುವ ನದಿಗಳ ನೀರಿನ ಪೂರ್ತಿ ಪ್ರಯೋಜನ ಪಡೆಯುತ್ತಿಲ್ಲ. ಇದನ್ನು ಉಪಯೋಗಿಸುಕೊಳ್ಳುವಂತೆ ಅಲ್ಲಲ್ಲೇ ಪಂಪುಸೆಟ್ಟುಗಳನ್ನು ಹಾಕಿದರೆ ಏನಿಲ್ಲವೆಂದರೂ ಒಂದು ಲಕ್ಷ ಟನ್ ಹೆಚ್ಚಿಗೆ ಆಹಾರವನ್ನು ನಾವು ಬೆಳೆಯುವುದಕ್ಕೆ ಅವಕಾಶವಿದೆ. ನದಿಗಳ ಪಾತ್ರಗಳಲ್ಲಿ ಪಂಪುಸೆಟ್ಟುಗಳನ್ನು ಹಾಕಿ, ಲಿಫ್ಟ್ ಇರಿಗೇಷನ್ ಸ್ಕೀಮನ್ನು ಜಾರಿಗೆ ತರಬೇಕೆಂದು ನಾವು ಎಷ್ಟೋ ಸಲ ಹೇಳಿದ್ದೇವೆ. ಇವತ್ತಿವರೆಗೂ ಈ ವಿಷಯದಲ್ಲಿ ತಾವು ಏನೂ ಮಾಡಿಲ್ಲ. ಹೇರಳವಾಗಿರುವ ವಿದ್ಯುಚ್ಛಕ್ತಿಯನ್ನು ನಾವು ಉಪಯೋಗಿಸಿಕೊಳ್ಳುವುದನ್ನು ನೋಡದೆ ಹೊರಗೆ ಕೊಡುತ್ತಿದ್ದೇವೆ. ಇದನ್ನು ಮಾಡಿದ್ದರೆ ನಮ್ಮಲ್ಲಿ ಆಹಾರದ ಕೊರತೆಯಿಲ್ಲದಿರುತ್ತಿತ್ತು ಎಂದು ನಾನು ಕೇಳುತ್ತೇನೆ. ಈಗಲಾದರೂ ಆದಷ್ಟು ಬೇಗ ಈ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಳ್ಳುವುದಕ್ಕೆ ಬೇಕಾದ ಸಾಮಗ್ರಿಗಳನ್ನು ಒದಗಿಸಿಕೊಂಡು ಪಂಪ್‌ಸೆಟ್ಟುಗಳನ್ನು ಹೆಚ್ಚು ಹೆಚ್ಚಿಗೆ ಆಹಾರದ ಉತ್ಪನ್ನದ ಕೇಂದ್ರಗಳಲ್ಲಿ ಒದಗಿಸಕೊಡಬೇಕೆಂದು ಹೇಳುತ್ತೇನೆ.

ಈ ದೃಷ್ಟಿಯಲ್ಲಿ ನೀವು ಎಷ್ಟರಮಟ್ಟಿಗೆ ಯೋಜನೋನ್ಮುಖರಾಗಿದ್ದೀರೆಂದು ನೋಡುವುದಾದರೆ,—ಈ ಹೊತ್ತು ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಒಂದು ಲಕ್ಷ ಪಂಪುಗಳನ್ನು ಹಾಕಬೇಕೆಂದು ಒಂದು ಅಂದಾಜು ಇಟ್ಟುಕೊಂಡಿರುವುದಾಗಿ ತಿಳಿಸಿದ್ದೀರಿ. ಒಂದು ಲಕ್ಷ ಏನೂ ಸಾಲದು. 5 ಲಕ್ಷ ಪಂಪುಸೆಟ್ಟುಗಳನ್ನು ಮೈಸೂರು ದೇಶದಲ್ಲಿ ಹಾಕಬಹುದಾಗಿದೆ. ಒಂದೊಂದು ಜಿಲ್ಲೆಗೆ ಒಂದು-ಎರಡು ಸಾವಿರ ಕೊಡಬೇಕೆಂದು ನೀವು ಹೇಳಿರುವುದು ಬಹಳ ಕಡಿಮೆ. 10,000 ಪಂಪುಗಳನ್ನು ಹಾಕಿದರೆ, ಏನಾದರೂ ರೈತರಿಗೆ ಅನುಕೂಲ ಮಾಡಿದಂತಾಗುತ್ತದೆ, ಅಷ್ಟೆ. ಆಗಲೇ ತಮಗೆ 10,000 ಟನ್‌ಗಳಷ್ಟು ಧಾನ್ಯ ಹೆಚ್ಚಿಗೆ ದೊರಕೀತು. ಒಂದು ಪಂಪುಸೆಟ್ಟಿಗೆ ಎರಡು ಟನ್ ಧಾನ್ಯವನ್ನು ಧಾರಾಳವಾಗಿ ಬೆಳೆಯಬಹುದು. ಈ ದೃಷ್ಟಿಯಿಂದ 5 ಲಕ್ಷ ಪಂಪುಸೆಟ್ಟುಗಳನ್ನು ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೊಡುವ ಯೋಜನೆ ಮಾಡಿದ್ದಾದರೆ ತಾವು ಕಡೆಯ ಪಕ್ಷ 5 ಲಕ್ಷ ಟನ್ ಆದರೂ ಹೆಚ್ಚಿಗೆ ಆಹಾರ ಬೆಳೆದಂತಾಗುತ್ತದೆ. ಇದಕ್ಕೆ ತಾವು ಪ್ರಥಮ ಗಮನ ಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಇತರೇ ಅಂದಾಜುಗಳನ್ನು ನೋಡುವುದಾದರೆ, ಈ ಹೊತ್ತು ತಾವು ವರ್ಷಕ್ಕೆ 775 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವ ಅಂದಾಜಿದೆಯೆಂದು ಈ ಬಜೆಟ್ಟಿನಲ್ಲಿ ಸೂಚಿಸಿದ್ದೀರಿ. ಇದಕ್ಕೆ ದುಡ್ಡು ಒದಗಿಸಿಕೊಡುವ ರೀತಿಯಾದರೂ ಸಾಲದ ರೂಪದಲ್ಲಿ! ಸರ್ಕಾರದಿಂದ ತೆಗೆದ ಸಾಲದಿಂದ 100 ಲಕ್ಷ ಲೈಫ್ ಇನ್‌ಷೂರೆನ್ಸ್ ಕಾರ್ಪೊರೇಷನ್ನಿನಿಂದ 300 ಲಕ್ಷ, withdrawal of stores ನಿಂದ 145 ಲಕ್ಷ, ಡಿಪ್ರಿಸಿಯೇಷನ್ ರಿಸರ್ವ್‌ನಿಂದ 150 ಲಕ್ಷ, ಕ್ಯಾಪಿಟಲ್ ಅಸೆಟ್ಸ್‌ನಿಂದ 70 ಲಕ್ಷ—ಹೀಗೆ 7¾ ಕೋಟಿ ರೂಪಾಯಿಗಳನ್ನು 1966 ರೂಪಾಯಿಗಳನ್ನು ಒದಗಿಸುವ ಏರ್ಪಾಡು ಯೋಚಿಸಿದ್ದೀರಿ. ಈ ಹೊತ್ತು ವಿದ್ಯುಚ್ಛಕ್ತಿಯ ಇಲಾಖೆಯು ತನ್ನ ಕಾಲ ಮೇಲೆ ತಾನು ನಿಲ್ಲುವ ಶಕ್ತಿ ಪಡೆಯಬೇಕೆಂದು ನಾವು ಆಶಿಸುತ್ತೇವೆ. ತಾವೂ ಕೂಡ ಒಂದು ಕಡೆ ಇದನ್ನೇ ಹೇಳಿದ್ದೀರಿ. ಸರ್ಕಾರದವರು ಇನ್ನು ಮೇಲೆ ಇದಕ್ಕೆ ಹಣ ಒದಗಿಸಿಕೊಡುವುದಿಲ್ಲವೆಂದು ಹೇಳಿದ್ದಾರೆ. ಇದು ಒಳ್ಳೆಯ ಸಂಪ್ರದಾಯ, ನಿಜ. ವಿದ್ಯುಚ್ಛಕ್ತಿ ಮಂಡಲಿಯು ತನ್ನ ಕಾಲ ಮೇಲೆ ನಿಂತು ಸ್ವತಂತ್ರವಾಗಿ ಮುಂದುವರಿಸಿಕೊಂಡು ಹೋಗುವ ಹಾಗೆ ಮಾಡಬೇಕೆಂದು ಹೇಳುತ್ತೇನೆ. ಈ ಹೊತ್ತು ನೋಡಿದರೆ, ಸರ್ಕಾರದವರಲ್ಲಿ ಶರಾವತಿ, ಭದ್ರಾ ಪ್ರಾಜೆಕ್ಟುಗಳನ್ನೊಳಗೊಂಡ 69.6 ಕೋಟಿ ರೂಪಾಯಿಗಳ ಆಸ್ತಿಯನ್ನು ಬೋರ್ಡಿಗೆ ಕೊಟ್ಟ ಮೇಲೆಯೂ 106 ಕೋಟಿ ರೂಪಾಯಿಗಳ ಆಸ್ತಿಯಿದೆ. ಹೀಗೆ ಸುಮಾರು 200 ಕೋಟಿ ರೂಪಾಯಿಗಳಷ್ಟು ಆಸ್ತಿ ಹೊಂದಿರುವ ಈ ಇಲಾಖೆ ತನ್ನ ಕಾಲ ಮೇಲೆ ನಿಲ್ಲಲು ಬೇಕಾದಷ್ಟು ಶಕ್ತಿಯನ್ನು ಹೊಂದಿದೆ. ಅದು ಸಂಪಾದನೆ ಮಾಡುವ ಹಣದಿಂದಲೇ ಬೇಕಾದಷ್ಟು ಹೊಸ ಯೋಜನೆಗಳನ್ನು ಮಾಡುವ ಅವಕಾಶವಿರುವುದರಿಂದ ಈ ರೀತಿ ಸಾಲ ಮಾಡದೆ ತನ್ನ ಕಾರ್ಯಯೋಜನೆಯನ್ನು ಮುಂದುವರಿಸಬೇಕೆಂದು ಹೇಳುತ್ತೇನೆ.

ಈ ಬಜೆಟ್ಟನ್ನು ನೋಡಿದರೆ, ಇಲ್ಲಿ ರೂರಲ್ ಎಲೆಕ್ಟ್ರಿಫಿಕೇಷನ್ನಿಗಾಗಿ 1965-66ರಲ್ಲಿ 150 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿರುವಲ್ಲಿ 1966-67ರಲ್ಲಿ ಕೇವಲ 80 ಲಕ್ಷ ರೂಪಾಯಿಗಳನ್ನು ಒದಗಿಸಿಕೊಳ್ಳುವ ಯೋಚನೆ ಮಾಡಿದ್ದೀರಿ. ಇದೇಕೆ? ಹಳ್ಳಿಗಳ ಕಡೆ ಹೆಚ್ಚು ಹೆಚ್ಚಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡಬೇಕೆಂಬ ಧೋರಣೆ ತಮಗಿರುವಾಗ ತಾವು ಈ ರೀತಿ ಕೇವಲ 80 ಲಕ್ಷ ರೂಪಾಯಿಗಳನ್ನು 1966-67ರಲ್ಲಿ ಖರ್ಚು ಮಾಡುತ್ತೇವೆಂದರೆ, ತಮ್ಮ ನೀತಿಗೆ, ವ್ಯತಿರಿಕ್ತವಾಗಿ

(ಶ್ರೀ ಎಸ್. ಶಿವಪ್ಪ)

ಹೋದಂತಾಗುತ್ತದೆ. ಇನ್ನೂ ಸಹಸ್ರಾರು ಹಳ್ಳಿಗಳಿಗೆ ದೀಪಕ್ಕೆ ವಿದ್ಯುಚ್ಛಕ್ತಿ ಕೊಡಬೇಕಾಗಿದೆ! ಹೀಗಿರುವಲ್ಲಿ ನಿಮ್ಮ ನೀತಿಯೇನೆಂಬುದೇ ನನಗೆ ಅರ್ಥವಾಗುತ್ತಿಲ್ಲ. ಅಂತೆಯೇ, ಐ. ಪಿ. ಸೆಟ್ಟುಗಳಿಗಾಗಿ 1965-66 ರಲ್ಲಿ 225 ಲಕ್ಷ ರೂಪಾಯಿಗಳನ್ನು ಒದಗಿಸಿ ಖರ್ಚು ಮಾಡಿರುವಲ್ಲಿ, 1966-67ಕ್ಕೆ 27 ಲಕ್ಷ ರೂಪಾಯಿಗಳನ್ನು ಕಡಿಮೆ ಕೇಳಿದ್ದೀರಿ. ಹೀಗೆ ಕಡಮೆ ಒದಗಿಸಿಕೊಂಡು ಹೆಚ್ಚಿಗೆ ಪಂಪ್ ಸೆಟ್ಟುಗಳನ್ನು ಹೇಗೆ ತಾನೆ ತಾವು ಕೊಡುತ್ತೀರಿ? ಇದನ್ನು ಜಾಸ್ತಿ ಮಾಡಿಕೊಂಡ ಹೊರತು ತಮ್ಮ ಉದ್ದೇಶ ನೆರವೇರುವುದಿಲ್ಲವೆಂದು ಹೇಳುತ್ತೇನೆ.

ಆ ಮೇಲೆ, Capital outlay on Electricity Schemes ವಿಷಯ ನೋಡಿದರೂ 1965-66ರಲ್ಲಿ ತಾವು 8 ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಿರುವಲ್ಲಿ, 1966-67ರಲ್ಲಿ ಕೇವಲ 7 ಕೋಟಿ ರೂಪಾಯಿಗಳನ್ನು ಮಾತ್ರ ಅಂದಾಜು ಮಾಡಿಕೊಂಡಿದ್ದೀರಿ. ಸ್ಕೀಮುಗಳನ್ನು ಬಡಾವಣೆ ಮಾಡುತ್ತೇವೆಂದು ಹೇಳುವಾಗ ಇದಕ್ಕೆ ಒದಗಿಸಬೇಕಾದ ಹಣ ಹೇಗೆ ಕಡಮೆಯಾಗುತ್ತದೆ? ಇನ್ನೂ ಎರಡು ಮೂರು ಶರಾವತಿ ಯೂನಿಟ್ಟುಗಳನ್ನು ಕಮಿಷನ್ ಮಾಡಬೇಕಾಗಿದೆ. ಇನ್ನೂ ಹೆಚ್ಚಿನ ಉತ್ಪಾದನೆಯಾಗಬೇಕಾಗಿದೆ. ಇದಕ್ಕಾಗಿ ಟ್ರಾನ್ಸ್‌ಮಿಷನ್ ಲೈನ್ ಬೇಕಾಗುತ್ತದೆ. ಆದುದರಿಂದ ಕ್ಯಾಪಿಟಲ್ ಔಟ್ ಲೇ ಕಡಿಮೆ ಮಾಡುವುದರಿಂದ ಮುಂದೆ ಬಹುಶಃ ಉತ್ಪತ್ತಿ ಹೆಚ್ಚಿಸುವುದಕ್ಕೆ ತೊಂದರೆಯಾಗುತ್ತದೆ. ಆದಕಾರಣ ಇದಕ್ಕಾಗಿ ಹಣ ಕಡಿಮೆ ಮಾಡಬಾರದು; ಮತ್ತು ಎಂಥ ಕಷ್ಟ ಬಂದರೂ ಈ ಕೆಲಸ ಮುಂದುವರಿಸುವುದನ್ನು ಮಾಡಬೇಕು ಎಂದು ಹೇಳುತ್ತೇನೆ.

3-00 P.M.

ಇನ್ನು ಶರಾವತಿ ಯೋಜನೆಯ ಯೂನಿಟ್ಟುಗಳಿಗೆ ಕೇಂದ್ರ ಸರಕಾರ ಕೊಡತಕ್ಕಂಥ ಹಣ ನಿಲ್ಲಿಸಿದ್ದಾರೆ ಅಥವಾ ನಿಲ್ಲಿಸುತ್ತಾರೆ ಎಂಬ ಒಂದು ವರದಿ ಪತ್ರಿಕೆಯಲ್ಲಿ ಬಂದಿದೆ. ಆದರೆ ಅಧಿಕೃತವಾಗಿ ಸರಕಾರಕ್ಕೆ ಏನು ಸಮಾಚಾರ ಬಂದಿದೆ ಅದು ನನಗೆ ಗೊತ್ತಿಲ್ಲ. ಈ ಕೆಲಸ ತಡೆ ಹಿಡಿದರೆ ದೇಶದಲ್ಲಿ ವಿದ್ಯುತ್‌ಶಕ್ತಿ ದೊರೆಯುವುದು ಕಷ್ಟವಾಗುತ್ತದೆ.

Sri S. NIJALINGAPPA.—I may at this stage clear any misapprehension that may have arisen. We have been pressing the Central Government, and the Central Finance Ministry that they may allow us to go on with the third stage of Sharavathi. We have discussed wirh them. Why they have their own difficulties, we have explained the urgency, and they have kept it open. I will discuss it again when I go to Delhi next time.

Mr. DEPUTY SPEAKER.—We will now rise for tea and meet again after half-an-hour.

The House adjourned for Recess Three Minutes past Three of the Clock and reassembled at Thirty-four Minutes past Three of the Clock.

[MR. SPEAKER in the Chair]

ಶ್ರೀ ಎಸ್. ಶಿವಪ್ಪ.—ಮಾನ್ಯ ಸಭಾಪತಿಗಳೇ, ಶರಾವತಿಯ ಮೂರನೇ ಹಂತದಲ್ಲಿ ಯೂನಿಟ್ಟುಗಳ ಕಮಿಷನ್ ಮಾಡುವುದಕ್ಕೆ ಕೇಂದ್ರ ಸರಕಾರ ಹಣ ಕೊಡತಕ್ಕಂಥಾ ಅನುಮಾನದ ಬಗ್ಗೆ ಮುಖ್ಯ ಮಂತ್ರಿಗಳು ವಿವರಣೆ ಕೊಟ್ಟು ಈಗ ತಾನೆ ಹೇಳಿದರು. ಇನ್ನೂ ಅಖೈರಾಗಿ ತೀರ್ಮಾನ ತೆಗೆದುಕೊಂಡಿಲ್ಲ. ಕೇಂದ್ರ ಸರಕಾರ ಓಪನ್ ಮೈಂಡ್ ಆಗಿ ಇದ್ದಾರೆ ಎಂದು ಹೇಳಿದರು. ಇದೇ ರೀತಿ ಕೇಂದ್ರದವರು ಅನೇಕ ಸಲ ಬಿಚ್ಚುಮನಸ್ಸಿನವರು ಆಗಿದ್ದೇವೆ ಎಂದು ಹೇಳಿದ್ದಾರೆ. ಆದರೆ ಆ

ರೀತಿ ನಡವಳಿಕೆ ಮಾತ್ರ ಕಂಡುಬಂದಿಲ್ಲ. ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು. ರಾಜ್ಯ ಸರಕಾರದವರು ಕೇಂದ್ರ ಸರಕಾರದ ಮೇಲೆ ಕಟ್ಟುನಿಟ್ಟಾಗಿ ಒತ್ತಾಯ ತಂದು ಶರಾವತಿಯ ಬಗ್ಗೆ ಅಖೈರಾಗಿ ಒಂದು ನಿರ್ದಿಷ್ಟ ತೀರ್ಮಾನ ತೆಗೆದುಕೊಳ್ಳುವಂತ ಮಾಡಬೇಕು. ಶರಾವತಿ ಯೋಜನೆಗೆ ಬೇಕಾದಂಥ ಪರರಾಷ್ಟ್ರದಿಂದ ಬರತಕ್ಕ ಸಾಮಗ್ರಿ ಒದಗಿಸುವುದಕ್ಕೆ ಅದ್ಯತೆ ಪಡೆಯಬೇಕಾದುದು ಮುಖ್ಯ. ಬಹುಶಃ ಡೀ-ವ್ಯಾಲ್ಯುಯೇಶನ್ ಮೂಲಕ ಪರದೇಶದಿಂದ ಬರತಕ್ಕಂಥ ಟ್ರಾನ್ಸ್‌ಮಿಶನ್ ಲೈನ್‌ಗೆ ಬೇಕಾದ ಮತ್ತು ಇತರ ಸಾಮಾನುಗಳ ಬಗ್ಗೆ ಅಂದಾಜಿನ ವೆಚ್ಚ ಜಾಸ್ತಿಯಾಗಬಹುದು. ಇದನ್ನು ಕೂಡ ಸರಕಾರ ಪ್ರಮುಖ್ಯವಾಗಿ ಯೋಚನೆ ಮಾಡಬೇಕು, ಶರಾವತಿ ಯೋಜನೆ ಬರೀ ಮೈಸೂರು ರಾಜ್ಯಕ್ಕೆ ಸಂಬಂಧಪಟ್ಟ ಯೋಜನೆಯಲ್ಲ. ಇದು ನಮ್ಮ ರಾಷ್ಟ್ರದ ಯೋಜನೆ, ರಾಷ್ಟ್ರಕ್ಕೆ ಉತ್ಪತ್ತಿ ತರತಕ್ಕಂಥ ಯೋಜನೆಯಾಗಿದೆ. ಆದುದರಿಂದ ಇದಕ್ಕೆ ಬೇಕಾದ ಸಾಮಾನುಗಳನ್ನು ಒದಗಿಸುವುದಕ್ಕೆ ಅದ್ಯತೆ ಕೊಡಬೇಕಾದುದು ಪ್ರಾಮುಖ್ಯವಾದ ಕಾರ್ಯವಾಗಿದೆ. ಇದರಲ್ಲಿ ಏನಾದರೂ ಅನುಮಾನದ ದೃಷ್ಟಿ ಕಂಡು ಬಂದರೆ ಕೂಡಲೇ ಅದನ್ನು ಪ್ರತಿಭಟಿಸಬೇಕು. ನಮಗೆ ಬರಬೇಕಾದ ಎಲ್ಲಾ ಸಹಾಯ ತೆಗೆದುಕೊಳ್ಳಬೇಕು. ಇದು ಬರಿ ಆಶ್ವಾಸನದಿಂದ ಒಳ್ಳೆಯ ಮಾತುಗಳಿಂದ ಆಗತಕ್ಕಂಥ ಕೆಲಸವಲ್ಲ. ಶರಾವತಿ ಯೋಜನೆ ಕೆಲಸ ನಿಲ್ಲಿಸುವುದು ಸಾಧ್ಯವಿಲ್ಲ ಎಂದು ಅವರಿಗೆ ಸ್ಪಷ್ಟಪಡಿಸಬೇಕು ಎಂದು ಈ ಮೂಲಕ ಸರಕಾರಕ್ಕೆ ಹೇಳುತ್ತೇನೆ.

ಇನ್ನು ಇಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟಿನಲ್ಲಿ ಕೆಲಸಮಾಡತಕ್ಕಂಥ ಕೆಲಸಗಾರರ ಬಗ್ಗೆ ಸರ್ವಿಸ್ ರೆಗ್ಯುಲೇಷನ್ಸ್, ರಿಕ್ರೂಟ್‌ಮೆಂಟ್ ರೂಲ್ಸ್ ವಿಚಾರದಲ್ಲಿ ಒಂದು ಸರಿಯಾದ ವ್ಯವಸ್ಥಿತ ರೀತಿಯಲ್ಲಿ ಇಲ್ಲ. ಇದು ಶಾಸ್ತ್ರೀಯವಾದ ಆಧಾರದ ಮೇಲೆ ಆಗಬೇಕು. ಇಂದು ಜೀವನದ ವೆಚ್ಚ ಜಾಸ್ತಿಯಾಗಿದೆ. ಕೊಡತಕ್ಕಂಥ ವೇತನ ಸರಿಯಾಗಿ ಇರಬೇಕು. ಇದರ ಬಗ್ಗೆ ಚಳವಳಿ ರೂಪದಲ್ಲಿ ಕೆಲಸ ಕಾರ್ಯಗಳು ನಡೆದಿವೆ. ಕನಿಷ್ಟ ವೇತನ ಕೊಡುವುದನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಮಾಡಬೇಕು. ಕೆಲಸಕ್ಕೆ ಸೇರಿಸಿಕೊಂಡ ಮೇಲೆ ಮೂರು ನಾಲ್ಕು ತಿಂಗಳಿನಲ್ಲಿ ಅವರನ್ನು ಓಡಿಸತಕ್ಕಂಥಾದ್ದು ಇರಬಾರದು. ಕೆಲಸದ ಬಗ್ಗೆ ಒಂದು ರೀತಿಯ ಸೆಕ್ಯೂರಿಟಿ ಇರಬೇಕು. ಪರ್ಮನೆಂಟ್ ರಿಕ್ರೂಟ್‌ಮೆಂಟ್ ರೂಲ್ಸ್ ತಯಾರ್ಮಾಡಿ ಕೆಲಸಕ್ಕೆ ತೆಗೆದುಕೊಂಡವರನ್ನು ಪರ್ಮನೆಂಟ್ ಬೇಸಿಸ್ ಮೇಲೆ ಅಬ್ಸಾರ್ಬ್ ಮಾಡತಕ್ಕಂಥ ವ್ಯವಸ್ಥೆ ಇರಬೇಕು. ಕೆಲಸದ ಬಗ್ಗೆ ಸೆಕ್ಯೂರಿಟಿ ಇದೆ ಎಂಬ ಭಾವನೆ ಬಂದರೆ ಅವರು ಚೆನ್ನಾಗಿ ಕೆಲಸ ಮಾಡುವುದಕ್ಕೆ ಒಳ್ಳೇ ವಾತಾವರಣ ಕಲ್ಪಿಸಿಕೊಟ್ಟ ಹಾಗೆ ಆಗುತ್ತದೆ. ಇದನ್ನು ಮಾಡಬೇಕು ಎಂದು ಹೇಳುತ್ತೇನೆ.

ಮೈಸೂರು ದೇಶದಲ್ಲಿ ವಿದ್ಯುತ್ ಪೂರೈಕೆ ರಾಷ್ಟ್ರೀಕರಣವಾಗಿದೆ. ಆದರೆ ಉತ್ತರ ಕರ್ನಾಟಕ ಪ್ರದೇಶದಲ್ಲಿ ಅಲ್ಲಲ್ಲಿ ಕೆಲವು ಪಾಕೆಟ್ಸ್ ಬಂಡವಾಳಶಾಹಿಯವರ ಕೈಯಲ್ಲಿ ಇನ್ನೂ ಇದೆ. ವಿದ್ಯುತ್ ಶಕ್ತಿ ಮಂಡಳಿಯು ಕೂಡಲೆ ಇದನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ರಾಷ್ಟ್ರೀಕರಣದ ಕೆಲಸವು ಪೂರ್ಣವಾಗಿ ಆಗಬೇಕು. ಯಾಕೆಂದರೆ, ಅಂಥದಲ್ಲಿ ಅವರು ಹೆಚ್ಚಿನ ದರದಲ್ಲ ವಿದ್ಯುತ್ ಶಕ್ತಿ ಮಾರಾಟ ಮಾಡುತ್ತಿದ್ದಾರೆ. ಇಂಥ ತಾರತಮ್ಯ ಇರಬಾರದು. ಎಲ್ಲಾ ಕಡೆಗೂ ಒಂದೇ ರೀತಿಯ ದರ ಇರಬೇಕು. ಇದನ್ನು ಕೂಡಲೇ ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ವಿದ್ಯುತ್‌ಶಕ್ತಿ ಮಂಡಲಿಯ ರಿಪೋರ್ಟಿನಲ್ಲಿ ಟ್ಯಾರಿಫ್ ಕಮಿಟಿ ರಿಪೋರ್ಟ್ ಕೊಟ್ಟಿದ್ದಾರೆ. ಈಗ ಅದು ನಮ್ಮ ಮುಂದೆ ಇಲ್ಲ. ಟ್ಯಾರಿಫ್ ಕಮಿಟಿ ರಿಪೋರ್ಟ್ ಆಧಾರದ ಮೇಲೆ ತೀರ್ಮಾನ ತೆಗೆದುಕೊಂಡಿದ್ದಾರೆ. ಇದರಿಂದ ವಿದ್ಯುತ್ ಶಕ್ತಿ ಉಪಯೋಗ ಮಾಡತಕ್ಕಂಥವರ ಮೇಲೆ ಹೊರೆ ಜಾಸ್ತಿಯಾಗುತ್ತದೆ. ಇದನ್ನು ನಾವು ನೋಡಬೇಕಾಗಿದೆ. ಇಂದು ಎಲ್ಲಾ ವಸ್ತುಗಳ ಬೆಲೆ ಜಾಸ್ತಿಯಾಗಿದೆ. ವಿದ್ಯುತ್ ಶಕ್ತಿ ಹೊರೆ ಕೂಡ ಜಾಸ್ತಿಯಾದರೆ ಅದು ದುಬಾರಿಯಾಗುತ್ತದೆ. ಇದನ್ನು ಪರಿಹಾರ ಮಾಡಬೇಕಾದುದು ಕರ್ತವ್ಯ. ಸಾಮಾನ್ಯ ಜನಕ್ಕೆ ಕಷ್ಟ ಪರಿಸ್ಥಿತಿ ಉಂಟಾಗಬಾರದು. ಇಂದು ಪ್ರತಿಯೊಬ್ಬರ ಮನೆಯಲ್ಲಿ ಅಡಿಗೆ ಮಾಡುವುದಕ್ಕೆ ಸ್ನಾನಕ್ಕೆ ನೀರು ಕಾಸುವುದಕ್ಕೆ ವಿದ್ಯುತ್ ಶಕ್ತಿ ಉಪಯೋಗಿಸುತ್ತಾರೆ. ವಿದ್ಯುತ್ ಶಕ್ತಿ ಬಳಕೆ ಮಾಡುವ ದರ ಸಾಮಾನ್ಯ ಜನಕ್ಕೆ ಎಟಕುವಂತೆ ಇರಬೇಕು. ಈ ರೀತಿ ಒಂದು ದರ ನಿಗದಿ ಮಾಡಿದರೆ ಸಾಮಾನ್ಯ ಜನಕ್ಕೆ ಅನುಕೂಲವಾಗುತ್ತದೆ. ದುಬಾರಿ ದರ ಆದರೆ ಶ್ರೀಮಂತರು ಮಾತ್ರ ಉಪಯೋಗಿಸುತ್ತಾರೆ. ಸಾಮಾನ್ಯವಾಗಿ ಎಲ್ಲರಿಗೂ ಕೂಡ ಕೈಗೆ ಸಿಕ್ಕುವಂತೆ ಅಂಥ ಮಟ್ಟದಲ್ಲಿ ದರ ಇರಬೇಕಾದುದು ಪ್ರಾಮುಖ್ಯವಾದುದು.

ವಿದ್ಯುಚ್ಛಕ್ತಿಯ ದರ ಏಕೆ ಹೆಚ್ಚಾಯಿತು ಎನ್ನುವುದನ್ನು ವಿಚಾರ ಮಾಡುವಾಗ ನಾನು ಮೊದಲೇ ಹೇಳಿದ್ದೇ ಇದಕ್ಕೆ ಕಾರಣ. ಇವತ್ತು ವಿದ್ಯುಚ್ಛಕ್ತಿ ಮಂಡಲಿಯ ಅಧೀನದಲ್ಲಿ ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರಗಳಿಲ್ಲ. ಅವು ಸರ್ಕಾರದ ಕೈಯಲ್ಲಿವೆ. ಶರಾವತಿ ಮತ್ತು ಇತರ ದೊಡ್ಡ ದೊಡ್ಡ ಕಾಮಗಾರಿಗಳ ಬಗ್ಗೆ ಎಷ್ಟೋ ದೊಡ್ಡ ಅಪಾದನೆಗಳು ಬಂದಾಗ್ಯೂ ಕೂಡ ಈ ಸರ್ಕಾರ

(ಶ್ರೀ ಎಸ್. ಶಿವಪ್ಪ)

ಅವುಗಳ ವಿಷಯದಲ್ಲಿ ಏನೂ ವಿಚಾರಣೆಯನ್ನು ಮಾಡಿಲ್ಲ. ಸರ್ಕಾರದವರು ಇನ್ನೂ ದೊಡ್ಡ ದೊಡ್ಡ ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರಗಳ ನಿರ್ಮಾಣವನ್ನು ಕೈಗೊಳ್ಳಬೇಕಾಗಿದೆ. ಮೈಸೂರು ದೇಶ ಭಾರತ ರಾಷ್ಟ್ರದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪಾದನ ಮಾಡುವುದರಲ್ಲಿ ಪ್ರಥಮ ಸ್ಥಾನವನ್ನು ಹೊಂದುವ ಅವಕಾಶವಿದೆ. ಏಕೆಂದರೆ, ಜಲವಿದ್ಯುಚ್ಛಕ್ತಿ ನಮ್ಮ ದೇಶದಲ್ಲಿವೆ. ಸರ್ಕಾರದವರು ದಿಟ್ಟತನದಿಂದ, ಕಟ್ಟುನಿಟ್ಟಾಗಿ ಶರಾವತಿಯಲ್ಲಿ ನಡೆದುವೆಂದು ಹೇಳಲಾಗಿರುವ ಅಪಾದನೆಗಳ ಬಗ್ಗೆ ವಿಚಾರಣೆಗೆ ಗುರಿಪಡಿಸಿ ತಪ್ಪಿಗೆ ಗುರಿಯಾದವರು ಯಾರೇ ಆಗಿರಲಿ ಅವರಿಗೆ ಶಿಕ್ಷೆ ಮಾಡಿದರೆ ಮುಂದೆ ಯಾವುದೇ ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರದ ಕೆಲಸವನ್ನು ತೆಗೆದುಕೊಂಡರೂ ಕೂಡ ಅವು ಮಿತವ್ಯಯದಲ್ಲಿ ಮುಂದುವರಿಯುವುದಕ್ಕೆ ಅವಕಾಶವಾಗುತ್ತದೆ. ಈ ಮಾತನ್ನು ಸರ್ಕಾರದವರಿಗೆ ಒತ್ತಿ ಒತ್ತಿ ಹೇಳಿ ವಿದ್ಯುಚ್ಛಕ್ತಿ ಮಂಡಲಿಯು ವಿದ್ಯುತ್ತನ್ನು ಒಳ್ಳೆಯ ದರದಲ್ಲಿ ಹಂಚುವ ಕೆಲಸವನ್ನು ಸರ್ಕಾರ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎ. ಕೃಷ್ಣಶೆಟ್ಟಿ (ಮಂಗಳೂರು-2).—ಪ್ರಿಯ ಸಭಾಪತಿಗಳೇ, ಈ ವಿದ್ಯುಚ್ಛಕ್ತಿಯ ವರದಿಯ ಮೇಲೆ ಮತ್ತು ಆಯವ್ಯಯ ಪಟ್ಟಿಯ ಮೇಲೆ ಮಾತನಾಡುವಾಗ ಒಂದೆರಡು ವಿಷಯಗಳ ಮಟ್ಟಿಗೆ ಮಾತ್ರ ನನ್ನ ಮಾತನ್ನು ಸೀಮಿತಗೊಳಿಸಿ ಇಲ್ಲಿ ಮಾತನಾಡಲು ಇಚ್ಛಿಸುತ್ತೇವೆ. ಈಗ ಈ ವರದಿಯನ್ನು ಆಯವ್ಯಯ ಪಟ್ಟಿಯು ಒಟ್ಟಿಗೆ ಇಡುವಾಗ, ಬಹಳ ಸಂತೋಷ ಪಟ್ಟು ಈ ವರದಿಯನ್ನು ನಾನು ಇಲ್ಲಿ ನಿಮ್ಮ ಮುಂದೆ ಇಡುತ್ತೇನೆಂದು ಹೇಳಿದ್ದಾರೆ. ಅದೇ ಹೊತ್ತಿಗೆ ಈ ವಿದ್ಯುಚ್ಛಕ್ತಿ ಕೇಂದ್ರಗಳು ಮತ್ತು ಜನರೇಟಿಂಗ್ ಸ್ಟೇಷನ್ಸ್ ರಾಜ್ಯದ ಅಭ್ಯುದಯದ ದೇವಸ್ಥಾನಗಳು, ದೇವಾಲಯಗಳು ಎಂದು ಹೇಳಿದ್ದಾರೆ. ನಿಜವಾಗಿಯೂ ಇವು ದೇವಾಲಯಗಳು ಹೌದು. ಪಂಡಿತ ನೆಹರೂ ಅವರು ಪಂಜಾಬಿಗೆ ನೀರಾವರಿ ಯೋಜನೆಯನ್ನು ಉದ್ಘಾಟನೆ ಮಾಡಲಿಕ್ಕೆ ಹೋಗುತ್ತ ಹೇಳಿದರು 'ಇವು ಈಗಿನ ಆಧುನಿಕ ದೇವಾಲಯಗಳು, ಇವೆಲ್ಲವೂ ಯಾತ್ರಾಸ್ಥಳಗಳು' ಎಂದು. ಆ ಮಾತನ್ನೇ ಅನುಸರಿಸಿ ಇವರೂ ಹೇಳಬಹುದು. ಆದರೆ ಈ ವರದಿಯ ಪ್ರಕಾರ ಇವು ದೇವಸ್ಥಾನಗಳೂ ಸರಿ, ನಾವು ಸಂತೋಷ ಪಡುವುದೂ ಸರಿ. ಆದರೆ ಇದರಲ್ಲಿನ ವಿಷಯಗಳು ಅಷ್ಟು ಸಮಾಧಾನಕರವಾದ ರೀತಿಯಲ್ಲಿ, ನಮ್ಮ ರಾಜ್ಯದ ಅಭ್ಯುದಯಕ್ಕೆ ಈ ವಿದ್ಯುಚ್ಛಕ್ತಿ ಪೂರಕವಾಗಿ ಬಂದು ಇಷ್ಟರವರೆಗೆ ಸಹಾಯಕವಾಗಿದೆಯೇ ಎಂದು ನೋಡುವಾಗ ಇದು ಒಳ್ಳೆಯ ಚಿತ್ರವನ್ನು ಕೊಡುವುದಿಲ್ಲ, ದಾರುಣವಾದ ಚಿತ್ರವನ್ನು ಕೊಡುತ್ತವೆ ಎಂದು ಹೇಳಬೇಕಾಗುತ್ತದೆ.

ಇದರಲ್ಲಿ ಕೆಲವು ವಿವರಗಳನ್ನು ಕೊಟ್ಟಿದ್ದಾರೆ. ಆ ವಿವರಗಳನ್ನು ಕೊಡುವಾಗ—ನಮ್ಮ ರಾಜ್ಯದಲ್ಲಿ ಎಲ್ಲ ರಾಜ್ಯಗಳಿಗಿಂತಲೂ ಮೊಟ್ಟ ಮೊಲು ವಿದ್ಯುಚ್ಛಕ್ತಿ ಷುರುವಾಯಿತು. ಅದು 1902ರಲ್ಲಿ ಷುರುವಾಯಿತು. ಅಷ್ಟಕ್ಕೆ ಮೊದಲು ಇಡೀ ದೇಶದಲ್ಲಿ ಎಲ್ಲಿಯೂ ವಿದ್ಯುಚ್ಛಕ್ತಿ ಶುರುವಾಗಲಿಲ್ಲ. ಈ 64 ವರ್ಷಗಳ ಕಾಲದಲ್ಲಿ ಎಷ್ಟು ಪ್ರಗತಿಯನ್ನು ಸಾಧನೆ ಮಾಡಿದ್ದೇವೆ ಎಂದು ಎಲ್ಲಿಯೂ ಸೂಚಿಸಿಲ್ಲ. ಅದೇ ಹೊತ್ತಿಗೆ ಮದ್ರಾಸಿನಲ್ಲಿ ಇಂತಹ ವಿವರಗಳನ್ನು ಕೊಡಲಾಗಿವೆ. ಅವರು ಮೊದಲು ಇಲ್ಲಿಂದ ವಿದ್ಯುಚ್ಛಕ್ತಿಯನ್ನು ತೆಗೆದುಕೊಂಡು ಹೋಗುತ್ತಿದ್ದರು. ಈಗ ಅವರು ಗ್ರಾಮಾಂತರ ಪ್ರದೇಶದಲ್ಲಿ ವಿದ್ಯುಚ್ಛಕ್ತಿಯನ್ನು ಎಲ್ಲ ಕಡೆಗೂ ಕೃಷಿ ವ್ಯವಸಾಯಕ್ಕೆ ಅನುಕೂಲವಾಗುವಂತೆ ಮತ್ತು ಎಲ್ಲಕ್ಕಿಂತಲೂ ಹೆಚ್ಚಾಗಿ ಎಲ್ಲ ಗ್ರಾಮಗಳಿಗೆ ಮುಟ್ಟುವಂತೆ ವ್ಯವಸ್ಥೆ ಮಾಡಿದ್ದಾರೆ, ಪ್ರತಿಯೊಂದು ಹಳ್ಳಿಗೂ ಮುಟ್ಟಿದೆ ಎಂದು ಅಲ್ಲಿನ ವರದಿಯಲ್ಲಿ ಇದೆ. ಇದು ಬಹಳ ಮುಖ್ಯವಾಗಿ ನೋಡಬೇಕಾದ ಸಂಗತಿ. ಈ ರೀತಿ ನೋಡುವಾಗ ನಮ್ಮಲ್ಲಿ ವಿದ್ಯುಚ್ಛಕ್ತಿಯನ್ನು ಬಳಸಲಿಕ್ಕೆ ಸಾಧ್ಯವುಂಟೋ ಎನ್ನುವುದನ್ನು ಗಮನಿಸಬೇಕು. ಈ ಸಂಬಂಧದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಕೇಂದ್ರ ಸರ್ಕಾರದವರು ಬಿಚ್ಚು ಮನಸ್ಸಿನಿಂದ ಇದ್ದಾರೆ ಎಂದು. ಅದು ಹೇಗಿದ್ದರೂ, ರೂಪಾಯಿಯ ಅಪಮೌಲ್ಯ ಬಂದು ನಮಗೆ ಹೊರಗಡೆಯಿಂದ ಬರತಕ್ಕ ವಸ್ತುಗಳ ಮಟ್ಟಿಗೆ ತೊಂದರೆಯುಂಟಾಗಬಹುದು. ಶರಾವತಿಯಲ್ಲಿ ಇನ್ನೂ ಎರಡು ಯೂನಿಟ್ಟುಗಳನ್ನು ಕಾರ್ಯಗತ ಮಾಡುವುದರ ಮಟ್ಟಿಗೆ ನನಗೆ ಬಹಳ ಸಂಶಯ ಕಾಣುತ್ತಿದೆ. ಇದನ್ನು ಕಾರ್ಯಗತ ಮಾಡಲಿಕ್ಕೆ ಸಾಧ್ಯವಿಲ್ಲ ಎಂದು ನನ್ನ ಅಭಿಪ್ರಾಯ. ಅದೇ ರೀತಿ ಹೊಸ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದೂ ಸಾಧ್ಯವಿಲ್ಲ. ಶರಾವತಿಯಲ್ಲಿ ಉಳಿದ ಎರಡು ಸ್ಟೇಷನ್‌ಗಳು ಕೆಲಸಕ್ಕೆ ಬರುವುದು ಕಷ್ಟವಾದೀತು ಎಂದು ಕೇಂದ್ರ ಸರ್ಕಾರದವರು ಹೇಳುವ ಮಾತಿನಿಂದ ನಮಗೆ ಕಾಣುವ ಒಂದು ಅಭಿಪ್ರಾಯ.

ಇದೇ ಹೊತ್ತಿಗೆ ಕೃಷಿ ವ್ಯವಸಾಯಕ್ಕೆ ಕೊಡುವ ವಿದ್ಯುಚ್ಛಕ್ತಿಯ ದರಗಳನ್ನು (ಟ್ಯಾರಿಫ್) ಹೆಚ್ಚು ಮಾಡಿದ್ದಾರೆ. ನಿಜವಾಗಿಯೂ ಇದು ಸರಿಯಲ್ಲ. ಎಲ್ಲ ರಾಜ್ಯಗಳಿಗಿಂತಲೂ ಮೈಸೂರು

ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ದರ ಕಡಮೆ ಎಂದು ಇತ್ತು. ಇದರಲ್ಲಿ ಲಾಭದ ದೃಷ್ಟಿಯಿಂದ ಕೆಲಸ ಮಾಡಬಾರದು. ಆಹಾರದ ಉತ್ಪತ್ತಿ ಹೆಚ್ಚಾಗಬೇಕು, ದೇಶದಲ್ಲಿ ಆಹಾರ ಹೆಚ್ಚಾಗಿ ಬೆಳೆದು ರೈತರಿಗೆ ಹೆಚ್ಚಿನ ಸಂಪತ್ತು ಬರಬೇಕು ಎನ್ನುವ ದೃಷ್ಟಿಯನ್ನು ಇಟ್ಟುಕೊಂಡು ವಿದ್ಯುಚ್ಛಕ್ತಿಯನ್ನು ಕಡಮೆ ದರದಲ್ಲಿ ಕೊಡಬೇಕು. ಇದನ್ನು ಸಾಂಪತ್ತಿಕ ದೃಷ್ಟಿ, ಲಾಭದ ದೃಷ್ಟಿಯಿಂದ ನೋಡುವುದಾದರೆ ನಿಜವಾಗಿಯೂ ಕೃಷಿ ಉದ್ದೇಶಗಳಿಗೆ ಕೊಡುವ ವಿದ್ಯುಚ್ಛಕ್ತಿ ಯಾವುದುಂಟು ಅದರ ಮೇಲಿನ ಟ್ಯಾರಿಫ್ ಹೆಚ್ಚುಮಾಡುವುದು ಸರಿಯಲ್ಲ, ಇದನ್ನು ಕಡಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ನಿಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಈ ವರದಿಯನ್ನು ನೋಡುವಾಗ ಬಿದರೆ, ಗುಲ್ಬರ್ಗ, ರಾಯಚೂರು ಪ್ರದೇಶಗಳಿಗೆ ದೊಡ್ಡ ಸಿಂಹಪಾಲು ವಿದ್ಯುಚ್ಛಕ್ತಿಯ ಕೆಲಸಗಳ ಮಟ್ಟಿಗೆ ಹೋದ ಹಾಗೆ ಕಾಣುತ್ತದೆ. ಕೆಲವು ಸಮಯದಿಂದ ಇದನ್ನು ನೋಡುತ್ತಿದ್ದೇನೆ. ಕೆಲವು ವಿಷಯಗಳ ಮಟ್ಟಿಗೆ ಇಲ್ಲಿ ಚರ್ಚೆ ಮಾಡಿದ್ದೇವೆ. ಆ ಭಾಗಗಳು ಹಿಂದುಳಿದ ಪ್ರದೇಶಗಳಾಗಿದ್ದರೆ ಅಲ್ಲಿ ಹೆಚ್ಚು ಹಣ ಖರ್ಚು ಆಗುವುದು, ಹೆಚ್ಚು ಕೆಲಸ ಮಾಡುವುದು ಸಾಧ್ಯ. ಕೈಗಾರಿಕೆಗಳು ಬೆಳೆಯುವ ಪ್ರದೇಶ, ಹಿಂದುಳಿದ ಪ್ರದೇಶಗಳು, ಸಾಮುದಾಯಿಕವಾಗಿ ಹಿಂದುಳಿದ ಪ್ರದೇಶಗಳು, ಇನ್ನು ಇತರ ಕಡೆ ಪ್ರದೇಶಗಳೆಲ್ಲ ಇವೆ. ಇವೆಲ್ಲವನ್ನೂ ಕೂಡ ನೋಡಿ ವೃದ್ಧಿ ಮಾಡುವುದು ಕೂಡ ಅಗತ್ಯವುಂಟು. ಬೆಳಗಾಂ ಕಡೆ ಬೇಕಾದಷ್ಟು ಅನುಕೂಲ ಮಾಡುತ್ತಾರೆ ಮಾಡಲಿ. ಉತ್ತರ ಕರ್ಣಾಟಕದ ಕಡೆ ಅನುಕೂಲ ಮಾಡಿದ್ದಾರೆ. ಅದನ್ನು ಮುಂದುವರಿಸಿಕೊಂಡು ಹೋಗಿದ್ದಾರೆ, ಅದನ್ನೂ ಮಾಡಲಿ. ಆದರೆ ಅದೇ ಹೊತ್ತಿಗೆ ದಕ್ಷಿಣ ಕನ್ನಡ ಜಿಲ್ಲೆಯ ಕಾಸರಗೋಡು ಪ್ರದೇಶವನ್ನು ನೋಡಿದರೆ ಅಲ್ಲಿ ಮಟ್ಟಿಗೆ ವಿದ್ಯುಚ್ಛಕ್ತಿ ಕಾಸರಗೋಡು ಮೂಲಕ ಹರಿದು ಹೋಗುತ್ತಿದ್ದರೂ ಅಲ್ಲಿಯ ಗ್ರಾಮಗಳಿಗೆ ಸರಿಯಾದ ವಿದ್ಯುಚ್ಛಕ್ತಿ ಬರಲಿಲ್ಲ. ಖೈರಂಗಳ ಮೈಸೂರು ರಾಜ್ಯಕ್ಕೆ ಸೇರಿದ ಗ್ರಾಮ. ವಿದ್ಯುಚ್ಛಕ್ತಿ ಲೈನ್ ಆ ಗ್ರಾಮದ ಮೂಲಕ ಮುಂದೆ ಹರಿದು ಹೋಗುತ್ತಿದೆ. ಅಲ್ಲಿಗೂ ವಿದ್ಯುಚ್ಛಕ್ತಿ ಇಲ್ಲ. ಇದು ಕರ್ಣಾಟಕ ಪ್ರದೇಶವಿದ್ದು ಆ ಪ್ರದೇಶದಲ್ಲಿ ರಿಸೀವಿಂಗ್ ಸ್ಟೇಷನ್ ಇಲ್ಲ. ಕಾಸರಗೋಡಿನಲ್ಲಿ ರಿಸೀವಿಂಗ್ ಸ್ಟೇಷನ್ ಇಟ್ಟಿದ್ದಾರೆ. ಮೈಸೂರು ಪ್ರದೇಶದಲ್ಲಿ ರಿಸೀವಿಂಗ್ ಸ್ಟೇಷನ್ ಇಲ್ಲ, ಕುಂಬಳೆಯಲ್ಲಿಯೂ ಇಲ್ಲ. ಅದನ್ನು ಕಾಸರಗೋಡಿನಲ್ಲಿ ಮಾಡಿದ್ದಾರೆ. ಅಲ್ಲಿಗೆ ವಿದ್ಯುಚ್ಛಕ್ತಿ ಹೋಗಿ ಮತ್ತೆ ಹಿಂದಕ್ಕೆ ಬರಬೇಕು. ಕನ್ನಡ ಪ್ರದೇಶದವರಿಗೆ ವಿದ್ಯುಚ್ಛಕ್ತಿ ಪ್ರಯೋಜನಕ್ಕೆ ಬರಲಿಲ್ಲ. ಇದನ್ನು ಏಕೆ ನೋಡಬಾರದು ! ಈ ಪ್ರದೇಶದ ಜನರಿಗೆ ವಿದ್ಯುಚ್ಛಕ್ತಿ ಪ್ರಯೋಜನಕ್ಕೆ ಬರುವ ಹಾಗೆ ಏಕೆ ನೋಡಬಾರದು ! ಗಡಿ ಪ್ರದೇಶದಲ್ಲಿ ಸರಿಯಾಗಿ ವಿದ್ಯುಚ್ಛಕ್ತಿ ಎಲ್ಲರಿಗೂ ಸಿಕ್ಕುವ ಹಾಗೆ ಏಕೆ ಪ್ರಯತ್ನ ಮಾಡಬಾರದು ? ನಮಗೆ ಕಾಸರಗೋಡಿನ ಕನ್ನಡ ಪ್ರದೇಶ ಬರಬೇಕಾಗಿದೆ. ಹೀಗೆ ಹೇಳುವಾಗ ಈ ಗ್ರಾಮಗಳನ್ನು ಕೂಡ, ಈ ಪ್ರದೇಶದ ಗ್ರಾಮಗಳನ್ನು ಕೂಡ ಅಭಿವೃದ್ಧಿ ಮಾಡುವುದಕ್ಕೆ, ಕೃಷಿ ಮಾಡುವುದಕ್ಕೆ ವಿದ್ಯುಚ್ಛಕ್ತಿಯನ್ನು ಕೊಡಬೇಕು. ಇದಕ್ಕೆ ಇಷ್ಟು ಖರ್ಚಾಗುತ್ತದೆ, ವೆಚ್ಚ ಇಷ್ಟಾಗುತ್ತದೆ ಎಂದು ನೋಡದೆ ಅಭಿವೃದ್ಧಿ ಮಾಡಲಿಕ್ಕೆ ಹಿಂದು ಮುಂದು ನೋಡದೆ ಈ ಕೆಲಸವನ್ನು ಮಾಡಬೇಕೆಂದು ನಾನು ನಿಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಎರಡನೆಯವಾಗಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 117 ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುವುದಾಗಿ ಹೇಳಿದರು; ಇಷ್ಟರವರೆಗೆ 210 ಗ್ರಾಮಗಳಿಗೆ ಕೊಟ್ಟಿರುತ್ತಾರೆ; ನಾಲ್ಕನೆಯ ಯೋಜನೆಯಲ್ಲಿ 117 ಗ್ರಾಮಗಳಿಗೆ ಕೊಡುತ್ತಾರೆ. ಭೌಗೋಳಿಕ ದೃಷ್ಟಿಯಿಂದ ನೋಡಿದರೆ ಮಲೆನಾಡು ಪ್ರದೇಶವಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ಕಷ್ಟವಿದೆ, ಮಳೆಗಾಲದಲ್ಲಿ ಒಂದು ರೀತಿಯ ಕಷ್ಟವಾದರೆ ಬೇಸಿಗೆಯಲ್ಲಿ ಮತ್ತೊಂದು ರೀತಿಯ ಕಷ್ಟವಿದೆ, ಕಾಡು ಪ್ರದೇಶ ಮತ್ತು ಗುಡ್ಡಕಾಡು ಬಹಳ ಇದೆ, ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ, ಒಂದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ, ಹೋಗಲು ಕಷ್ಟವಿದೆ. ಆದುದರಿಂದ ಅಲ್ಲಿ ವಿದ್ಯುಚ್ಛಕ್ತಿಯನ್ನು ಪ್ರತಿಯೊಂದು ಗ್ರಾಮಕ್ಕೂ ಕೊಡುವುದು ಅವಶ್ಯಕ. ಅಲ್ಲಿ ಸಾಂದ್ರ ವ್ಯವಸಾಯವಿದೆ, ಕೃಷಿ ಅಭಿವೃದ್ಧಿ ಮಾಡಲು ಅವಕಾಶವಿದೆ. ಹೀಗಿರುವಾಗ ದಕ್ಷಿಣ ಕನ್ನಡ ಜಿಲ್ಲೆಗೆ ಸಾಧ್ಯವಾದಷ್ಟು ವಿದ್ಯುಚ್ಛಕ್ತಿಯನ್ನು ಕೊಡುವ ಏರ್ಪಾಡು ಮಾಡಬೇಕಾದ್ದು ಅವಶ್ಯಕ. ಒಂದು ಕಡೆ ಕೈಗಾರಿಕಾಭಿವೃದ್ಧಿ ಆಗುವಂತೆ ಹಳ್ಳಿಯ ಅಭಿವೃದ್ಧಿ ಕೂಡ ಆಗಬೇಕು. ನಿಮ್ಮ ಯೋಜನೆಯಲ್ಲಿ ಹಳ್ಳಿಯ ಜನರನ್ನು ಕೈಬಿಡುವುದು ಸರಿಯಲ್ಲ. ಕೈಗಾರಿಕೆಗಳನ್ನು ಪೋಷಣೆ ಮಾಡುವಂತೆ ಹಳ್ಳಿಗಳ ಜನತೆಗೂ ಬೇಕಾದ ಅನುಕೂಲತೆ ಕಲ್ಪಿಸಿ ಕೊಡಬೇಕು, ಅದರಲ್ಲೂ ಮುಖ್ಯವಾಗಿ ವಿದ್ಯುಚ್ಛಕ್ತಿಯನ್ನೊದಗಿಸಬೇಕು ಎಂದು ಹೇಳಲು ಬಯಸುತ್ತೇನೆ.

ಇದುವರೆಗೆ ನಮಗೆ 4 ಸಾವಿರ ಚಿಲ್ಲರೆ ಪಂಪುಸೆಟ್ಟುಗಳು ದೊರೆತಿವೆ, ಇನ್ನೂ 9 ಸಾವಿರ ದೊರೆಯಲಿವೆ. ಸಾಧಾರಣ ಲೆಕ್ಕದ ಪ್ರಕಾರ ಅಲ್ಲಿಗೆ 80 ಸಾವಿರ ಪಂಪುಸೆಟ್ಟುಗಳಾದರೂ ಬೇಕು.

(ಶ್ರೀ ಎ. ಕೃಷ್ಣಶೆಟ್ಟಿ)

ಏಕೆಂದರೆ, ಉದಾಹರಣೆ ಹೇಳುತ್ತೇನೆ. ಮಂಚನಾಡು ಗ್ರಾಮದಲ್ಲಿ 8 ಪಂಪುಸೆಟ್ಟುಗಳು ಕೆಲಸ ಮಾಡುತ್ತಿವೆ. ಹಾಗಿರುವಾಗ ಬೇರೆ ಕೋಲಾರ, ತುಮಕೂರು ಮುಂತಾದ ಜಿಲ್ಲೆಗಳನ್ನು ನೋಡಿ ಅಲ್ಲಿಗೆ ಅನ್ವಯಿಸುವ ನೀತಿಯನ್ನೇ ಕಟ್ಟುನಿಟ್ಟಾಗಿ ದಕ್ಷಿಣ ಕನಡಾಕ್ಕೆ ಅನ್ವಯಿಸಿದರೆ ಅದು ಸರಿ ಹೋಗುವುದಿಲ್ಲ, ಅಲ್ಲಿ ಬೇಕಾದ ನೀರಿದೆ, ಒಂದೇ ಬೆಳೆಯಾಗುವ ಒಂದೂವರೆ ಲಕ್ಷ ಎಕರೆ ಬಿಟ್ಟು ಇದೆ, ಅಂದರೆ ಆಕಾಶದಿಂದ ಬೀಳುವ ನೀರಿನಿಂದ ಮಾತ್ರ ಬೆಳೆಯಾಗುವ ಭೂಮಿ ಇದೆ. ಹಾಗಿರುವಾಗ ಹೆಚ್ಚು ಆಹಾರ ಉತ್ಪತ್ತಿ ಮಾಡುವುದಕ್ಕೆ ಅಲ್ಲಿಗೆ ಹೆಚ್ಚು ಪಂಪುಸೆಟ್ಟುಗಳನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಎಷ್ಟುಕಡಮೆಯೆಂದರೂ 25 ಸಾವಿರ ಪಂಪು ಸೆಟ್ಟುಗಳನ್ನಾದರೂ ಕೊಡಬೇಕು.

ಇನ್ನು ಮುಖ್ಯವಾದ ಒಂದು ವಿಷಯವೊಂದಕ್ಕೆ ಬರುತ್ತೇನೆ. ಈಗ ವಿದ್ಯುಚ್ಛಕ್ತಿಯ ಮಾಲೀಕರು ಎಂ. ಎಸ್. ಇ. ಬಿ. ನವರು. ಈ ಬೋರ್ಡು ಇಂದು ಓಬಿರಾಯನ ಕಾಲದ ಪದ್ಧತಿಯಂತೆ ಕೆಲಸಮಾಡುತ್ತಿದೆ. ಇದನ್ನು ನೋಡಿದರೆ ಬಹಳ ಬೇಸರವಾಗುತ್ತದೆ. ಏಕೆಂದರೆ- ನಮ್ಮ ಮಂತ್ರಿಗಳಾದ ವೀರೇಂದ್ರ ಪಾಟೀಲರ ವರದಿಯನ್ನು ನೋಡುವಾಗ ಕೆಲಸಗಾರರಮಟ್ಟಿಗೆ ಒಂದು ಶಬ್ದ ಕೂಡ ಅದರಲ್ಲಿ ಕಾಣಲಿಲ್ಲ. 13 ಸಾವಿರ ಕೆಲಸಗಾರರು ಸೇಕಡ 50 ಮಂದಿ ಕೆಲಸಗಾರರು ಇರುವಾಗ, ಅವರು 20 ವರ್ಷ ಕೆಲಸಮಾಡಿ ಶ್ವಾಶತ ಕೆಲಸಮಾಡಿಕೊಂಡು ಬಂದಿರುವಾಗ ಅವರಿಗೆ ರಕ್ಷಣೆ ಕೊಡದೆ ಅವರನ್ನು ಹಂಗಾಮಿಯಾಗೇ ಮುಂದುವರೆಸುತ್ತಿದ್ದಾರೆಂದು ಹೇಳಿದರೆ ಅದಕ್ಕಿಂತ ಬಹಳ ಬೇಸರದ ದುಃಖದ ಸಂಕಟದ ಪರಿಸ್ಥಿತಿ ಬೇರೊಂದುಂಟೇ ಎಂದು ಕೇಳುತ್ತೇನೆ, ಇದನ್ನು ನೋಡಬೇಕು. 20 ವರ್ಷದಿಂದ ಕೆಲಸದಲ್ಲಿರುವವನಿಗೆ ಇನ್ನೂ ಖಾಯಮಾಗಿಲ್ಲ, ಅವನಿಗೆ 50 ರಿಂದ 60 ರೂಪಾಯಿಗಳ ಸಂಬಳ ಮಾತ್ರ ಬರುತ್ತಿದೆ, ಕೆಲಸಮಾಡುವಾಗ ಅವನು ಕಂಬದಿಂದ ಬಿದ್ದರೆ ಪರಿಹಾರವಿಲ್ಲ, ರಜವಿಲ್ಲ, ಬೇರೆ ಸೌಕರ್ಯವಿಲ್ಲ, ಇನ್ನಿತರ ಅನುಕೂಲವಿಲ್ಲ. ನಮ್ಮ ದೇಶದ ಮಜೂರನಾಗಿರುವವನಿಗೆ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ, ಘಟನೆಯಾದಮೇಲೆ ಗೌರವಯುತನಾದ ದೇಶದ ಪ್ರಜೆಗೆ ಮೂಲಭೂತವಾದ ಕೆಲವು ಹಕ್ಕುಗಳಿವೆ. ಅವು ಕೂಡ ಈ ವಿದ್ಯುಚ್ಛಕ್ತಿ ಬೋರ್ಡಿನ ಕೆಲಸಗಾರರಿಗಿಲ್ಲ ಎಂದರೆ ಇದಕ್ಕಿಂದ ನಾಚಿಕೆಗೇಡಿನ ಸಂಗತಿ ಬೇಕೆ? ಇದನ್ನು ನೋಡಬೇಕು, ಅವರಿಗೆ 60 ರೂಪಾಯಿಗಳಲ್ಲವೆ ಇಲ್ಲಿಯವರೆಗೆ ಇನ್‌ಕ್ರಿಮೆಂಟ್ ಕೂಡ ಇಲ್ಲ, ಸಂಬಳವೂ ಕಡಮೆ. ಹೀಗಿರುವಾಗ ಇದನ್ನು ನಿಜವಾಗಿಯೂ ಸರಿಪಡಿಸಬೇಕಾದ್ದು ಸರಕಾರದ ಅಗತ್ಯ ಕರ್ತವ್ಯವಾಗಿದೆ. ಬೋನಸ್ ಸೇಕಡ 4 ರಂತೆ ಕೊಡಬೇಕೆಂದು ಪಾರ್ಲಿಮೆಂಟೇ ಹೇಳವಾಗ ಇವರಿಗೆ ಅದು ಕೂಡ ಇಲ್ಲ. ಯಾವ ಒಂದು ಒಪ್ಪಂದ ಕೂಡ ಇಲ್ಲ. ಇಂಥ ನಿರಂಕುಶಶಾಹಿ ಆಡಳಿತ ಈ ಬೋರ್ಡಿನಲ್ಲಿದೆ. ನಾನು ಪಬ್ಲಿಕ್‌ವರ್ಕ್ಸ್ ಇಲಾಖೆಯ ಮಂತ್ರಿಗಳಿಗೆ 5 ಕಾಗದಗಳನ್ನು ಬರೆದೆ, ಕೋಟಕಾರ ಗ್ರಾಮದಲ್ಲಿ 5 ಜನ ಬಡವರಿಗೆ ವಿದ್ಯುಚ್ಛಕ್ತಿ ಸಿಕ್ಕಿಲ್ಲ, ಉಳಿದವರಿಗೆ ಸಿಕ್ಕಿದೆ. ಏನಾದರೂ ಕೇಳಿದರೆ ಕೆಲವರು ಪಾರ್ಕಲಾಂ, ಯೋಚನೆ ಮಾಡೋಣ ಎಂದು ಹೇಳುವ ಒಂದು ಕ್ರಮವಿದೆ, ಅದರಿಂದೇನೂ ಉಪಯೋಗವಾಗುತ್ತಿಲ್ಲ. ಇದೇಕೆ? ಇಲಾಖೆಗೆ ಬೇಕಾದ ಅನುಕೂಲ ಒದಗಿಸುವ ಮನಸ್ಸಿಲ್ಲದಿದ್ದರೆ ಬರೆದು ಮಾಡಿರಬಹುದಾಗಿತ್ತು, ಹಾಗೆ ಬರೆಯದಿರುವುದು ಬೇಸರಕ್ಕೆ ಕಾರಣವಾಗಿದೆ. ಹೀಗೆ ನಿರಂಕುಶಶಾಹಿಯ ಸ್ವರೂಪದಿಂದ ನಿಜವಾಗಿಯೂ ವಿದ್ಯುಚ್ಛಕ್ತಿಯಿಂದ ಪ್ರಯೋಜನವಾಗುವುದೇ? ಸೇಕಡ 25ರಷ್ಟೂ ಈ ದಿವಸ ಪ್ರಯೋಜನವಾಗುತ್ತಿಲ್ಲ. ಇದರಿಂದ ಕೆಲಸ ಮಾಡುವವರಿಗೆ ಹುಮ್ಮಸ್ಸಿಲ್ಲ, ಮನಸ್ಸಿಲ್ಲ, ಉತ್ತೇಜನವಿಲ್ಲ. ನಮ್ಮ ಮೈಸೂರು ಬೆಳಗಬೇಕಾದರೆ ಅಭಿವೃದ್ಧಿಯಾಗಬೇಕಾದರೆ ಮುಖ್ಯವಾಗಿ ಕೆಲಸಗಾರರು ಮನಸ್ಸಿಟ್ಟು ಕೆಲಸ ಮಾಡುವಂತಿರಬೇಕು. ಅವರು ಮನಃಪೂರ್ವಕವಾಗಿ ಚೆನ್ನಾಗಿ ಕೆಲಸ ಮಾಡಬೇಕಾದರೆ ಅವರಿಗೆ ಸರಿಯಾದ ಸಂಬಳ ಕೊಡಬೇಕು, ಅನುಕೂಲ ಕಲ್ಪಿಸಬೇಕು. ಅದಕ್ಕಾಗಿ 13 ಸಾವಿರ ಕೆಲಸಗಾರರು ಮನವಿ ಸಲ್ಲಿಸಿದ್ದಾರೆ, ಮೆಮೊರಾಂಡಂ ಕೊಟ್ಟಿದ್ದಾರೆ. ಸರಕಾರ, ಬೋರ್ಡು ಮತ್ತು ಕೆಲಸಗಾರರು ಪ್ರತಿನಿಧಿಗಳು ಒಟ್ಟಿಗೆ ಸೇರಿ ಈ ವಿಚಾರದಲ್ಲಿ ಸರಿಯಾದ ಪರಿಹಾರ ಹುಡುಕುವ ಅಗತ್ಯವುಂಟು. ಅಲ್ಲದೆ ಎನ್. ಜಿ. ಓ. ಗಳ ಇತರ ಕೇಳಿಕೆಗಳು ಕೂಡ ಇವೆ. ಅದನ್ನು ಕೂಡ ಗಮನಿಸಬೇಕು. ಅವರಿಗೆ ಸರಿಯಾದ ಸಹಾಯಮಾಡದಿರುವುದು ಶೋಚನೀಯ. ದಕ್ಷಿಣ ಕನ್ನಡ ಜಿಲ್ಲೆಗೆ ವಿದ್ಯುಚ್ಛಕ್ತಿ ಸೌಕರ್ಯವನ್ನು ಸಾಕಷ್ಟು ಒದಗಿಸುವುದು ಅತಿ ಮುಖ್ಯವಾದ ಪ್ರಶ್ನೆಯಾಗಿದೆ. ಅದನ್ನು ಒದಗಿಸುವುದಲ್ಲದೆ ಕೆಲಸಗಾರರಿಗೆ ಕೂಡ ಪರಿಹಾರ ಒದಗಿಸಬೇಕು. ಇದಕ್ಕೆ ಪರಿಹಾರ ಕಂಡು ಹಿಡಿಯದಿದ್ದರೆ ಒಂದಲ್ಲ ಒಂದು ದಿನ ಜನತೆ ಕತ್ತಲೆಯಲ್ಲಿರುವ ಪ್ರಸಂಗ ಬರಬಹುದು, ಇದನ್ನು ತಪ್ಪಿಸಿ ಸರಿಯಾದ ಅನುಕೂಲ ಕಲ್ಪಿಸಿಕೊಡಬೇಕೆಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮಿ, ವಿದ್ಯುಚ್ಛಕ್ತಿಯ ಉತ್ಪತ್ತಿ ಮತ್ತು ಸರಬರಾಜಿನಲ್ಲಿ ಇಂಡಿಯಾದೇಶದಲ್ಲಿ ಪ್ರಾರಂಭದಿಂದ ನಮ್ಮ ಮೈಸೂರು ರಾಜ್ಯವು ಮೊದಲನೆಯದಾಗಿದ್ದು ಈಗ ನಮ್ಮ ಮಂತ್ರಿಗಳು ತಿಳಿಸಿರುವ ಹಾಗೆ ಮದ್ರಾಸು ರಾಜ್ಯಕ್ಕಿಂತ ನಮ್ಮ ದೇಶ ಎಷ್ಟೋ ಹಿಂದುಳಿದಿದೆ ಎಂಬುದು ಸ್ಪಷ್ಟವಾಗುತ್ತದೆ. ವಿದ್ಯುಚ್ಛಕ್ತಿ ಇಲಾಖೆಯ ಕಾರ್ಯ ಹೆಚ್ಚು ಸುಸೂತ್ರವಾಗಿ ನಡೆಯಬೇಕು, ದೇಶಕ್ಕೆ ಹೆಚ್ಚು ಸಹಾಯವಾಗಬೇಕು ಮತ್ತು ಲಂಚರುಷುವತ್ತಿನ ತೊಂದರೆ ತಪ್ಪಬೇಕು ಎಂದು ಇದಕ್ಕಾಗಿ ಸರಕಾರ ಒಂದು ಬೋರ್ಡನ್ನು ರಚಿಸಿತು.

4-00 P. M.

ಈ ಬೋರ್ಡ್ ನಿರ್ಮಾಣವಾದ ಮೇಲೆ ಇನ್ನೂ ಹೆಚ್ಚು ದಕ್ಷತೆಯಿಂದ ಕೆಲಸ ನಡೆಯುತ್ತದೆ ಎಂದು ನಿರೀಕ್ಷೆ ಮಾಡಿದಂತಹ ಜನಕ್ಕೆ ನಿಜವಾಗಿಯೂ ಕೂಡ ಬಹಳ ನಿರುತ್ಸಾಹವಾಗಿದೆ. ಈ ದಿನ ಬೋರ್ಡ್ ಅಧಿಕಾರಕ್ಕೆ ಬಂದ ಮೇಲೆ ಕಾರ್ಮಿಕರ ಬಗ್ಗೆ, ಇಲಾಖೆಯಲ್ಲಿ ಕೆಲಸ ಮಾಡತಕ್ಕ ಕೆಳ ದರ್ಜೆಯ ನೌಕರರ ಬಗ್ಗೆ ಅವರು ತೋರಿಸುತ್ತಾ ಇರತಕ್ಕ ಮನೋಭಾವ ನಿಜವಾಗಿಯೂ ಕೂಡ ಬಹಳ ನಾಚಿಕೆಪಡಬೇಕಾದರೆ ವಿಷಯವಾಗಿದೆ. ಏಕೆಂದರೆ ಒಂದು ಖಾಸಗಿ ಸಂಸ್ಥೆಯವರಿಗೆ ಕೂಡ ಸರ್ಕಾರದಲ್ಲಿರುವಂತೆ ಒಂದು ಕಾನೂನು ಇವೆ ಅದನ್ನು ಅನುಸರಿಸಿ ಸ್ವಲ್ಪಮಟ್ಟಿಗೆ ಭಯಪಟ್ಟು ಅವರು ಕೆಲಸ ಮಾಡುತ್ತಾರೆ. ಆದರೆ ಈ ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಅವರು ಈ ನೌಕರರ ಬಗ್ಗೆ ಬಹಳ ಅಧಿಕಾರ ಶಾಹಿಯಿಂದ ವರ್ತನೆ ಮಾಡುತ್ತಾರೆ ಮತ್ತು ಟೆಂಪೂರರಿ ನೌಕರರನ್ನು ಖಾಯಂ ಮಾಡಬೇಕು ಎಂದು ಎಷ್ಟೋ ಚಳುವಳಿ ನಡೆಸಿದರೂ ಅನೇಕ ಸಾರಿ ಸರ್ಕಾರದಲ್ಲಿ ಮನವಿ ಕೊಟ್ಟರೂ ಕೂಡ ಇದುವರೆಗೂ ಆ ಬಗ್ಗೆ ಬೋರ್ಡಿನವರು ಏನೂ ತೀರ್ಮಾನ ತೆಗೆದುಕೊಳ್ಳದೆ ಡೋಲಾಯಮಾನವಾದ ಸ್ಥಿತಿಯಲ್ಲೇ ಇಟ್ಟಿದ್ದಾರೆ. ಈ ಬೋರ್ಡ್ ರಚನೆಯಾದ ಉದ್ದೇಶ ಏನೆಂದರೆ, ನಮ್ಮ ದೇಶದಲ್ಲಿ ಮೊದಲನಿಂದಲೂ ಏನು ನಡೆದುಕೊಂಡು ಬಂದಿದೆ, ಹಿಂದಿನಿಂದ ನಡೆದುಕೊಂಡು ಬಂದಿರತಕ್ಕ ಅಧಿಕಾರಿಗಳ ಪರಂಪರೆ ಏನಿದೆ ಅವರಿಂದ ಇದನ್ನು ತಪ್ಪಿಸಬೇಕೆಂಬುದು ಆಗಿತ್ತು. ಹಿಂದಿನಿಂದ ಬಂದಿರತಕ್ಕ ಆ ಅಧಿಕಾರಿಗಳ ಪರಂಪರೆ ಏನಿದೆ ಅವರಿಗೆ ಸಾಮಾನ್ಯ ಜನರನ್ನು ಕಂಡರೆ ಉದಾಸೀನ, ಅಸಡ್ಡೆ. ಈ ಮನೋಭಾವ ಏನಿದೆ ಇದನ್ನು ತಪ್ಪಿಸಲಿಕ್ಕೆ ಖಾಸಗಿ ಜನರು, ಸಾರ್ವಜನಿಕ ಜೀವನದಲ್ಲಿ ನುರಿತಿರತಕ್ಕ ಜನರು ಯಾರಿದ್ದಾರೆ ಅವರನ್ನು ಈ ಮಂಡಲಿಗೆ ಮುಖ್ಯಸ್ಥರನ್ನಾಗಿ ಮಾಡಬೇಕೆಂಬ ಅಭಿಪ್ರಾಯ ಇತ್ತು. ಆದರೆ ಇತ್ತೀಚೆಗೆ ಇದಕ್ಕೆ ಖಾಸಗೀ ಜನರನ್ನು ನೇಮಕ ಮಾಡುವ ನೆಪದಲ್ಲಿ ಅವಕಾಶ ಇದ್ದರೂ ಕೂಡ ಇಲಾಖೆಯಲ್ಲಿ ಕೆಲಸ ಮಾಡುತ್ತಾ ಇದ್ದ ನಿವೃತ್ತರಾದ ಚೀಫ್ ಇಂಜನಿಯರ ಒಬ್ಬರನ್ನು ಈ ಬೋರ್ಡಿಗೆ ನೇಮಕ ಮಾಡಿರುವುದು ಅರ್ಥವಾಗುತ್ತಾ ಇಲ್ಲ. ಅವರಿಗೆ ಸಾರ್ವಜನಿಕರ ಸಂಪರ್ಕವಾಗಲಿ ಅಥವಾ ಜನಗಳನ್ನು ಮಾತನಾಡಿಸುವುದಾಗಲಿ ಗೊತ್ತಿಲ್ಲ. ಅವರಿಗೆ ತಿಳಿದಿರುವುದು ಅಧಿಕಾರ ಶಾಹಿಯ, ದರ್ಪದ ಮನೋಭಾವ. ಅಂತಹ ಮನೋಭಾವ ಬೆಳೆದಿರತಕ್ಕ ಅವರನ್ನು ತಿರುಗಿ ನೇಮಕ ಮಾಡಿ ಅವರಿಂದ ದಕ್ಷತೆ ಹೆಚ್ಚುತ್ತದೆ ಎಂದು ತಿಳಿದುಕೊಂಡರೆ ಅಥವಾ ಜನರ ಸಂಪರ್ಕ ಬೋರ್ಡಿಗೆ ಹೆಚ್ಚಾಗುತ್ತದೆ ಎಂದು ತಿಳಿದುಕೊಂಡರೆ......

Mr. SPEAKER.—Is it covered by this budget ?

An HON'BLE MEMBER.—Yes.

Mr. SPEAKER.—The appointment was made not in this year. He could have criticised then. I do not know whether it was criticised then or not.

ಶ್ರೀ ಪಿ. ವೆಂಕಟಗಿರಿಯಪ್ಪ.—ಬೋರ್ಡಿನೊಂದಿಗೆ ಸಾಮಾನ್ಯ ಜನರ ಸಂಪರ್ಕ ಇರಬೇಕಾದರೆ ಮತ್ತು ಸಾಮಾನ್ಯ ಜನರಿಗೆ ಅದರಿಂದ ಹೆಚ್ಚು ಪ್ರಯೋಜನವಾಗಬೇಕಾದರೆ ರಿಟೈರ್ ಆದ ಅಧಿಕಾರಿಗಳನ್ನು ಬೋರ್ಡಿನ ಚೇರ್ಮನ್ ಆಗಿ ನೇಮಕ ಮಾಡುವುದನ್ನು ಬಿಟ್ಟು ಖಾಸಗಿ ಜೀವನದಲ್ಲಿ ದಕ್ಷರಾದವರನ್ನು ನೇಮಕ ಮಾಡಬೇಕೆಂದು ಸರ್ಕಾರದವರಿಗೆ ಸೂಚಿಸಬಯಸುತ್ತೇನೆ.

ಇನ್ನೊಂದು ಮುಖ್ಯವಾದ ವಿಷಯವೆಂದರೆ, ನಮ್ಮ ರಾಜ್ಯದಲ್ಲಿ ಪಾಲಿಟೆಕ್ನಿಕ್ಸ್ ಇಂದ ಪಾಸ್ ಆದ ಎಲೆಕ್ಟ್ರಿಕಲ್ ಡಿಪ್ಲೊಮಾ ಹೋಲ್ಡರ್ಸ್ ಅವರ ಸ್ಥಿತಿ ಬಹಳ ಶೋಚನೀಯವಾಗಿದೆ. ನಮ್ಮ ಸ್ನೇಹಿತರೊಬ್ಬರು ಹೇಳುತ್ತಾ ಇದ್ದರು. ಅವರು ಸಾಯಿಲ್ ಕನ್‌ಸರ್ವೇಷನ್ ವರ್ಕ್ಸನಲ್ಲಿ ಎಂಟು ತಿಂಗಳಿನಿಂದ ಕೂಲಿ ಕೆಲಸ ಮಾಡುತ್ತಾ ಇದ್ದಾರೆ ಎಂದು. ನಮ್ಮ ಕೋಲಾರ ಒಂದನ್ನು ತೆಗೆದುಕೊಂಡರೆ 20.30 ಜನ ಡಿಪ್ಲೊಮಾ ಪಾಸ್ ಆಗಿ ಕೆಲಸವಿಲ್ಲದೆ ಪ್ರತಿ ದಿನ ಎಂ.ಎಲ್.ಎ.ಗಳ ಮನೆಗೆ, ಬೆಂಗಳೂರಿನಲ್ಲಿ ಮಂತ್ರಿಗಳ ಮನೆಗೆ ಓಡಾಡುವುದೇ ಕೆಲಸವಾಗಿದೆ. ಆದರೂ ಕೂಡ ಅವರಿಗೆ ಕೆಲಸ ಸಿಕ್ಕಿಲ್ಲ.

(ಶ್ರೀ ಪಿ. ವೆಂಕಟಗಿರಿಯಪ್ಪ)

ಪಾಲಿಟೆಕ್ನಿಕ್‌ನಲ್ಲಿ ಡಿಪ್ಲೊಮಾ ಹೋಲ್ಡರ್ಸ್ ಇಷ್ಟು ದೊಡ್ಡ ಸಂಖ್ಯೆಯಲ್ಲಿ ತಯಾರಾಗಿದ್ದು, ಸರ್ಕಾರದವರು ಅವರನ್ನು ನೇಮಕ ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದರೂ ಕೂಡ ಈ ಮೈಸೂರು ವಿದ್ಯುತ್ ಮಂಡಲಿಯಲ್ಲಿ ಅವರಿಗೆ ಕೆಲಸ ಕೊಡುವುದಕ್ಕೆ ಅವಕಾಶವಿದ್ದರೂ ಕೂಡ—ಅವರಿಗೆ ಟೆಕ್ನಿಕಲ್ ಕೆಲಸ ಇಲ್ಲದೇ ಇದ್ದರೂ ಎಸ್.ಎಸ್‌ಎಲ್.ಸಿ. ಆದವರು ಸೂಪರ್‌ವೈಸರಿ ಕೆಲಸ ಮಾಡುವಂತೆ ಸೂಪರ್‌ವೈಸ್ ಮಾಡುವುದಕ್ಕೂ ತಯಾರಾಗಿದ್ದಾರೆ ಅದಕ್ಕೂ ಕೂಡ ಅವಕಾಶ ಮಾಡಿಕೊಡುವುದಕ್ಕೆ ಬೋರ್ಡಿನವರು ತಯಾರಾಗಿಲ್ಲ. ಎಸ್.ಎಸ್.ಎಲ್.ಸಿ. ಓದಿ ಮೂರು ವರ್ಷದ ಡಿಪ್ಲೊಮಾ ಪರೀಕ್ಷೆಗೆ ಓದಿ ಪಾಸ್ ಆಗಿರತಕ್ಕವರು ಕೆಲಸಕ್ಕಾಗಿ ಮನೆ ಮನೆಗೆ ಅಲೆಯುವಂತಹ ಪರಿಸ್ಥಿತಿ ಈ ದಿವಸ ಬಂದಿದೆ. ಸರ್ಕಾರದವರು ಈ ಬಗ್ಗೆ ತೀವ್ರವಾಗಿ ಆಲೋಚನೆ ಮಾಡಬೇಕು. ಈ ಮಂಡಲಿಯಲ್ಲಿ ಸರ್ಕಾರದ ಪ್ರತಿನಿಧಿಗಳು ಯಾರಿದ್ದಾರೆ ಅವರು ಅಧಿಕಾರಿಗಳ ಮನೋಭಾವ ಬಿಟ್ಟು ಸರ್ಕಾರದ ಆದೇಶದ ಪ್ರಕಾರ ನಡೆದು ಜನರ ಅಭಿಪ್ರಾಯ ಏನಿದೆ, ಕಷ್ಟ ಏನಿದೆ ಎಂಬುದನ್ನು ತಿಳಿದು ಅದಕ್ಕೆ ಪ್ರಾಧಾನ್ಯತೆ ಕೊಟ್ಟು ಈ ಡಿಪ್ಲೊಮಾ ಹೋಲ್ಡರ್ಸ್ ಯಾರಿದ್ದಾರೆ ಅವರೆಲ್ಲರಿಗೂ ಕೆಲಸ ಸಿಕ್ಕುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಈ ದಿವಸ ತಿಳಿಸಬಯಸುತ್ತೇನೆ.

Mr. SPEAKER.—Has the member seen the statement that they are lacking in funds. He is suggesting that the students turned out by the Polytechincs should be absorbed. If funds are provided he can make that suggestion. Without providing funds, what is the use of making a suggestion which cannot be accepted.?

ಶ್ರೀ ಪಿ. ವೆಂಕಟಗಿರಿಯಪ್ಪ.—ಡಿಪ್ಲೊಮಾ ಹೋಲ್ಡರ್ಸ್ ಏನೇ ಕೆಲಸ ಕೊಟ್ಟರೂ, ಇನ್ನೂ ಸಣ್ಣ ಕೆಲಸ ಕೊಟ್ಟರೂ ಕೂಡ ಮಾಡುವುದಕ್ಕೆ ತಯಾರಾಗಿದ್ದಾರೆ. ಸಾಯಿಲ್ ಕನ್ಸರ್‌ವೇಷನ್ ವರ್ಕ್‌ನಲ್ಲಿ ಕೂಲಿ ಕೆಲಸ ಮಾಡುವುದಕ್ಕೂ ಕೂಡ ತಯಾರಾಗಿದ್ದಾರೆ. ಎಸ್.ಎಸ್.ಎಲ್.ಸಿ. ಮಾಡಿದವರಿಗೆ ತಮಗೆ ಬೇಕಾದವರಿಗೆ ಬೇಕಾದ ಕೆಲಸ, ಮೇಸ್ತ್ರಿ ಕೆಲಸ ಕೊಡುತ್ತಾರೆ, ಆದ್ದರಿಂದ ಡಿಪ್ಲೊಮಾ ಹೋಲ್ಡರ್ಸ್ ಎಷ್ಟು ಜನ ಇದ್ದಾರೆ ಅವರೆಲ್ಲರನ್ನೂ ರಿಜಿಸ್ಟರ್ ಮಾಡಿಸಿ ಅವರೆಲ್ಲರಿಗೂ ಮೊದಲು ಕೆಲಸ ಕೊಡುವುದಕ್ಕೆ ಒಂದು ಅವಕಾಶ ಮಾಡಿ ಕೊಡುವುದು ಈ ರಾಜ್ಯದ ವಿದ್ಯುಚ್ಛಕ್ತಿ ಮಂಡಲಿಯಲ್ಲಿ ಅಗತ್ಯವಾಗಿ ಆಗಬೇಕಾದ ಕೆಲಸ ಅದನ್ನು ಮಾಡಬೇಕೆಂದು ಈ ದಿವಸ ತಿಳಿಸ ಬಯಸುತ್ತೇನೆ. ಈ ದಿವಸ ಈ ವಿದ್ಯುಚ್ಛಕ್ತಿ ಮಂಡಲಿಯಲ್ಲಿರತಕ್ಕ ಅಲ್ಲಿನ ಅಧಿಕಾರಿಗಳ ಮನೋಭಾವ ಬಹಳ ಅಸಡ್ಡೆಯ ಮನೋಭಾವವಾಗಿದೆ. ಶಾಸನ ಸಭಾ ಸದಸ್ಯರಾಗಲಿ ಬೇರೆಯವರಾಗಲಿ ಹೋದರೆ ಹೇಗೆ ಕಾಣುತ್ತಾರೆ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಹೇಳಬೇಕಾದರೆ ಸುಮಾರು 20 ಪಂಪ್ ಸೆಟ್ಟುಗಳನ್ನು ಹಾಕುವಂತಹ ಪರಿಸ್ಥಿತಿ ನಮ್ಮ ತಾಲ್ಲೂಕಿನಲ್ಲಿ ಇತ್ತು, ಎರಡು ವರ್ಷ ಅಧಿಕಾರಿಗಳಿಗೆ ಸಲಾಮು ಹೊಡೆದು ಎಷ್ಟು ಸಾರಿ ಕೇಳಿಕೊಂಡರೂ ಕೆಲಸವಾಗಲಿಲ್ಲ, ಅನಿವಾರ್ಯವಾಗಿ ಮಂತ್ರಿಗಳ ಹತ್ತಿರ ಹೋಗಿ ಅವರನ್ನು ಕೇಳಿ ಅವರ ಒತ್ತಾಯದ ಮೇಲೆ ಆ ಕೆಲಸ ಮಾಡಿಸಬೇಕಾಯಿತು. ನಾವು ಮಾತನಾಡುವುದಕ್ಕೆ ಹೋದರೆ ಅಧಿಕಾರ ಮಾಡುತ್ತಾ ಇರುವ ರೀತಿಯಲ್ಲಿ ನಡೆದು ತಮಗೂ ಸಾರ್ವಜನಿಕರಿಗೂ ಏನೂ ಸಂಬಂಧವಿಲ್ಲವೇ ಏನೋ ಎನ್ನುವ ರೀತಿಯಲ್ಲಿ ನಡೆದುಕೊಳ್ಳುತ್ತಾರೆ. ವಿದ್ಯುಚ್ಛಕ್ತಿ ಮಂಡಲಿಗೆ ಸರ್ಕಾರವೇ ಅಧೀನವೇನೋ ಅನ್ನುವ ರೀತಿಯಲ್ಲಿ ನಡೆಯುತ್ತಾ ಇದೆ, ಬೋರ್ಡ್ ಆದ ತಕ್ಷಣಕ್ಕೆ ಅದರ ಮೇಲೆ ಯಾವ ನಿಯಂತ್ರಣವೂ ಇಲ್ಲದೆ, ಯಾರದೂ ಹತೋಟಿ ಇಲ್ಲ, ಏನು ಬೇಕಾದರೂ ಮಾಡಬಹುದು ಎಂಬ ಮನೋಭಾವವನ್ನು ಅವರು ಪಡೆದಿದ್ದಾರೆ. ಸರ್ಕಾರದವರು ಅಷ್ಟೊಂದು ಹಣವನ್ನು ಹಾಕಿ ಅಲ್ಲಿ ಸರ್ಕಾರದ ಪ್ರತಿನಿಧಿಗಳು ಇರುವಾಗ ಆ ರೀತಿ ಅವರು ನಡೆದುಕೊಳ್ಳುವುದಕ್ಕೆ ಅವಕಾಶ ಕೊಡಬಾರದು. ಮತ್ತು ಒಂದು ಪಂಪ್ ಸೆಟ್ ಕೊಡುವ ಕೆಲಸ ಏನಿದೆ ಅದರ ಬಗ್ಗೆ ಹೆಚ್ಚಿನ ರೀತಿಯಲ್ಲಿ ಮತ್ತು ಜನರು ಕೇಳುವಾಗ ಸೌಜನ್ಯದಿಂದ ನಡೆದುಕೊಳ್ಳುವ ಹಾಗೆ ಈ ದಿವಸ ನಮ್ಮ ಸರ್ಕಾರದವರು ಇದರ ಬಗ್ಗೆ ಆಸಕ್ತಿ ವಹಿಸಿ ಕೆಲಸ ಮಾಡಬೇಕೆಂದು ತಿಳಿಸ ಬಯಸುತ್ತೇನೆ.

ಇನ್ನೊಂದು ಮುಖ್ಯವಾದ ವಿಷಯವೆಂದರೆ, ಎಲೆಕ್ಟ್ರಿಸಿಟಿ ಬೋರ್ಡಿನವರು ಪಂಪ್ ಸೆಟ್‌ಗಳನ್ನು ಸರಬರಾಯಿ ಮಾಡುತ್ತಾ ಇದ್ದರು, ಮೂರು ಎಚ್.ಪಿ. ಮೋಟಾರು ಬೇಕೆಂದರೆ 7·5 ಮೋಟಾರು ಕೊಡುತ್ತಾರೆ. ಹಿಂದೆ 25 ಸೈಕಲ್ಸ್ ಇದ್ದಾಗ ಅದಕ್ಕೆ ಮೂರು ಎಚ್.ಪಿ. ಕೊಡಿ ಎಂದರೆ 7·5 ಮೋಟಾರು ಕೊಟ್ಟಿರುವಂಥವು ಇವತ್ತಿನ ದಿವಸ ಸಾವಿರಾರು ಪಂಪ್ ಸೆಟ್ಟುಗಳು ಇವೆ. ಅವನ್ನು ರೀ ವೈಂಡ್ ಮಾಡಬೇಕೆಂದರೆ ಮೂರು ಎಚ್.ಪಿ ಮೋಟಾರಿನ ಬೆಲೆ ಏನಿದೆ ಎಂಬುದನ್ನು

ತಾವು ನೋಡಿ. ಇದರ ಬಗ್ಗೆ ಚೇರ್ಮನ್‌ರವರಿಗೆ ತಿಳಿಸಿದ್ದೇವೆ. ಇತರ ಅಧಿಕಾರಿಗಳಿಗೂ ತಿಳಿಸಿದ್ದೇವೆ. ಯಾರೂ ಕೇಳುವವರೇ ಇಲ್ಲ. ಮೂರು ಎಚ್.ಪಿ. ಬೇಕೆಂದರೆ 7·5 ಮೋಟಾರ್ ಕೊಟ್ಟರೆ ಅರ್ಥವೇನು ? ಸಾಲ ಸಿಕ್ಕುತ್ತದೆ ಎಂದು ಹೇಳಿ ಎರಡೂವರೆ ಸಾವಿರ ರೂಪಾಯಿ ಖರ್ಚಾದರೂ ಕೂಡ ಮೋಟಾರು ತೆಗೆದುಕೊಳ್ಳುತ್ತಾ ಇದ್ದಾರೆ. ಆ ಮೋಟಾರುಗಳನ್ನು ಮಂಡಲಿಯವರೇ ರೀಪ್ಲೇಸ್ಮೆಂಟ್ ಮಾಡಿಸಿಕೊಡಬೇಕು. ಮತ್ತೊಂದು ವಿಷಯ ಎಂದರೆ, ಸೈಂಟಿಫಿಕ್ ಮೆಥೆಡ್ಸ್ ಎಂಬ ಹೆಸರಿನಲ್ಲಿ ಚೆಕ್ ಸಿಸ್ಟಂ, ಎಂದು ಹೇಳಿಕೊಂಡು 20-30 ಪಂಪ್ ಸೆಟ್‌ಗಳು ಒಂದು ಏರಿಯಾದಲ್ಲಿದ್ದರೆ ಒಬ್ಬ ಲೈನ್‌ಮೆನ್‌ನ್ನು ಇಟ್ಟು ಸರಿಮಾಡುತ್ತಾ ಇದ್ದರು. ಈಗ ಅದನ್ನೂ ಮಾಡುವುದಕ್ಕಾಗುವುದಿಲ್ಲ, ರೂಲ್ ಅಡ್ಡ ಬರುತ್ತದೆಂದು ಹೇಳುತ್ತಿದ್ದಾರೆ. ಈ ದಿವಸ ಕೇವಲ 8-10 ಮೈಲಿಗಳ ದೂರದಲ್ಲಿ ಒಂದು ಏನಾದರೂ ಕೆಟ್ಟು ಹೋದರೆ, ಒಂದು ಫ್ಯೂಸ್ ಹೋದರೆ ಅದನ್ನು ಸರಿಪಡಿಸಲು ಎಂಟು-ಹತ್ತು ದಿವಸಗಳು ಹಿಡಿಯುತ್ತದೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗಿದೆ ಇದನ್ನು ನೋಡಿದರೆ ಬೋರ್ಡಿನವರಿಗೆ ಜನರ ಹಿತರಕ್ಷಣೆ ಬೇಕಿಲ್ಲವೆಂದು ಕಾಣುತ್ತದೆ. ಇಂಥ ತೊಂದರೆಯನ್ನು ತಪ್ಪಿಸಲು 25 ಪಂಪ್ ಸೆಟ್ಟುಗಳಿಗೊಬ್ಬ ಲೈನ್‌ಮ್ಯಾನ್ ಇರಬೇಕಾದ್ದು ಅಗತ್ಯ, ಅದಕ್ಕೆ ತಕ್ಕ ಪ್ರಯತ್ನಗಳನ್ನು ಕಲ್ಪಿಸಬೇಕೆಂದು ಹೇಳುತ್ತೇನೆ. ಇದನ್ನು ಕೈಬಿಟ್ಟರೆ ರೈತರಿಗೆ ಅನವಶ್ಯಕವಾಗಿ ತೊಂದರೆಯಾಗುತ್ತದೆ. ಅದರಲ್ಲೂ ಕ್ಷಾಮದ ಹಾವಳಿ ಇರುವಾಗ ಬೆಳೆಗಳನ್ನು ಆದಷ್ಟೂ ಎಚ್ಚರಿಕೆಯಿಂದ ತೆಗೆಯಬೇಕೆಂಬ ಕಾಲದಲ್ಲಿ, ಬೆಳೆಗೆ ನೀರು ನಾಲ್ಕು ದಿವಸ ತಪ್ಪಿದಲ್ಲಿ ಬೆಳೆಯೇ ಹಾಳಾಗುತ್ತದೆ. ಇದರ ಬಗ್ಗೆ ತಗಲುವ ಹೆಚ್ಚಿನ ವೆಚ್ಚವನ್ನು ಕೊಡಲು ಜನರು ತಯಾರಾಗಿದ್ದಾರೆ. ಆದುದರಿಂದ ಬೋರ್ಡಿನವರು ಈ ವಿಚಾರಕ್ಕೆ ಹೆಚ್ಚಿನ ನಿಗಾಕೊಟ್ಟು, 20 ಅಥವಾ 30 ಪಂಪ್ ಸೆಟ್‌ಗಳಿಗಾದರೂ ಅಲ್ಲಲ್ಲೇ ಒಬ್ಬೊಬ್ಬ ಲೈನ್‌ಮ್ಯಾನ್ ಇರುವಂತೆ ಮಾಡಲು ಪ್ರಯತ್ನ ಮಾಡಬೇಕು ಅದಕ್ಕೆ ಆತನಿಗೆ ಬೇಕಾದ ಸೌಕರ್ಯಗಳನ್ನೂ ಒದಗಿಸಬೇಕು. ಇನ್ನಾದರೂ ಸರ್ಕಾರದವರು ಮತ್ತು ಬೋರ್ಡಿನವರೂ ಈ ವಿಚಾರವನ್ನು ತಾತ್ಸಾರ ಮಾಡದೆ ಹೆಚ್ಚು ಆಸಕ್ತಿ ವಹಿಸಿ ಕೆಲಸ ಮಾಡುವಂತೆ ಮಾಡಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri G. V. GOWDA (Palya).—Sir, A perusal of the statistics furnished in the course of the speech as well as the Annual Financial Statement, reveals to me that the financial results of the Board and its administration is far from satisfactory. It is noted in the Audit Report that in all these years, the working has resulted in loss. In 1962-63, they have incurred a loss of Rs. 22,23,000, in 1964-65 Rs. 25,93,000, in 1965-66 Rs. 205 lakhs. It is also stated that in the year 1966-67, they hope to have a profit of one lakh or so; how far, it is going to become true, I do not know, because so far as the Revenue receipts are concerned, I believe they have not made any realistic approach in that direction. In fact, every year the operation and maintenance expenditure is exceeding the revenue receipts by more than hundred lakhs. Such being the state of affairs, it has become impossible for the State Electricity Board to become self-supporting or at least to mobilise the internal sources to have its own funds. In this state of affairs, I am apprehensive whether it becomes possible for the Electricity Board to make repayment of the loans borrowed from the Government as well as from the other agencies. So far as the amount taken from the Government is concerned, in 1965-66 they have made repayment of Rs. 155 lakhs and the balance outstanding is nearly Rs. 5 crores. There is no rule or procedure that could indicate here what percentage of loan has got to be repaid every year. On a perusal of the statistics, there appears to be no such stipulation. Unless the Government is assured of certain percentage in the repayment of the loan given to this Board, it is likely that the Board may function according to its own whims and fancies. So, I am sugges-

(SRI G. V. GOWDA)

ting that suitable provision must be made for the repayment of the Government loan. This year, the Government wants to advance Rs. 2 crores to the Board, although at the earlier stage it had rejected it, because the Electricity Board wants to have 10 thousand pumpsets. We do not come in the way of the Government advancing loans, provided works are done to the satisfaction of all concerned.

If we see the proposals for the Fourth Plan, in my opinion it is not based on good, sound principle. There is no rational distribution, If we see the figures furnished by the Minister in regard to the proposals for the Fourth Plan, in Mysore District 1,500 irrigation pumpsets are proposed to be serviced in a period of five years. In this District consisting of 11 Taluks, probably the Electricity Board has not conducted a survey or has taken pains to see how many irrigation wells are there in the State, and which part of the State has got more number of wells and which is the under-developed area. So far as servicing of pumpsets is concerned, no statistics have been taken while formulating proposals in that direction. In my own Taluk, namely, Kollegal, we have 3,000 irrigation wells. During the last 6 or 7 years, we have been able to get serviced 400 wells. So far as I. P. Sets are concerned, in my Taluk alone 1,500 sets have to be serviced. The Electricity Board should have an idea as to which area is undeveloped in electricity. So far as providing of electricity is concerned, they should have taken into consideration the factor where irrigation wells exist, and made proposals. I am giving a suggestion to the Hon'ble Minister to take into consideration the area where the irrigation wells are ready in the course of these five years. Some more wells will be added. In the ultimate analysis, Mysore District will have 3,000 wells. If you distribute 1,500 each Taluk may have pump sets for 300 wells. Is this the way the agriculturist has got to be helped? The other districts have also got to be provided with more number of pump sets. For instance, Raichur, Gulbarga, North Kanara are under developed areas and they have to be provided with more. Any way, during the last Plan period, no substantial work has been done in this direction. Naturally, in the Districts the number of sets to be serviced is more. In my own Taluk, Kollegal, we require 1,500 sets to service the wells. How they can meet this requirement with this 1,500 for the whole District. Has the Board taken this reality into consideration?

So far as the rural electrification is concerned, it is better to consider afresh the proposals they have made. Since Integration, I have not been able to get 3 villages electrified because there is no sound basis in the formulation of the proposals. That basis must be underdeveloped areas with more population in a particular village. In my Taluk, 15 villages have more than 5 thousand population. The Board has sanctioned certain estimates, but for want of essential materials, they cannot take up this work? So, what is the basis for according sanction?

Unless they know that they are able to give servicing, why should estimates be sanctioned ? There must be a phased programme. All those villages which have a population of three thousand, should be electrified first. Have some yardstick : let it be a minimum population of 2 or 2½ thousand population. Whatever be the criteria, some sort of criteria must be laid down for this rural electrification. Statistics have been given in this field, and information given as to what has been done in Madras. Let us not worry about other States. Now, we have got power in plenty. Unless essential materials are acquired for the utilisation of this power, no purpose will be served by generating additional power. By the end of the III Plan period, the generating capacity has reached 430 M.W. Now that it has been decided to commission the other six units, the total generating capacity of power will come to 9 lakh K. wats. But, unless the Government finds ways and means of utilising it and finds the essential materials required for utilisation of power, there is no use of simply generating power. We have contemplated to take up Kalinadi and other projects. In fact, when they thought of commissioning the Sharavati project, they should have thought of the materials required and should have taken steps to acquire the essential materials. For want of materials, many ryots have been suffering. I would like to draw the attention of the Hon'ble Minister for Public Works to page 49 of the Financial Statement—item No. 12, where it is stated that 41 I. P. sets have been serviced. In my Taluk, hundreds of ryots have deposited the money in 1961-62 requiring power for I. P. sets. Poles have been erected, but wires have not come, estimates are not sanctioned and those people have not been able to get power. Their deposits are there for nearly 5 to 6 years, and subsequently the Government has passed orders that no ryot need make any deposit unless the current is given. It is a good thing. But, what about those who have deposited the money long back ? For the last three years adverse conditions are there. In fact, in spite of representations to the Chairman and other concerned authorities, things have not moved. For the trunk lines for which estimates have been sanctioned and poles have been erected, they have to see that the required materials are made available. In fact, the amount provided in the Annual Statement has not been spent. If this state of affairs were to continue, I have reason to believe that the ryot in the State is not going to be helped in any manner for the simple reason that top priority is not being given to the servicing of pump-sets where there is a need and where the ryots are ready to take power. So, I once again earnestly appeal to the concerned authorities and the Hon'ble Minister that the Fourth Plan proposals are revised, and to conduct a survey before the Fourth Plan is implemented. My only objection for this proposal is that they have not made the plan on a sound principle nor they are rational.

The audit discloses that as compared to 1963-64, in the year 1964-65 the gross revenue increased by one or two lakhs while the revenue expenses increased to Rs. 116 lakhs. It is again more than what they have received by way of revenue receipts.

(SRI G. V. GOWDA)

So far as the tariff rates are concerned, several of my friends have expressed that it is not desirable to increase the rates. Of course, the Government have given only 6 and 3 paise, 6 paise up to 100 units and 3 paise over 100 units. It looks as though the Electricity Board wants to compensate the loss by the Government. At that time, the Government did not agree even to charge 8 paise per unit for Irrigation pump-sets. Therefore, it is not desirable to increase the tariff rates so far as irrigation pump sets are concerned. So far as Irrigation pumps are concerned, it is desirable to keep it at least 8 paise per unit and not more than that.

There are other defects and loopholes so far as the administrative side is concerned. The important defects as pointed out by the Accountant General are, non-application of the appropriate tariff, in some cases they have not mentioned the rates that they are charging, adoption of incorrect basis, non-collection of municipal arrears. The arrears to the tune of Rs. 56 lakhs is there and the Government Departments alone have to pay Rs. 15,80,000 to the Board.

MR. SPEAKER.—Earlier it was much larger!

SRI G. V. GOWDA.—Might be. There are several instances where they have borrowed funds from the public and not utilised. There are several instances which have been pointed out in the earlier reports.

MR. SPEAKER.—It is his suggestion, that so far as the Board is concerned it can adjust all the dues?

SRI G. V. GOWDA.—They have got to demand and if the Government does not concede, it has got to pay something. Are they recovering interest on the arrears? So, the Board would be a loser. The Board has proposed to borrow Rs. 3 crores from the L. I. C. every year for capital expenditure. They should have given further details as to what is the total amount of the borrowed funds, what are the assets that have been created since its inception, what is the liability and what is the total money towards depreciation reserve. No doubt they have stated that Rs. 18 crores are there in the depreciation reserve. But, whether they pay interest on this is not known. All these things are followed in haphazard manner with the result we may not be able to assess the correct picture of the Board. We do not know in which year it will wipe out all the dues.

I conclude by appealing to the Hon'ble Minister to have a rational basis so far as the Fourth Plan is concerned. The Minister says that Rs. 63 crores would be desirable for the Fourth Plan. I go to the extent of saying that it is better to have Rs. 75 crores. It is stated that hardly we have electrified five thousand villages, while there are 26 thousand villages, *i.e.*, 1/5th. So far as I. P. sets are concerned, we have serviced only 40,000 and 1,60,000 are still remaining to be serviced. There is a capacity of having 10 lakh wells in the course of a few years. I do not

know what time they take to provide I. P. sets to these wells if they go in this slow manner. I suggest that at least two lakhs of wells should be serviced in the Fourth Plan, Otherwise, there is no alternative. Every year we are adding wells, which require again servicing. We cannot do justice to the agriculturists with this low phase of work. Top prioritd should be given to the areas where the percentage of I. P. sets is low any we cannot make justice unless we give top priority to this work. With these words, I conclude.

4-30 P.M.

† ಶ್ರೀ ಗಂಗಾಧರ್ ನಾಮೋಷಿ (ಗುಲ್ಬರ್ಗ).—ಸ್ವಾಮಿ, ಅಧ್ಯಕ್ಷರೆ, ಒಂದೆರಡು ಪಾಯಿಂಟ್‌ಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಈ ವಿದ್ಯುಚ್ಛಕ್ತಿ ಬೋರ್ಡ್‌ನವರು ವ್ಯವಸ್ಥಿತವಾದ ರೀತಿಯಲ್ಲಿ ಕೆಲಸಮಾಡುತ್ತಿಲ್ಲವೆಂದು ನನ್ನ ಅಪಾದನೆ. ಕೆಲಸ ಸರಿಯಾಗಿ ನಡೆಯದೆ ಇರುವುದಕ್ಕೆ ಕಾರಣ, ಮೊದಲನೆಯದಾಗಿ ಅಲ್ಲಿ ಕೆಲಸಮಾಡುವವರಲ್ಲಿ 50 ಪರ್‌ಸೆಂಟ್ ಟೆಂಪರರಿಯಾಗಿರುವುದು, ಒಂದೊಂದು ಕಡೆ ಒಂದೊಂದು ರೂಲ್ಸ್ ಮಾಡುವುದು. ನಮ್ಮ ಗುಲ್ಬರ್ಗದಲ್ಲಿ ಯಾವತರಹದ ಸೌಲಭ್ಯವನ್ನೂ ಒದಗಿಸಿಲ್ಲ. ಈ ಬಡ್ಜೆಟ್ಟಿನಲ್ಲಿ ನಮ್ಮ ಗುಲ್ಬರ್ಗಕ್ಕೆ ನಾಲ್ಕು ಲಕ್ಷ ಹೆಚ್ಚು ಹಣ ಒದಗಿಸಿರುವುದು ಕಂಡುಬರುತ್ತಿದೆ. ಮೈಸೂರಿನ ಕೆಲವು ಭಾಗಗಳಲ್ಲಿ ಇರುವ ಲೈನ್‌ಗಳನ್ನೇ ದೊಡ್ಡದು ಮಾಡಿಕೊಂಡು ಹೋಗಬಹುದು. ಆದರೆ ಗುಲ್ಬರ್ಗದಲ್ಲಿ ಹೆಚ್ಚು ಹಣ ಖರ್ಚುಮಾಡಿದರೂ ಸಹ ಕೆಲಸ ಹೆಚ್ಚು ಆಗುವುದಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, 50 ಪರ್‌ಸೆಂಟ್ ವರ್ಕ್ರ್ಸನ್ನು ಪರ್ಮನೆಂಟ್ ಮಾಡಬೇಕು. ಅವರಿಗೆ ಸರಿಯಾದ ಸೌಲಭ್ಯಗಳನ್ನು ಒದಗಿಸಿಕೊಡಬೇಕು.

ಇಲ್ಲದೇ ಹೋದರೆ ಕೆಲಸಗಾರರು, ನಾವು ಹೇಗೂ ಟೆಂಪರರೀ ಕೆಲಸಗಾರರು, ಎಂದು ತಿಳಿದುಕೊಂಡು ಪ್ಲೋರ್ ನಿಲ್ಲಿಸುವಾಗ ಸರಿಯಾಗಿ ಸಿಮೆಂಟ್ ಹಾಕದೆ ಕಲ್ಲು ಮಣ್ಣು ತುಂಬುತ್ತಾರೆ. ಇದರಿಂದ ಸರಿಯಾಗಿ ಲೈಟ್‌ಗಳು ಹತ್ತುವುದಿಲ್ಲ ಇವರು ನೆಡುವ ಕಂಬಗಳನ್ನು ಸೂಪರ್‌ವೈಜರ್‌ಗಳು, ಜೂನಿಯರ್ ಇಂಜನೀಯರ್‌ಗಳು, ಅಸಿಸ್ಟೆಂಟ್ ಇಂಜನೀಯರ್‌ಗಳು ಸರಿಯಾಗಿ ನೋಡುವುದಿಲ್ಲ. ಇವರುಗಳಿಗೆ ಸರಿಯಾದ ಸೌಲಭ್ಯಗಳನ್ನು ಒದಗಿಸುವುದಿಲ್ಲ, ಸೈಕಲ್‌ಗಳನ್ನು ಬಾಡಿಗೆಗೆ ತೆಗೆದುಕೊಂಡು ಹೋಗಬೇಕು. ಆದ್ದರಿಂದ ಇವರುಗಳಿಗೆ ಸರಿಯಾದ ಸೌಲಭ್ಯಗಳನ್ನು ಒದಗಿಸಿಕೊಡಬೇಕು.

ಎರಡನೆಯದಾಗಿ ಇನ್‌ಟರ್‌ಸ್ಟೇಟ್ ಪವರ್ ಸಪ್ಲೈಸಲುವಾಗಿ ಹೇಳಬೇಕಾಗಿದೆ.

Mr. SPEAKER.—How long shall we sit ! Shall we sit till 7 P.M. ?

HON'BLE MEMBERS.—Yes.

Mr. SPEAKER.—So, we will sit till 7 P.M. They reply will begin at 6 P.M. and till then the debate will go on.

ಶ್ರೀ ಗಂಗಾಧರ್ ನಾಮೋಷಿ.—ಈ ವರದಿಯಲ್ಲಿ ಈ ತರಹ ಇದೆ. "It has been possible to supply considerable amount of energy to Madras and Andhra States, who are badly in need of this assistance due to the unprecedented failure of the monsoons. For this a 220 KV line has been constructed from Bangalore up to Hosur at the Madras border." ಬೇರೆ ಕಡೆ ನಾವು ನೋಡುತ್ತೇವೆ. ಉತ್ತರ ಪ್ರದೇಶದಿಂದ ಹಿಡಿದು ಮಧ್ಯಪ್ರದೇಶದವರೆಗೂ ಕೊಟ್ಟಿರತಕ್ಕ ಲೈನನ್ನು ನೋಡಿದರೆ ಉತ್ತರ ಪ್ರದೇಶದ ಪ್ರಭಾವ ಡೆಲ್ಲಿಯಲ್ಲಿ ಬೇಕಾದಷ್ಟು ಇದೆ ಎಂದು ಗೊತ್ತಾಗುತ್ತದೆ. ಇದನ್ನು ನಾವು ಪೇಪರ್‌ಗಳಲ್ಲಿ ನೋಡುತ್ತಿರುತ್ತೇವೆ. ಆದರೆ ಕೇಂದ್ರ ಸರ್ಕಾರದವರು ನಮ್ಮ ರಾಜ್ಯಕ್ಕೆ ಮಾಡುತ್ತಿರುವ ಅನ್ಯಾಯವನ್ನು ಸಹಿಸಿಕೊಂಡು ಸಹ ಅವರ ಒಂದು ಪ್ರಭಾವಕ್ಕೆ ಒಳಗಾಗಿ ಆಂಧ್ರದವರಿಗೆ, ಮದ್ರಾಸ್‌ನವರಿಗೆ, ಗೋವಾದವರಿಗೆ ಪವರ್ ಕೊಡುತ್ತಿದ್ದರೆ. ನಮ್ಮ ಭಾಗಗಳಿಗೆ ಪವರ್ ಕೊಡಲು ಸಲಕರಣೆಗಳಿಲ್ಲವೆಂದು ಹೇಳುತ್ತಾರೆ. ಅಂದರೆ ಮದ್ರಾಸ್ ರಾಜ್ಯದ ಕಾಮರಾಜರ ಪ್ರಭಾವಕ್ಕೊಳಗಾಗಿ ಪವರ್‌ನ್ನು ಕೊಡುತ್ತಿದ್ದೀರಿ. ಈ ರೀತಿ ದಯವಿಟ್ಟು ಮಾಡಬಾರದು.

(ಶ್ರೀ ಗಂಗಾಧರ್ ನಾವೋಷಿ)

ಮದ್ರಾಸ್ ಸರ್ಕಾರದವರು ನಮ್ಮಿಂದ 9 ಪೈಸೆ ಲೆಕ್ಕದಲ್ಲಿ ಪವರನ್ನು ತೆಗೆದುಕೊಂಡು ಅದನ್ನು 13 ಪೈಸೆಗೆ ಬೇರೆಯವರಿಗೆ ಮಾರುತ್ತಿದ್ದಾರೆ. ಇದರಿಂದ ನಮ್ಮ ರಾಜ್ಯಕ್ಕೆ 50 ಪರ್‌ಸೆಂಟ್ ಲಾಸಾಗುತ್ತದೆ. ಯಾವುದೋ ಕಾರಣದಿಂದ ಕೇಂದ್ರದಲ್ಲಿರುವ ಅಧ್ಯಕ್ಷರ ಪ್ರಭಾವಕ್ಕೊಳಗಾಗಿ, ತಮಗೆ ಈಗಿರುವ ಕೆಲಸ ಉಳಿದುಕೊಳ್ಳುವಂತೆ ಮಾಡಿಕೊಳ್ಳಲು, ತಮ್ಮ ಪಾರ್ಟಿಯವರಿಗೆ ಇನ್ನೂ 4-5 ಟಿಕೇಟ್‌ಗಳು ಹೆಚ್ಚು ಸಿಕ್ಕಿದರೆ ತಮ್ಮ ಮಂತ್ರಿಮಂಡಲವೇ ಇರುವುದು ಎಂದು ತಿಳಿದುಕೊಂಡು, ಅವರು 13 ಪೈಸೆಗೆ ಮಾರಿಕೊಳ್ಳುತ್ತಿರುವುದು ತಿಳಿದೂ ಸಹ 9 ಪೈಸೆಗೆ ಮಾರುತ್ತಿದ್ದಾರೆ.

ಅಧ್ಯಕ್ಷರು.—ಕೇಂದ್ರ ಸರ್ಕಾರದ ಅಧ್ಯಕ್ಷರು ಯಾರು ?

ಶ್ರೀ ಗಂಗಾಧರ್ ನಾವೋಷಿ.—ಕಾಂಗ್ರೆಸ್ ಅಧ್ಯಕ್ಷರಾದ ಕಾಮರಾಜರು. ನಮ್ಮ ಭಾಗಗಳಿಗೆ ಹೆಚ್ಚು ಹೆಚ್ಚು ಲೈನ್‌ಗಳನ್ನು ಹಾಕಿ ಎಂದರೆ ಕಂಬಗಳಿಲ್ಲ, ಟ್ರಾನ್ಸ್‌ಫಾರ್ಮರ್ ಇಲ್ಲ, ವೈರ್ ಇಲ್ಲ, ಎಂದು ಹೇಳುತ್ತಾರೆ. ಅದೇ ಮದ್ರಾಸ್‌ನವರಿಗೆ, ಗೋವಾದವರಿಗೆ ಮತ್ತು ಆಂಧ್ರದವರಿಗೆ ಲೈನ್ ಕೊಡಲು ಎಲ್ಲಾ ಸಲಕರಣೆಗಳೂ ಇರುತ್ತವೆ. ನಮ್ಮ ಕಡೆಗೆ ಕೇವಲ ಒಂದು ಕೆ.ವಿ. ಲೈನ್ ಹಾಕುವುದಕ್ಕೆ ಸರ್ಕಾರದವರು ದುಡ್ಡು ಇಲ್ಲವೆಂದು ಹೇಳುತ್ತಾರೆ. ದಯಮಾಡಿ ಈ ರೀತಿ ಮಾಡಬಾರದು.

ಇನ್ನೊಂದು ವಿಷಯವೆಂದರೆ, ಈ ಕಾಂಗ್ರೆಸ್ ಸರ್ಕಾರದವರು ಆಂಧ್ರಕ್ಕೆ ತುಂಗಭದ್ರಾ ಜಲಾಶಯದ ನೀರನ್ನು ಕೊಟ್ಟಿರುವ ಕಾರಣ ಗುಲ್ಬರ್ಗಾಕ್ಕೆ ಹೆಚ್ಚಿನ ಹಾನಿಯಾಗುತ್ತದೆ. ಶರಾವತಿಯಿಂದ ಗುಲ್ಬರ್ಗಕ್ಕೆ ಪವರ್ ಬಂದಿದೆ, ಇಡೀ ಗುಲ್ಬರ್ಗ ಡಿವಿಜನ್‌ಗೆ ಒಂದೇ ಒಂದು ಲೈನ್ ಇರುವುದರಿಂದ ಆಗಾಗ್ಗೆ ಇನ್‌ಟರಪ್‌ಷನ್ ಆಗುವುದರಿಂದ ಪವರ್ ಹೋಗಿ ಲೈಟುಗಳು ಬಂದಾಗುತ್ತವೆ. ಇದರಿಂದ ಅನೇಕ ಸಾರಿ ಫ್ಯಾಕ್ಟರಿ ಕೆಲಸಗಳನ್ನು ನಿಲ್ಲಿಸಬೇಕಾಗುತ್ತದೆ ಈ ರೀತಿ ಕೆಲಸ ನಿಲ್ಲುವುದರಿಂದ 2 ಲಕ್ಷ ರೂಪಾಯಿಗಳ ನಷ್ಟ ಬರುತ್ತದೆ. ಕೆಲಸಗಾರರಿಗೆ ಸರಿಯಾಗಿ ಕೆಲಸ ಇರುವುದಿಲ್ಲ, ಇದಕ್ಕೆಲ್ಲಾ ಯಾರು ಹೊಣೆಗಾರರು ? ಯಾವ ಆಧಾರದ ಮೇಲೆ ತುಂಗಭದ್ರಾ ಪವರ್ ಸ್ಟೇಷನ್ ಕೆಲಸ ನಿಲ್ಲಿಸಿ ಆಂಧ್ರದವರಿಗೆ ನೀರನ್ನು ಕೊಟ್ಟಿರಿ ಎಂಬುದನ್ನು ತಿಳಿಸಬೇಕು. ಈ ರೀತಿ ನೀರನ್ನು ಕೊಟ್ಟಿರುವುದರಿಂದ ಹೈದರಾಬಾದ್ ಸ್ಟೇಟ್‌ನಲ್ಲಿ ವಿವಿಧ ರೀತಿಯ ನೀರಾವರಿ ಸೌಕರ್ಯಗಳಿಗೆ ಅವಕಾಶವಾಗಿದೆ. ಆದ್ದರಿಂದ ಇನ್ನುಮೇಲಾದರೂ ಸಣ್ಣ ಸಣ್ಣ ಕಾರ್ಖಾನೆಗಳವರಿಗೆ, ನೀರಾವರಿ ಕೆಲಸಗಳಿಗೆ ಹೆಚ್ಚು ಹೆಚ್ಚು ಪವರನ್ನು ಒದಗಿಸುವುದಕ್ಕೆ ಏರ್ಪಾಡು ಮಾಡಬೇಕೆಂದು ವಿನಂತಿ ಮಾಡಿಕೊಂಡು, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

[MR. DEPUTY SPEAKER in the Chair]

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ವಿದ್ಯುತ್ ಇಲಾಖಾ ಸಚಿವರಾದ ಶ್ರೀ ವೀರೇಂದ್ರ ಪಾಟೀಲ್‌ರವರು 1966-67ನೇ ವರ್ಷದ ವಿದ್ಯುತ್ ಮಂಡಲಿಯ ವಾರ್ಷಿಕ ಹಣಕಾಸಿನ ಚರ್ಚೆಯನ್ನು ಪ್ರಾರಂಭಿಸುತ್ತಾ ಒಂದು ಬರೆದಿರತಕ್ಕಂಥ ಹೇಳಿಕೆಯನ್ನು ಸಭೆಯ ಮುಂದೆ ಇಟ್ಟು ಉಪಕಾರ ಮಾಡಿದ್ದಾರೆ. ಈ ವರದಿಗಳನ್ನು ಹಿಂದೆ ನಾವು ಚರ್ಚೆ ಮಾಡುತ್ತಾ ಇದ್ದಾಗ ಈ ಮಾನ್ಯ ಸಭೆಯಲ್ಲಿ ಕೆಲವು ಗಂಭೀರವಾದ ಎಚ್ಚರಿಕೆಗಳನ್ನು ಕೊಡಲಾಗಿತ್ತು ಮತ್ತು ಸಲಹೆಗಳನ್ನು ಮಾಡಲಾಗಿತ್ತು. ಅವುಗಳಿಗೆ ಎಷ್ಟರಮಟ್ಟಿಗೆ ಮಂಡಲಿಯವರಾಗಲಿ ಅಥವಾ ಸರ್ಕಾರದವರಾಗಲಿ ಗಮನ ಕೊಟ್ಟಿದ್ದಾರೆ ಎನ್ನುವುದರ ಬಗ್ಗೆ ನನಗೆ ಸಂಶಯವಿದೆ. ಆ ಬಗ್ಗೆ ಏನೂ ಗಮನ ಕೊಟ್ಟಿಲ್ಲ ಎಂದು ನನಗೆ ಅನಿಸುತ್ತದೆ. ಈಗ ಈ ವರದಿಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಇಲ್ಲಿ 1962-63ನೇ ಸಾಲಿನ ವರದಿಗಳು ಕಂಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ರುಜು ಪಡೆದಿವೆ, 1963-64ರ ವರದಿಗೆ ಇನ್ನೂ ರುಜು ಆಗಬೇಕು, ಬಾಕಿ ಎರಡು ಸಾಲಿನ ಲೆಕ್ಕ ಪತ್ರಗಳು ಇನ್ನೂ ಆಗುತ್ತಾ ಇವೆ ಎಂದು ಬರೆದಿದ್ದಾರೆ. ಅದು ಏತಕ್ಕೆ ಹೀಗೆ ಆಗಿದೆ ಎಂದು ನನಗೆ ಗೊತ್ತಾಗುತ್ತಾ ಇಲ್ಲ; ಮಂಡಲಿಯವರಿಗೆ ಕಾರಣ ಗೊತ್ತಿರಬಹುದು. ಈ ಸಂದರ್ಭದಲ್ಲಿ ಶರಾವತಿಯ 8 ಮತ್ತು 9ನೆಯ ಜನರೇಟರುಗಳನ್ನು ಕಮಿಷನ್ ಮಾಡುವುದಕ್ಕೆ ಕೇಂದ್ರದವರು ಹಣ ಸಹಾಯ ಮಾಡಲು ಮುಂದೆ ಬರುತ್ತಾ ಇಲ್ಲ ಎನ್ನುವ ಅಭಿಪ್ರಾಯ ನಮಗೆ ತಿಳಿದುಬಂದಿದೆ. ಶರಾವತಿ ಯೋಜನೆಯನ್ನು ಆರಂಭ ಮಾಡುವಾಗಲೇ 10 ಜನರೇಟರುಗಳನ್ನು ಸ್ಥಾಪನೆ ಮಾಡಬೇಕು ಎನ್ನುವ ಅಭಿಪ್ರಾಯದಿಂದ ಯೋಜನೆಯನ್ನು ಇಟ್ಟುಕೊಂಡಿದ್ದರು. ಈಗ ನೀವು ಉತ್ಪಾದನೆ ಮಾಡಿರತಕ್ಕ ವಿದ್ಯುಚ್ಛಕ್ತಿಯನ್ನು ಬಳಸುವ ವ್ಯವಸ್ಥೆ ಮಾಡಿಲ್ಲ, ಆದುದರಿಂದ ನೀವು ಈ ಜನರೇಟರುಗಳನ್ನು ಈಗಲೇ ಕಮೀಷನ್ ಮಾಡಬೇಕಾದ ಅವಶ್ಯಕತೆ ಇಲ್ಲ ಎನ್ನುವ ಅಭಿಪ್ರಾಯವನ್ನು ಕೇಂದ್ರದಲ್ಲಿ ಯಾರೋ ತಳೆದಂತೆ ಕಾಣುತ್ತದೆ. ಒಂದು ದೃಷ್ಟಿಯಿಂದ ಅವರ

ಅಭಿಪ್ರಾಯ ಸರಿ. ಅದು ನಮ್ಮ ದೌರ್ಭಾಗ್ಯ. ನಾವು ಅಂತಹ ಒಂದು ರಾಜ್ಯ ಸರ್ಕಾರವನ್ನು ಹೊಂದಿದ್ದೇವೆ. ಒಂದು ಕಡೆ ಅವರಿಗೆ ಏನೇನೋ ಮಾಡಬೇಕು ಎನ್ನುವ ಆಸೆ ಇದೆ. ಆದರೆ ಯಾವುದನ್ನೂ ಮಾಡತಕ್ಕ ಶಕ್ತಿಯಾಗಲಿ, ಸಾಮರ್ಥ್ಯವಾಗಲಿ ದಕ್ಷತೆಯಾಗಲಿ ಇಲ್ಲ. ಅವರ 4 ವರ್ಷ ಚಿಲ್ಲರೆ ಕಾರ್ಯ ಸಮೀಕ್ಷೆಯಿಂದ ನಮಗೆ ಅರ್ಥವಾಗಿದೆ ; ಅವರು ಜವಾಬ್ದಾರಿ ನಿರ್ವಹಿಸಲಾರರು ಎಂದು ನಮಗೆ ಅರ್ಥವಾಗಿದೆ. ಇಲ್ಲಿ ಒಂದು ವಿಷಯವನ್ನು ನಾವು ಹೇಳಬೇಕು. ಈ ಪ್ಲಾನಿಂಗ್ ಕಮೀಷನ್ ಮತ್ತು ಕೇಂದ್ರದ ಕೆಲವು ನೀತಿಗಳು ಏನು ಇವೆ ಅವನ್ನು ನೋಡಿದ್ದರಲ್ಲಿ ಯಾವ ಒಂದು ನಿಷ್ಪಕ್ಷಪಾತವಾದ ಹಾಗೂ ದೇಶದ ಎಲ್ಲಾ ಭಾಗಗಳನ್ನೂ ಅಭಿವೃದ್ಧಿ ಮಾಡತಕ್ಕ ನೀತಿಯನ್ನು ಕೇಂದ್ರ ಅನುಸರಿಸುತ್ತಾ ಇಲ್ಲ. ವಿದೇಶಿ ವಿನಿಮಯವನ್ನು ರಾಜ್ಯಗಳಿಗೆ ದೊರಕಿಸಿಕೊಡುವಾಗಲೂ ಕೂಡ ನಾವು ಕೇಂದ್ರದವರ ಹತ್ತಿರ ಭಿಕ್ಷೆ ಬೇಡಬೇಕಾಗಿದೆ. ಅವರು ಮನಸ್ಸಿಗೆ ಬಂದಹಾಗೆ ಹಂಚ ತಕ್ಕವರು. ಅದೇ ರೀತಿ ಕೈಗಾರಿಕೆಗಳಿಗೆ ಲೈಸನ್ಸನ್ನು ಕೊಡತಕ್ಕ ಅಧಿಕಾರವನ್ನು ಅವರು ಇಟ್ಟು ಕೊಂಡಿದ್ದಾರೆ. ಈ ವಿಷಯಗಳನ್ನು ಮಾನ್ಯ ಮಂತ್ರಿಗಳು ಹೆಚ್ಚು ಅಪಾಲಜ಼ೆಟಿಕ್ ಆಗಿ ಪ್ರಸ್ತಾಪ ಮಾಡಿದ್ದಾರೆ. ನಾವು ಅಲ್ಲಿ ಹೋಗಿ ಕೇಳಿಕೊಂಡು ಬರಬೇಕ ಎಂದು ಹೇಳಿದ್ದಾರೆ. ಕೈಗಾರಿಕೆಗಳಿ ಲೈಸನ್ಸನ್ನು ಕೊಡುವಾಗಲೂ ಕೂಡ ಕೇಂದ್ರದವರು ನಿಷ್ಪಕ್ಷಪಾತವಾದ ನೀತಿ ಅನುಸರಿಸಿಲ್ಲ. ಕೈಗಾರಿಕಾ ಅಭಿವೃದ್ಧಿ ದೃಷ್ಟಿಯಿಂದ ಅವರ ನೀತಿ ಸಮರ್ಥನೀಯವಾಗಿಲ್ಲ ಎಂದು ನಾವು ಇವೊತ್ತು ಹೇಳಬೇಕಾಗಿದೆ. ಇನ್ನು ಸೆಂಟ್ರಲ್ ಇರ್ರಿಗೇಷನ್ ಅಂಡ್ ಪವರ್ ಕಮಿಷನ್ ಏನು ಇದೆ ಅವರೂ ಕೂಡ ಅಡ್ಡಿ ಬರುತ್ತಾ ಇದ್ದಾರೆ. ಈ ಕೆಲಸಗಳಿಗೆಲ್ಲಾ ಅಡಚಣೆಯನ್ನು ತಂದು ಒಡ್ಡುತ್ತಾ ಇರುವುದ ರಿಂದ ಈಚೆಗೆ ಮುಖ್ಯಮಂತ್ರಿಗಳು ಒಂದು ಅಭಿಪ್ರಾಯವನ್ನು ಹೇಳಿದರು. ನಾವು ಕಾಳಿ ನದಿ ಯೋಜನೆಗೆ ಅನೇಕ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಾ ಇದ್ದೇವೆ, ವರಾಹಿ ಯೋಜನೆಗೂ ಕೂಡ ಸಾಕಾದಷ್ಟು ಖರ್ಚಾಗಿದೆ. ನಮ್ಮ ರಾಜ್ಯದ ಪ್ರಕೃತಿ ಸಂಪತ್ತುಗಳನ್ನು ರೂಢಿಸಿ ನಮ್ಮಲ್ಲಿರ ತಕ್ಕ ವಿದ್ಯುತ್ತನ್ನು ನಾವು ಪೂರ್ತಿ ಉತ್ಪತ್ತಿ ಮಾಡುವುದಾದರೆ, ಸುಮಾರು 5 ಸಾವಿರ ಮೆಗಾವಾಟ್ಸ್ ಉತ್ಪತ್ತಿ ಮಾಡಬಹುದು ಎಂದು ಒಂದು ಸಾಮಾನ್ಯವಾದ ಅಂದಾಜು ಇದೆ. ಇದನ್ನು ಖರ್ಚು ಮಾಡುವುದಕ್ಕೂ ಕೂಡ ಕೆಲವು ಕೈಗಾರಿಕಗಳನ್ನು ಅಂದಾಜು ಮಾಡಲಾಗಿದೆ ಎಂದು ಹೇಳಿದರು. ನೀರಾವರಿ ಸೌಲಭ್ಯಗಳಿಗೆ ಮತ್ತು ಗ್ರಾಮಾಂತರ ಪ್ರದೇಶಗಳಿಗೆ ದೀಪ ಕೊಡುವುದಕ್ಕೆ ಒಂದು ಸಾಮಾನ್ಯ ಗುರಿಯನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆ, ಎಂದರೆ ಈ ವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ಅದರ ಬಳಕೆ ಹೆಚ್ಚು ಕಡಿಮೆ ಒಂದಕ್ಕೊಂದಕ್ಕೆ ಪೂರಕವಾಗಿದೆ ಎಂದು ಹೇಳಬಹುದು. ಆದರೆ ಮೂಲತಃ ಈವೊತ್ತು ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಇರತಕ್ಕ ಬಂಡವಾಳದ ಕೊರತೆ ಜೊತೆಗೆ, ಕೇಂದ್ರದವರು ಬಂಡವಾಳಕ್ಕೆ ನೆರವು ಕೊಡುವ ಬದಲು ಕೊರತೆಯನ್ನು ದೊಡ್ಡ ದನ್ನಾಗಿ ಮಾಡಿಕೊಂಡು ಯಾವೊಂದೂ ಕೈಗಾರಿಕಾ ಸ್ಥಾಪನೆಗೆ ಲೇಸನ್ಸ್ ಕೊಡದೇ ಇರತಕ್ಕ ಸ್ಥಿತಿ ಇದೆ. ಒಟ್ಟಿನಲ್ಲಿ ಇದು ದೇಶದ ಅಭಿವೃದ್ಧಿಯನ್ನು ತಡೆಗಟ್ಟತಕ್ಕಂಥ ಕ್ರಮವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೇಂದ್ರದ ಪ್ಲಾನಿಂಗ್ ಕಮೀಷನ್ ಆಗಲಿ ಮತ್ತು ಕೇಂದ್ರ ಸರ್ಕಾರವೇ ಆಗಲಿ ಈ ರಾಜ್ಯಕ್ಕೆ ಈ ವಿಷಯದಲ್ಲಿ ಒಂದು ಹೆಚ್ಚಿನ ಅಧಿಕಾರವನ್ನು ಕೊಡಬೇ ಕಾಗುತ್ತದೆ. ಅಭಿವೃದ್ಧಿ ಬಗ್ಗೆ ನಾವು ರಾಜ್ಯದ ಮಟ್ಟದಲ್ಲಿ ಒಂದು ಯೋಜನೆಯನ್ನು ಮಾಡುತ್ತೇವೆ. ಅದನ್ನು ಅವರು ಕೆಲವು ಮಟ್ಟಿನ ಬದಲಾವಣೆ ಜೊತೆಗೆ ಅಂಗೀಕಾರ ಮಾಡಬೇಕಾಗುತ್ತದೆ. ಅದೂ ಇಲ್ಲದೇ ಹೋದರೆ ವಿದೇಶಿ ವಿನಿಮಯಕ್ಕಾಗಿ ಲೈಸನ್ಸಿಗಾಗಿ, ಪ್ರತಿಯೊಂದಕ್ಕೂ ಒಂದು ಮುನಿಸಿಪಲ್ ಕಾರ್ಪೊರೇಷನ್ ರೀತಿಯಲ್ಲಿ ಒಂದು ರಾಜ್ಯ ಸರ್ಕಾರ ಅವರ ಕಡೆ ಹೋಗಿ ಯಾಚಿಸುವುದಾದರೆ, ಅವರ ಕೈ ಕಾಯುವುದಾದರೆ, ಅದರಿಂದ ವಿಳಂಬವಾಗುತ್ತದೆ ಅದರಿಂದ ಏನೂ ಪ್ರಯೋಜನ ಆಗುವು ದಿಲ್ಲ. ಈ ನೀತಿಯನ್ನು ಸರ್ಕಾರ ಬದಲಾವಣೆ ಮಾಡಿಕೊಳ್ಳಬೇಕು.

ಇನ್ನು ಮಂಡಲಿಯ ಕೆಲಸಗಾರರ ಬಗ್ಗೆ ಅನೇಕ ಮಿತ್ರರು ಈಗಾಗಲೇ ಕಟುವಾದ ಟೀಕೆಗಳನ್ನು ಮಾಡಿದ್ದಾರೆ. ಹಿಂದೆ ಒಂದು ಸರ್ಕಾರದ ಇಲಾಖೆಯಾಗಿ ಕೆಲಸ ಮಾಡುತ್ತಾ ಇದ್ದುದನ್ನು ಈವೊತ್ತು ಒಂದು ಮಂಡಲಿಯನ್ನಾಗಿ ಮಾಡಿ ಈ ಕೆಲಸವನ್ನು ನಾವು ಅವರಿಗೆ ವಹಿಸಿಕೊಟ್ಟಿದ್ದೇವೆ. ಸರ್ಕಾರ ದವರು ಕೆಲವು ನೆರವುಗಳನ್ನು ಹಣದ ರೂಪದಲ್ಲಿ ಕೊಟ್ಟಿದ್ದಾರೆ. 3ನೇ ಪಂಚವಾರ್ಷಿಕ ಯೋಜನೆಯಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ ಎಂದು ಅವರು ಹೇಳಿದ್ದಾರೆ. ಅವರೇ ಶಹಭಾಸ್‌ಗಿರಿ ಹೇಳಿಕೊಳ್ಳ ಬೇಕು. ಮದ್ರಾಸನ್ನು ಹೋಲಿಸಿ ನೋಡಿದರೆ, ನಮ್ಮ ಗುರಿಗಳನ್ನು ಹೋಲಿಸಿ ನೋಡಿದರೆ, ಏನೂ ಕೆಲಸ ಮಾಡಿಲ್ಲ. ಪ್ರಗತಿ 3ನೇ ಪಂಚವಾರ್ಷಿಕ ಯೋಜನೆಯಲ್ಲಿ ಹೇಳಿಕೊಳ್ಳುವಷ್ಟು ನಡೆದಿಲ್ಲ ಎಂದು ಪಂಪುಸೆಟ್ಟುಗಳನ್ನು ಉದಾಹರಣೆಯಾಗಿ ಇಟ್ಟುಕೊಂಡು ಹೇಳಬಹುದು, ಗ್ರಾಮಾಂತರಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುವ ವಿಷಯದಲ್ಲಿ ಹೇಳಬಹುದು. ಇವುಗಳಲ್ಲಿ ನಾವು ಗುರಿಯನ್ನು ಮುಟ್ಟು ವುದಕ್ಕೆ ಸಾಧ್ಯವಿಲ್ಲ. ಎಷ್ಟು ಕೆಲಸ ಮಾಡಬೇಕಾಗಿತ್ತೊ ಅಷ್ಟನ್ನು ಮಾಡಲಿಲ್ಲವೆಂದು ಬಹಳ ಗೌರವದಿಂದ ಎಲೆಕ್ಟ್ರಿಸಿಟಿ ಬೋರ್ಡಿನವರು ಮತ್ತು ಸರ್ಕಾರದವರು ಒಪ್ಪಿಕೊಳ್ಳುವುದು ಬಹಳ ಒಳ್ಳೆಯ ಕೆಲಸವೆಂದು ನನಗನ್ನಿಸುತ್ತದೆ.

(ಶ್ರೀ ಎಸ್. ಗೋಪಾಲಗೌಡ)

ಇನ್ನು ಕೆಲವು ಸದಸ್ಯರು ಕಾರ್ಮಿಕರ ನೀತಿಯ ಬಗ್ಗೆ ಮಾತನಾಡಿದ್ದಾರೆ. ಹಿಂದೆ ಶ್ರೀಮಾನ್ ಹನುಮಂತಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ಕಾರ್ಮಿಕರ ಒಂದು ದೊಡ್ಡ ಚಳುವಳಿಯೇ ನಡೆಯಿತು. ಅವರು ಸುಮಾರು 27-28 ಬೇಡಿಕೆಗಳನ್ನು ಇಟ್ಟಿದ್ದರು. ಇತ್ತೀಚೆಗೆ ಲೇಬರ್ ಯೂನಿಯನ್ ಪತಿಯಿಂದ ಒಂದು ಮೆಮೊರ್ಯಾಂಡಂನ್ನು ಸಬ್‌ಮಿಟ್ ಮಾಡಿದ್ದಾರೆಂದು ನಾನು ಕೇಳಿದ್ದೇನೆ. ಆದರೆ ಕೇಂದ್ರದವರು ಒಂದು ಸೆಂಟ್ರಲ್ ವೇಜ್‌ಬೋರ್ಡ್‌ನ್ನು ನೇಮಕಮಾಡಿದ್ದಾರೆ, ಅವರು ಕಾರ್ಮಿಕರಿಗೆ ಬೋನಸ್ ಕೂಡ ಕೊಡಬೇಕೆಂದು ಹೇಳಿದ್ದಾರೆ. ಇವತ್ತು ವಿದ್ಯುಚ್ಛಕ್ತಿ ಮಂಡಲಿ ಸುಮಾರು 26 ಸಾವಿರ ಜನ ಕಾರ್ಮಿಕರನ್ನುಳ್ಳಂಥ ಒಂದು ದೊಡ್ಡ ಮಾಲೀಕ. ಸರ್ಕಾರದ ಎಲ್ಲಾ ಕಾನೂನು ಕಟ್ಟಳೆಗಳನ್ನೂ ಪರಿಪಾಲನೆ ಮಾಡತಕ್ಕ ಒಂದು ದೊಡ್ಡ ಜವಾಬ್ದಾರಿಯನ್ನು ಹೊತ್ತಿರತಕ್ಕಂಥಾದ್ದಾಗಿದೆ. ಆದರೂ ಈ ಮಂಡಲಿ ಮತ್ತು ಸರ್ಕಾರದವರು ಒಟ್ಟಿಗೆ ಕಲೆತು ಮಾತನಾಡಿ ಕೆಲವೊಂದು ಬೇಡಿಕೆಯನ್ನು ಈಡೇರಿಸತಕ್ಕ ಮನೋಭಾವ ಇವರಲ್ಲಿ ಕಂಡುಬರಲಿಲ್ಲ ವೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ಸ್ ಆಕ್ಟ್‌ನ ಒಂದು ಕಾಯಿದೆ ಪ್ರಕಾರ ಅವರು ಕೆಲಸ ಮಾಡಬೇಕೆಂದು ಅವರ ಬೇಡಿಕೆಗಳಲ್ಲಿ ಒಂದಾಗಿತ್ತು. ಆ ಬಗ್ಗೆ ಚರ್ಚೆಮಾಡಲು ಒಂದು ಸರಿಯಾದ ಯಂತ್ರವನ್ನು ರಚನೆ ಮಾಡಿ ಅವರ ಬೇಡಿಕೆಗಳನ್ನು ಅವರ ಮುಂದೆ ಒಪ್ಪಿಸಿ ಯಾವ್ಯಾವ ಬೇಡಿಕೆಯನ್ನು ಮಾನ್ಯ ಮಾಡುವುದಕ್ಕೆ ಸಾಧ್ಯವೆಂಬುದಾಗಿ ಮಂಡಲಿಯವರು ಪ್ರಯತ್ನ ಮಾಡಬಹುದಾಗಿತ್ತು. ಈಗ ಏನೂ ಇಲ್ಲದೆ ಸರ್ಕಾರದವರ ಹಾಗೆ ಒಂದು ಬ್ಯೂರೊಕ್ರಾಟಿಕ್ ಆಟಿಟ್ಯೂಡ್ ಎಂಬುದಾಗಿ ಏನು ಹೇಳುತ್ತಾರೆಯೋ ಆ ರೀತಿಯಲ್ಲಿ ಮಂಡಲಿ ಕೆಲಸಮಾಡುತ್ತಿದೆ. ಕೇವಲ ಜವಾನರಂತೆ ಕಾರ್ಮಿಕರನ್ನು ನೋಡುವುದು ಸರಿಯಾದ ರೀತಿಯಲ್ಲ.

ಇನ್ನೊಂದು ವಿಷಯ. ಈ ಮಂಡಲಿಯಲ್ಲಿ 13 ಸಾವಿರ ಜನರನ್ನು ತಾತ್ಕಾಲಿಕ ಕಾರ್ಮಿಕ ರೆಂಬುದಾಗಿಟ್ಟುಕೊಂಡಿದ್ದಾರೆ. ಆ ಸಂಖ್ಯೆ ದಿನದಿನಕ್ಕೂ ಬೆಳೆಯುತ್ತಾ ಇದೆ. ಇವತ್ತು ಕೆಲವು ಕೆಲಸಗಳನ್ನು ಕಂಟ್ರಾಕ್ಟ್ ಮೂಲಕ ಮಾಡುತ್ತೇವೆಂದು ಬೇರೆ ಹೇಳುತ್ತಿದ್ದಾರೆ. ಈ 13 ಸಾವಿರ ಜನ ಕಾರ್ಮಿಕರನ್ನು Casual labourers ಆಗಿ ಇಟ್ಟುಕೊಂಡಿದ್ದಾರೆ. ಅವರಿಗೆ ಕೊಡತಕ್ಕದ್ದು ಕೇವಲ ರೂ. 2-20 ಅಥವಾ ರೂ. 2-45 ದಿನಗೂಲಿ. ಅವರಿಗೆ ಬೇಕಾದಾಗ ಕೆಲಸ ಕೊಡುವುದು, ಬೇಡದೆ ಇದ್ದಾಗ ಅವರನ್ನು ಕೆಲಸದಿಂದ ಬಿಡಿಸುವುದು. ಇದು ಯಾವ ದೃಷ್ಟಿಯಿಂದಲೂ ಸಮರ್ಥ ನೀಯವಾದುದಲ್ಲ. ಸಾಮಾನ್ಯವಾಗಿ ಚಿಕ್ಕ ಒಂದು ಕೈಗಾರಿಕೆ ಸಂಸ್ಥೆಯಲ್ಲಿ 100 ಜನರು ಕೆಲಸ ಮಾಡುತ್ತಿರುವಾಗ ಒಂದೊಂದು ದಿವಸ 5 ಜನರೋ ಅಥವಾ 10 ಜನರೋ ಹೆಚ್ಚಾಗಬಹುದು. ಇನ್ನೊಂದು ದಿವಸ 5 ಜನಗಳಿಗೆ ಕಡಮೆ ಆಗಬಹುದು ಅದನ್ನು ನಾವು ಅರ್ಥಮಾಡಿಕೊಳ್ಳಬೇಕು. ಹೀಗೆ ಸೇಕಡ 50 ರಷ್ಟು ಜನರು Casual labourers ಇರುತ್ತಾರೆ. ಅದರಲ್ಲೂ ಕೆಲವರು ಸುಮ್ಮನೆ ಬರುವುದು, ನಾಮಿನಲ್‌ರೋಲ್ ಹಾಕಿ ಹೋಗುವುದು. ಕೆಲಸವಿದ್ದರೆ ಮಾಡುವುದು, ಇಲ್ಲದಿದ್ದರೆ ಮನೆಗೆ ಹೋಗಿ ಬಿಡುವುದು-- ಇಂತಹ ಪರಿಸ್ಥಿತಿಗಳು ಕೆಲವು ಕಡೆಗಳಲ್ಲಿ ಆಗುತ್ತಿರುತ್ತವೆ. ಇಂಥಾದ್ದನ್ನೆಲ್ಲಾ ಮಂಡಲಿಯವರು ತೀವ್ರವಾಗಿ ಪರಿಶೀಲನೆ ಮಾಡಬೇಕು. ಯಾರ್ಯಾರು ಬಹಳ ವರ್ಷಗಳ ತನಕ ತಾತ್ಕಾಲಿಕವಾಗಿ ಸೇವೆ ಮಾಡಿರುತ್ತಾರೋ ಅಂತಹವರನ್ನೆಲ್ಲಾ ಖಾಯಂ ಗೊಳಿಸಬೇಕು. ಇಲ್ಲದಿದ್ದರೆ ಇದರಿಂದ ಒಂದು ದೊಡ್ಡ ಕೋಲಾಹಲವಾಗುವುದು ಮಾತ್ರವಲ್ಲ, ಸಹಸ್ರಾರು ಕುಟುಂಬಗಳು ಇವತ್ತಿನ ಒಂದು ಆಧುನಿಕ ರೀತಿಯ ಕಾನೂನು ಕಟ್ಟಳೆಗಳಿಂದ ಯಾವ ರೀತಿಯ ರಕ್ಷಣೆಯನ್ನೂ ಪಡೆಯದೆ ಅನೇಕ ಕಷ್ಟನಷ್ಟಗಳಿಗೆ ತುತ್ತಾಗುತ್ತವೆ. ಇಂಥಾದ್ದನ್ನು ಸರ್ಕಾರದವರು ಕೂಡಲೇ ಪರಿಶೀಲನೆ ಮಾಡಬೇಕು. ಅದೂ ಅಲ್ಲದೆ ಕಾರ್ಮಿಕರಿಗೆ ಇಂಟೆರಿಮ್ ರಿಲೀಫ್ ಕೊಡುವ ಬಗ್ಗೆ ಬೋರ್ಡಿನವರು ಜಾಗ್ರತೆಯಾಗಿ ವಿಚಾರಮಾಡಬೇಕು. ಯಾವ್ಯಾವ ಬೇಡಿಕೆಗಳನ್ನು ಮಾನ್ಯ ಮಾಡಬಹುದು, ಇಂಟೆರಿಂ ರಿಲೀಫ್ ಎಷ್ಟು ಕೊಡಬಹುದು ಎಂಬುದನ್ನು ಮಂಡಲಿಯವರು ವಿಚಾರಮಾಡಬೇಕು. ವೇಜ್‌ಬೋರ್ಡು ರಚನೆಯಾದಮೇಲೆ ಅವರು ಕಾರ್ಮಿಕರ ಪರವಾಗಿ ಈ ಬಗ್ಗೆ ಪ್ರತ್ಯೇಕವಾಗಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ. ಕಾರ್ಮಿಕರ ಪರವಾಗಿ ಈ ವಿಷಯದಲ್ಲಿ ಮಂಡಲಿಯವರು ಯಾವುದಾದರೂ ಒಂದು ತೀರ್ಮಾನವನ್ನು ಕೂಡಲೇ ಕೈಗೊಳ್ಳಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಹೇಳಬಯಸುತ್ತೇನೆ.

ಇನ್ನು ಶ್ರೀ ಎಂ. ಎಸ್. ಥ್ಯಾಕರ್ ಅವರ ಅಧ್ಯಕ್ಷತೆಯಲ್ಲಿ ಒಂದು ಟ್ಯಾರಿಫ್ ಕಮಿಷನ್ ಎಂದು ರಚನೆ ಮಾಡಿದ್ದಾರೆ. ಇವತ್ತು ಆ ಕಮಿಟಿಯವರ ಶಿಫಾರ್ಸಿನಂತೆ ಒಂದು ಕ್ಲುಪ್ತವಾದ ಟ್ಯಾರಿಫ್ ಪಟ್ಟಿಯನ್ನು ಹೊರಡಿಸಿದ್ದಾರೆ. ಆ ಪ್ರಕಾರ ಬಳಕೆದಾರರ ಹಿತವನ್ನು ಗಮನದಲ್ಲಿಟ್ಟುಕೊಂಡು ಈ ರೀತಿಯಾಗಿ ದರಗಳನ್ನು ನಿಗದಿಮಾಡಲಾಗಿದೆಯೆಂದು ಮಾನ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ

ಹೇಳಿದ್ದಾರೆ. ಆದರೆ ಬಳಕೆದಾರರ ಹಿತ ಯಾವ ರೀತಿ ಅದರಲ್ಲಿ ರಕ್ಷಣೆ ಮಾಡಿದ್ದಾರೆ ಎಂದು ಹೇಳಲಿಲ್ಲ. ಇವತ್ತು ನಾವು ಹೆಚ್ಚಿಗೆ ವಿದ್ಯುಚ್ಛಕ್ತಿಯನ್ನು ಎಲ್ಲ ರೀತಿಯಲ್ಲೂ ಬಳಸಬೇಕು ಎಂಬುದಾಗಿ ಜನಗಳಿಗೆ ಒಂದು ಕಡೆ ಹೇಳುವುದು. ಮತ್ತೆ ಇನ್ನೊಂದು ಕಡೆ ಸಾಮಾನ್ಯವಾಗಿ ವೃಥಾ ಯಾರೂ ವಿದ್ಯುಚ್ಛಕ್ತಿಯನ್ನು ಬಳಸಬಾರದು ಎಂಬುದಾಗಿ ಹೇಳುವುದು. ಆಗಾಗ್ಗೆ ಅದರ ಬಳಕೆಯ ಬೆಲೆಯನ್ನು ಜಾಸ್ತಿಮಾಡುತ್ತಾ ಹೋಗುವುದು. ಹೀಗಾಗಿ ಜನಗಳು ವಿದ್ಯುಚ್ಛಕ್ತಿಯನ್ನು ಬಳಸುವ ಬಗ್ಗೆ ಬಹಳವಾಗಿ ಭಯಪಡುತ್ತಿದ್ದಾರೆ. ಕಡಮೆಯಾಗಿಯೂ ಬಳಸುತ್ತಿದ್ದಾರೆ. ಮದ್ರಾಸ್ ಮತ್ತು ಗೋವಾಗಳಿಗೆ ಮತ್ತು ಇತರ ಹೊರಗಡೆಯ ಪ್ರಾಂತಗಳಿಗೆ ವಿದ್ಯುಚ್ಛಕ್ತಿಯ ಬಲ್ಕ್ ಮಾರಾಟ ಮಾಡುವಾಗ ವಿದ್ಯುಚ್ಛಕ್ತಿ ಉತ್ಪಾದನಾ ವೆಚ್ಚಗಳನ್ನೂ ಸರಿಯಾಗಿ ಗಮನಕ್ಕೆ ತಗೆದುಕೊಳ್ಳದೆ ಬಹಳ ಕಡಮೆ ಬೆಲೆಯಲ್ಲಿ ಮಾರುವ ಸ್ಥಿತಿಗೆ ಮಂಡಲಿಯವರು ಬಂದಿದ್ದಾರೆಂದು ಹೇಳಬಹುದು. ಇಂತಹ ವಿಚಾರಗಳನ್ನು ಕೂಡಲೇ ಪರಿಶೀಲನೆ ಮಾಡಬೇಕು. ಇನ್ನು ನೀರಾವರಿಗಾಗಿ ಕೊಡತಕ್ಕ ಪಂಪುಸೆಟ್ಟುಗಳಿಂದ ಕೂಡ ಕಮೆನ್ಸುರೇಟ್ ಆಗಿ ಪ್ರತಿಫಲ ಇಲ್ಲ. ಬೇಕಾದಷ್ಟು ಹಣವನ್ನು ವಿದ್ಯುಚ್ಛಕ್ತಿ ಪಂಪುಸೆಟ್ಟುಗಳಿಗೆ ಹಾಕಿದ್ದರೂ ಕೇವಲ ನಾಲ್ಕೈದು ಎಕರೆಗಳಷ್ಟು ಮಾತ್ರ ಸಾಗು ಮಾಡುವುದಾಗಿದೆ. ಇದರಿಂದ ಅಷ್ಟಾಗಿ ಲಾಭದಾಯಕವಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲವೆಂದು ಅನೇಕ ಜನ ರೈತರು ಈಗಾಗಲೇ ವ್ಯಕ್ತಪಡಿಸಿದ್ದಾರೆ. ಇವತ್ತು ಒಂದೊಂದು ಪಂಪು ಸೆಟ್ಟಿಗಾಗಿ 20-30 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ನಾಳೆ ಅವು ಹಾಳಾಗುವ ಸ್ಥಿತಿಗೆ ಬರಬಾರದು. ಈ ವಿಚಾರದಲ್ಲಿ ನಮಗೆ ದೂರದೃಷ್ಟಿ ಇರಬೇಕು. ನಮಗೆ ಆಹಾರ ಪರಿಸ್ಥಿತಿಯಲ್ಲಿರತಕ್ಕ ದೊಡ್ಡ ಕೊರತೆಗೆ ನೀರಾವರಿ ಸೌಲಭ್ಯಗಳಿಗೆ ಈ ರಾಜ್ಯದಲ್ಲಿರತಕ್ಕ ಮಿತಿಯೇ ಕಾರಣ. ಇರತಕ್ಕ ನೀರಾವರಿ ಕಾಮಗಾರಿಗಳನ್ನು ಜಾಗ್ರತೆಯಾಗಿ ಮಾಡಿ ಮುಗಿಸಿ ಅವನ್ನು ಸರಿಯಾಗಿ ಉಪಯೋಗಿಸಿಕೊಳ್ಳದೇ ಇರುವ ಸ್ಥಿತಿಯಲ್ಲಿದ್ದೇವೆ. ಈಗ ಬಾವಿಗಳನ್ನು ಹೆಚ್ಚು ತೆಗೆಯಬೇಕೆಂಬ ಅಭಿಪ್ರಾಯವಿದೆ. ಆದರೆ ಆ ಒಂದು ಗುರಿಯನ್ನು ಮುಟ್ಟುವ ಸ್ಥಿತಿಯಲ್ಲಿ ಎಷ್ಟು ಹಣವನ್ನು ಮಂಜೂರುಮಾಡುತ್ತಾರೋ ಅದು ರೈತರಿಗೆ ಸಕಾಲದಲ್ಲಿ ನಿಜವಾಗಿ ಮುಟ್ಟುತ್ತದೆಯೇ ಇಲ್ಲವೇ ಎನ್ನುವುದನ್ನು ಮಂಡಲಿಯವರು ಪರಿಶೀಲನೆ ಮಾಡಬೇಕು. ಇವತ್ತು ಏನಾಗಿದೆ ಇವೆಲ್ಲವೂ ಕುರುಡು ರೀತಿಯಲ್ಲಿ ನಡೆಯುತ್ತಿದೆ. ಅದನ್ನು ನಾವು ಈ ಬೋರ್ಡಿನಲ್ಲಿ ಕಾಣುತ್ತಿದ್ದೇವೆ. ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿ ಲೈನ್ ಕೊಡುವ ಬಗ್ಗೆ ಹಿಂದೆ ಎಷ್ಟೋ ಹಣ ವ್ಯರ್ಥವಾಗಿದೆ. ಒಂದು ಸಾರಿ ಒಂದು ಗ್ರಾಮದಲ್ಲಿರತಕ್ಕವರು ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಕೊಡಿ ಎಂದು ಕೇಳಿದ್ದಕ್ಕೆ ದೀಪ ಮಾತ್ರ ಕೊಡುತ್ತೇವೆಂದು ಹಿಂದಿನ ಒಬ್ಬ ಅಧ್ಯಕ್ಷರು ಉತ್ತರ ಬರೆದಿರುವುದನ್ನು ಈ ಸಂದರ್ಭದಲ್ಲಿ ನಾನು ಹೇಳಬೇಕಾಗಿದೆ. ಹೀಗೆ ಕೇವಲ ದೀಪ ಮಾತ್ರ ಕೊಟ್ಟರೆ ನೀರಾವರಿ ಸೌಕರ್ಯ ಯಾವ ರೀತಿ ಉಂಟಾಗಬೇಕು ? ಎಲೆಕ್ಟ್ರಿಕ್ ಪಂಪುಸೆಟ್ಟುಗಳಿಗೆ ಸಾಕಷ್ಟು ಕೊಡದಿದ್ದರೆ ವ್ಯವಸಾಯದ ಪ್ರಗತಿಯಾಗುವ ಬಗೆ ಹೇಗೆಂದು ನಾನು ಪ್ರಶ್ನೆ ಮಾಡಬೇಕಾಗಿದೆ. ಸಾಮಾನ್ಯವಾಗಿ ಒಂದು ಗ್ರಾಮದವರು ನಮಗೆ ದೀಪ ಬೇಕು ಎಂಬುದಾಗಿ ಕೇಳಿದರೆ ಅದೇ ತಾಲ್ಲೂಕಿಗೆ ಪಂಪುಸೆಟ್ಟುಗಳನ್ನು ಬಳಸುವವರು ಯಾರ್ಯಾರು ಎಂಬುದನ್ನು ಎಸ್ಟಿಮೇಟು ಮಾಡಬೇಕು. ಕೈಗಾರಿಕೆಗಳನ್ನು ಅಲ್ಲಿ ಮಾಡತಕ್ಕವರು ಯಾರ್ಯಾರು ಎಂಬುದನ್ನೂ ಸಹ ಅಂದಾಜು ಮಾಡಬೇಕು. ಇಂತಹ ಒಂದು ಸಮಗ್ರವಾದ ದೃಷ್ಟಿಯನ್ನು ಬೋರ್ಡಿನವರು ಹಾಕಿಕೊಳ್ಳಬೇಕು. ಆ ರೀತಿ ಮಾಡದೆ ಪಂಪುಸೆಟ್ಟುಗಳನ್ನು ಕೆಲವರಿಗೆ ಒದಗಿಸುವುದು ಕೆಲವರಿಗೆ ಮೆಟೀರಿಯಲ್ಸ್ ಇಲ್ಲವೆಂದು ಹೇಳುವುದು—ಇದರಿಂದ ರಾಜ್ಯದಲ್ಲಿ ವ್ಯವಸಾಯ ಮತ್ತು ಕೈಗಾರಿಕೆಯ ಪ್ರಗತಿಯನ್ನು ಕುಂಠಿತಗೊಳಿಸುತ್ತದೆ. ಈ ಬಗ್ಗೆ ಖರ್ಚುವೆಚ್ಚಗಳನ್ನು ಮಾಡುವುದಕ್ಕೆ ಇವರು ಹಣವನ್ನು ಕೇಂದ್ರದಲ್ಲಿ ಬೇಡಿ ತರುವ ಪರಿಸ್ಥಿತಿಗೆ ಬಂದಿದ್ದಾರೆ. ಹೀಗಾದರೆ ಇನ್ನು ಎಷ್ಟರಮಟ್ಟಿಗೆ ನಾವು ಪ್ರಗ ಯನ್ನು ಸಾಧಿಸಬಹುದು ಎಂಬುದನ್ನು ಪರಿಶೀಲನೆ ಮಾಡಬೇಕು. ಮಾನ್ಯ ಮಂತ್ರಿಗಳಿಂದ ಶ್ರೀ ವೀರೇಂದ್ರ ಪಾಟೀಲ್ ಅವರು ಈ ಒಂದು ಇಲಾಖೆಯ ಮೂಲಕ ಬೇಕಾದಷ್ಟು ಹಣವನು ಪೋಲಾಗದಂತೆ ತಡೆಗಟ್ಟಬಹುದು ಲಾಭದಾಯಕವಾಗಿ ಮಾಡಬಹುದು ನಷ್ಟವೇನೂ ಇಲ್ಲವೆಂದು ಹೇಳಿದರು. ಹಾಗಾದರೆ ಇದು ಯಾವಾಗ ಲಾಭದಾಯಕವಾಗುತ್ತದೆ ? ಶ್ರೀಮಾನ್ ವೆಂಕಟೇಗೌಡರು ಹೇಳಿದ ಹಾಗೆ ಇವರು ತೆಗೆದುಕೊಂಡಿರುವ ಕ್ಯಾಪಿಟಲ್ಲನ್ನು ವಾಪಸ್ಸು ಕೊಡಬೇಕಾಗಿ ಬರುತ್ತದೆ. ಈಗ ಡಿಪ್ರಿಸಿಯೇಷನ್ ಫಂಡಿನಿಂದ ಬೇರೆ 2 ಕೋಟಿ ರೂಪಾಯಿಗಳನ್ನು ತೆಗೆಯುತ್ತಿದ್ದಾರೆ. ಇದನ್ನೆಲ್ಲಾ ಬುಕ್‌ನಲ್ಲಿ ಅಡ್ಜಸ್ಟ್ ಮಾಡಿದ್ದಾರೆಂದು ಕಾಣುತ್ತದೆ. ಇವರು ಒಂದು ಖಾಸಗಿ ಕಂಪೆನಿ ಮಾಡಿದ ಹಾಗೆ ವ್ಯವಹಾರವನ್ನು ಮಾಡಿ ಬಂಡವಾಳವನ್ನು ವಾಪಸ್ಸು ಕೊಟ್ಟಿದ್ದಾರೆ. ಒಂದು ವೇಳೆ 8 ಲಕ್ಷ ರೂಪಾಯಿಗಳಷ್ಟು ಲಾಭ ಬಂದರೆ ಕಾರ್ಮಿಕರಿಗೂ ಹಂಚಿ. ಸಾಮಾನ್ಯ ಕಂಪೆನಿ ಮಾಡುವ ಹಾಗೆ ಕೇವಲ 30 ಕೋಟಿ ರೂಪಾಯಿಗಳಷ್ಟು ಬಂಡವಾಳ ಹಾಕಿಕೊಂಡು ಬರೀ ಆಡಿಟರ್ ಜನರಲ್ ಅಥವಾ ಕಂಟ್ರೋಲರ್ ಒಪ್ಪಿರುವ ರೀತಿಯಲ್ಲಿ ಈ ಸಭೆಯ

(ಶ್ರೀ ಎಸ್. ಗೋಪಾಲಗೌಡ)

ಮುಂದೆ ಲೆಕ್ಕ ಇಟ್ಟರೆ ಅದು ಒಳ್ಳೆಯ ರೀತಿಯೆಂದು ನಾನು ಹೇಳುವುದಕ್ಕಾಗುವುದಿಲ್ಲ. ಬೇರೆ ಇಲಾಖೆಗಳನ್ನೂ ಸಹ ನೋಡುವುದಾದರೆ ಇವತ್ತು ಈ ಇಲಾಖೆಯಲ್ಲಿ ಲಾಭದಾಯಕವಾಗಿ ಈಗಿನ ವ್ಯವಹಾರವನ್ನು ಪರಿವರ್ತನೆ ಮಾಡುವುದಕ್ಕೆ ಸರ್ಕಾರಕ್ಕೂ ಮಂಡಲಿಗೂ ಸಾಧ್ಯವಾಗಿಲ್ಲವೆಂದು ಹೇಳಬಹುದು. ಶರಾವತಿಯಲ್ಲಿ ಇವರು ಏನಾದರೂ ಸ್ವಲ್ಪ ಸಿವಿಲ್ ವರ್ಕ್ಸ್ ಬಗ್ಗೆ ಮಿತವ್ಯಯವನ್ನು ಅನುಸರಿಸಿದ್ದರೆ ಇವತ್ತು ಕೇಂದ್ರದವರ ಮುಂದೆ ಹೋಗಿ ಕೈಯೊಡ್ಡುವ ಪ್ರಸಂಗವಿರುತ್ತಿರಲಿಲ್ಲ. ಸಿವಿಲ್ ವರ್ಕ್ಸ್‌ಗೆ ಹೆಚ್ಚು ಹಣವನ್ನು ಖರ್ಚು ಮಾಡಿದ್ದಾರೆ. ಆದ್ದರಿಂದ ಜನರೇಟಿಂಗ್ ಸ್ಟೇಷನ್ ಮಾಡುವುದಕ್ಕೆ ಅಡ್ಡಿ ಬರುತ್ತದೆ. ಅದನ್ನು ಮಾಡದೆಹೋದರೆ ಕಷ್ಟವಾಗುತ್ತದೆ. ಕಾಳಿ ನದಿ ಮತ್ತು ವರಾಹಿ ನದಿಗಳ ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಶಕ್ಯವಿಲ್ಲ. ಆದ್ದರಿಂದ ಯೋಜನಾ ಬದ್ಧವಾಗಿ ಪ್ರಗತಿಪರವಾದ ಹೆಜ್ಜೆಯನ್ನು ಇಡುವ ಪ್ರಯತ್ನದಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಮುಗ್ಗರಿಸುವುದಕ್ಕೆ ಹೋಗಿ ಜನತೆಯ ಬೇಡಿಕೆಯನ್ನು ಈಡೇರಿಸುವುದಕ್ಕೆ ಆಗುತ್ತಾ ಇಲ್ಲ. ಜನತೆ ತಮ್ಮ ಬೇಡಿಕೆಗಳನ್ನು ಪೂರೈಸಬೇಕೆಂದು ಸರ್ಕಾರವನ್ನು ಕೇಳುತ್ತಿದ್ದಾರೆ. ಆದರೆ ಅವರನ್ನು ಸಮಾಧಾನ ಮಾಡುವಂತಹ ಕೆಲಸವನ್ನು ಇವರು ಮಾಡುವುದಕ್ಕೆ ಆಗುವುದಿಲ್ಲ. ಜೊತೆಗೆ ಆಡಳಿತ ವ್ಯವಸ್ಥೆಯಲ್ಲಿ ಕೂಡ ಒಂದು ಕ್ರಮ ಇಲ್ಲ. ಅದನ್ನು ಸರಿಪಡಿಸಬೇಕು ಆಡಳಿತ ಒಳ್ಳೆಯ ರೀತಿಯಲ್ಲಿ ನಡೆಯಬೇಕು. ಅದರಿಂದ ಜನತೆಗೆ ಅನುಕೂಲ ದೊರೆಯಬೇಕು ಎಂದು ನಾನು ಹೇಳುತ್ತೇನೆ.

5-00 P.M.

ಇನ್ನು ಕೊನೆಯದಾಗಿ ನಾನು ಒಂದು ಮಾತನ್ನು ಹೇಳುತ್ತೇನೆ. ದಿವಂಗತ ಸರ್. ಎಂ. ವಿಶ್ವೇಶ್ವರಯ್ಯನವರು ಮಾಡಿದಂಥ ಒಂದು ಮಹತ್ತರವಾದ ಕೆಲಸದಿಂದ ಅವರ ಹೆಸರಿನಲ್ಲಿ ಭಾರತದ ಎಲ್ಲಾ ರಾಜ್ಯಗಳಿಗಿಂತಲೂ ನಮ್ಮ ರಾಜ್ಯ ಕೈಗಾರಿಕೆಯಲ್ಲಿ ಮುಂದೆ ಹೋಗಿತ್ತು. ಅವರಿಂದ ನಮ್ಮ ರಾಜ್ಯಕ್ಕೆ ಒಂದು ದೊಡ್ಡ ಹೆಸರು ಬಂದಿತ್ತು. ಈಗ 15 ವರ್ಷಗಳಿಂದ ಯೋಜನಾ ಬದ್ಧವಾದ ಪ್ರಗತಿ ಈ ದೇಶದಲ್ಲಿ ನಡೆದಿದೆ. ಆದರೂ ಸಹ ನಾವು ಈ ವಿಷಯದಲ್ಲಿ ಮದ್ರಾಸಿನವರಿಗಿಂತ ಹಿಂದೆ ಬಿದ್ದಿದ್ದೇವೆ. ಅವರು ಕೃಷಿ ಕ್ಷೇತ್ರದಲ್ಲಿ ಬೇಕಾದಷ್ಟು ಪ್ರಗತಿಯನ್ನು ಸಾಧಿಸಿದ್ದಾರೆ. ಬೇಕಾದಷ್ಟು ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದಾರೆ. ಕೈಗಾರಿಕೆಗಳಿಗೆ ವಿದ್ಯುತ್‌ಚ್ಛಕ್ತಿಯನ್ನು ಒದಗಿಸುವುದರಲ್ಲಿ ಪ್ರಗತಿಯನ್ನು ಸಾಧಿಸಿದ್ದಾರೆ. ಅವರ ಮಟ್ಟಕ್ಕೆ ನಮ್ಮ ರಾಜ್ಯದವರು ಬರುವುದಕ್ಕೆ ಆಗಿಲ್ಲ. ಸಾಕಷ್ಟು ವಿದ್ಯುಚ್ಛಕ್ತಿಯನ್ನು ನಮ್ಮಲ್ಲಿ ಉತ್ಪಾದನೆ ಮಾಡಿದ್ದರೂ ಸಹ ಅದನ್ನು ವ್ಯವಸಾಯ ಕೈಗಾರಿಕೆ ಮುಂತಾದುವುಗಳಿಗೆ ಒದಗಿಸಲು ಬೇಕಾದ ಸಾಮಗ್ರಿಗಳನ್ನು ಒದಗಿಸಿಕೊಳ್ಳುವುದರಲ್ಲಿ ಈ ಸರ್ಕಾರ ಅಸಮರ್ಥವಾಗಿದೆ. ಈ ಸರ್ಕಾರದ ಒಂದು ಅದಕ್ಷತೆ ಮತ್ತು ಕೇಂದ್ರದಲ್ಲಿ ಇವರ ಪ್ರಭಾವ ಇಲ್ಲದೇಇರುವುದರಿಂದ ನಮಗೆ ಬೇಕಾದ ಸಾಮಗ್ರಿಗಳನ್ನು ಒದಗಿಸಿಕೊಳ್ಳುವುದಕ್ಕೆ ಈ ಸರ್ಕಾರ ಅಸಮರ್ಥತೆಯನ್ನು ತೋರಿಸುತ್ತಿದೆ. ಆದ್ದರಿಂದ ನಾನು ಒತ್ತಿ ಒತ್ತಿ ಹೇಳುತ್ತೇನೆ; ಈಗ ನೀವು ನಾಲ್ಕನೆಯ ಪಂಚವಾರ್ಷಿಕ ಯೋಜನೆಗೆ ಅಡಿ ಇಡುತ್ತಿದ್ದೀರಿ, ಈಗಲಾದರೂ ಲೋಪದೋಷಗಳನ್ನು ತಿದ್ದಿಕೊಂಡು ಎಲ್ಲಾ ಅಭಿವೃದ್ಧಿಕಾರ್ಯಗಳನ್ನು ಮಾಡಬೇಕು. ಈಗ ಎಲ್ಲೆಲ್ಲಿ ಕೃಷಿ ಮತ್ತು ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುವುದು ಆಗಬೇಕು, ಯಾವ ಯಾವ ಗ್ರಾಮಾಂತರ ಪ್ರದೇಶಗಳಿಗೆ ದೀಪವನ್ನು ಕೊಡುವುದು ಆಗಬೇಕು, ಎನ್ನುವುದನ್ನು ಲಕ್ಷ್ಯದಲ್ಲಿಟ್ಟುಕೊಂಡು ಒಂದು ಪ್ರತ್ಯೇಕವಾದ ಯೋಜನೆಯನ್ನು ಹಾಕಿಕೊಂಡು ಅದರಂತೆ ಪ್ರಗತಿಯನ್ನು ಸಾಧಿಸುವ ಒಂದು ಪ್ರತ್ಯೇಕವಾದ ಮಂಡಲಿಯನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಹಣದ ವ್ಯವಸ್ಥೆ ಬ್ಯಾಂಕಿನಲ್ಲಿ ಹಣವನ್ನು ಇಡುವುದು ಇತ್ಯಾದಿ ಕೆಲವು ಆಪಾದನೆಗಳು ಇವೆ. ಅವುಗಳನ್ನು ಸರಿಪಡಿಸಲು ಗಮನ ಕೊಡಬೇಕು.

ಇನ್ನು ಸಿಬ್ಬಂದಿಯನ್ನು ಖೋತಾ ಮಾಡಬೇಕು ಎನ್ನತಕ್ಕ ವಿಷಯ ಕಾರ್ಯಕ್ರಮದಲ್ಲಿ ಎಲ್ಲಾ ಕಡೆಗಳಲ್ಲೂ ಕೇಳಿ ಬರುತ್ತಿದೆ. ಇದರಲ್ಲಿ ಎಲ್ಲಿ ಸಿಬ್ಬಂದಿಯನ್ನು ಖೋತಾ ಮಾಡಬೇಕು, ಎಲ್ಲಿ ನೇಮಕ ಮಾಡಬೇಕು ಎನ್ನತಕ್ಕ ವಿಷಯದಲ್ಲಿ ಒಂದು ಯೋಜನೆಯನ್ನು, ಒಂದು ಕಾರ್ಯಕ್ರಮವನ್ನು ಬೋರ್ಡಿನವರು ಹಾಕಿಕೊಳ್ಳುವುದು ಹಿತಕರ. ಈಗ ಇರುವವರನ್ನು ಕೆಲಸದಿಂದ ತೆಗೆದು ಹಾಕಿದರೆ ತೊಂದರೆಯಾಗುತ್ತದೆ. ಈ ಎಲ್ಲಾ ವಿಷಯಗಳನ್ನೂ ಸಮಗ್ರವಾಗಿ ಪರಿಶೀಲನೆ ಮಾಡಿ ವಿದ್ಯುಚ್ಛಕ್ತಿ ಮಂಡಲಿಯವರು ರಾಜ್ಯದ ಹಿತವನ್ನು ಗಮನದಲ್ಲಿಟ್ಟುಕೊಂಡು ಪ್ರಗತಿಯನ್ನು ಸಾಧಿಸುವ ಬಗ್ಗೆ ಒಂದು ನಿರ್ಧಾರಕ್ಕೆ ಬಂದರೆ ಒಳ್ಳೆಯದು. ಹಾಗೆ ಮಾಡುವುದಾದರೆ ಸಹಾಯ ಮಾಡಲು

ರಾಜ್ಯ ಸರ್ಕಾರದವರೂ ಮುಂದೆ ಬರುತ್ತಾರೆ, ವಿದೇಶ ವಿನಿಮಯವೂ ಬರುತ್ತದೆ, ಸಾಮಾನುಗಳು ಬರುತ್ತವೆ. ವಿದ್ಯುಚ್ಛಕ್ತಿ ಬೋರ್ಡಿನವರು ಮಾಡಿದಂತಹ ತಪ್ಪಾದೇ ಆದಂತಹ ಧೋರಣೆಯನ್ನು ನಾವು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಅದರಲ್ಲಿ ಒಂದು ಸಾಮರಸ್ಯ ಇರಬೇಕು. ಮುಖ್ಯವಾಗಿ ಜನಗಳ ಅವಶ್ಯಕತೆಗಳನ್ನು ಪೂರೈಸಬೇಕು. ಆದಷ್ಟು ಕಡಿಮೆ ದರದಲ್ಲಿ ಜನಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕು. ಖರ್ಚು ವೆಚ್ಚಗಳನ್ನು ಕಡಿಮೆ ಮಾಡುವುದರಲ್ಲಿ ಒಂದು ಆದರ್ಶ ಇರಬೇಕು. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಅಧ್ಯಕ್ಷರೇ, ವಿದ್ಯುಚ್ಛಕ್ತಿ ಮಂಡಲಿಯು ಈ ರಾಜ್ಯದಲ್ಲಿ ಉತ್ಪನ್ನ ಆಗತಕ್ಕಂಥ ವಿದ್ಯುಚ್ಛಕ್ತಿಯನ್ನು ಉಪಯೋಗ ಮಾಡಿ ಈ ರಾಜ್ಯದ ಕಲ್ಯಾಣಕ್ಕಾಗಿ ಎಷ್ಟರ ಮಟ್ಟಿಗೆ ಸಾಧನೆಯನ್ನು ಮಾಡಿದೆ ಎನ್ನುವುದನ್ನು ತುಲನೆ ಮಾಡಿ ನೋಡಿದರೆ ಮನೆಗೆ ಮಾರಿ, ಪರರಿಗೆ ಉಪಕಾರಿ ಎನ್ನುವ ಹಾಗೆ ವಿದ್ಯುಚ್ಛಕ್ತಿ ಮಂಡಲಿಯು ನಮಗೆ ಮಾರಿಯಾಗಿ ಪರಿಣಮಿಸಿದೆ. ನಮ್ಮ ರಾಜ್ಯದಲ್ಲಿ ಶರಾವತಿಯಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆಯಾಗುವುದಕ್ಕೆ ಮುಂಚೆ, ಶಿವಸಮುದ್ರದಲ್ಲಿ ಉತ್ಪನ್ನವಾದಂತಹ ವಿದ್ಯುಚ್ಛಕ್ತಿಯನ್ನೆಲ್ಲಾ ಉಪಯೋಗ ಮಾಡಿ ಜನಗಳಿಗೆ ದೀಪವನ್ನು ಕೊಡುತ್ತಿದ್ದರು. ಮತ್ತು ಅಲ್ಲಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದ್ದಾರೆ. ಇವೊತ್ತು 100 ಕೋಟಿ ರೂಪಾಯಿಗಳವರೆಗೆ ಹಣವನ್ನು ವೆಚ್ಚ ಮಾಡಿ ಶರಾವತಿಯಲ್ಲಿ ವಿದ್ಯುಚ್ಛಕ್ತಿಯನ್ನ ಉತ್ಪಾದನೆ ಮಾಡುತ್ತಿದ್ದಾರೆ. ಶರಾವತಿಯಿಂದ ಬರತಕ್ಕ ವಿದ್ಯುಚ್ಛಕ್ತಿಯಿಂದ ನಮ್ಮ ರಾಜ್ಯ ಕೈಗಾರಿಕಾ ರಾಜ್ಯವಾಗುತ್ತದೆ, ನಮ್ಮ ರಾಜ್ಯದ ಪ್ರತಿಯೊಂದು ಹಳ್ಳಿ ಹಳ್ಳಿಗೂ ಕೂಡ ವಿದ್ಯುಚ್ಛಕ್ತಿ ಮುಟ್ಟುತ್ತದೆ. ನಮ್ಮ ರೈತರಿಗೆ ಬಹಳ ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿ ಸಿಕ್ಕಿ ಅವರಿಗೆ ಹೆಚ್ಚು ಆಹಾರವನ್ನು ಬೆಳೆಯುವುದಕ್ಕೆ ಶಕ್ಯವಾಗುತ್ತದೆ ಎಂದು ತಿಳಿದಿದ್ದಂತಹ ಕನಸು ನಿಜವಾಗಿಯೂ ಕೂಡ ನನಸಾಗದೆ ಕನಸಾಗಿಯೇ ಉಳಿಯಿತು. 1956ನೇ ಇಸವಿ ನವಂಬರ್ ಒಂದನೇ ತಾರೀಖು ಈ ರಾಜ್ಯ ವಿಶಾಲವಾದಾಗ ಈ ರಾಜ್ಯ ಸರ್ವತೋಮುಖವಾಗಿ ಅಭಿವೃದ್ಧಿಯಾಗುತ್ತದೆ ಎಂದು 5 ಭಾಗಗಳಿಂದ ಬಂದಿರತಕ್ಕ ಜನರೆಲ್ಲರೂ ಸೇರಿ ಘೋಷಣೆಯನ್ನು ಮಾಡಿದರು. ಆ ಘೋಷಣೆಗಳು ಮುಂದುವರಿದಿವೆಯೋ ಹೊರತು ಇವರು ಏನನ್ನೂ ಸಾಧನೆ ಮಾಡುವುದಕ್ಕೆ ಆಗಿಲ್ಲ ಎಂದು ನಾನು ಖಡಾಖಂಡಿತವಾಗಿ ಹೇಳಬೇಕಾಗಿದೆ. ಶ್ರೀ ವೀರೇಂದ್ರಪಾಟೀಲರು ತರುಣರು. ವಯಸ್ಸಿನಲ್ಲಿ ಇನ್ನೂ ಚಿಕ್ಕವರು. ಇವರಿಗೆ ಒಂದು ಹೊಸ ಚೇತನ ಬಂದಿದೆ. ಎಲ್ಲರೂ ಒಂದು ಬಡ್ಜೆಟ್ ಮಾಡುವಾಗ ನಾನು ಏತಕ್ಕೆ ಒಂದು ಬಡ್ಜೆಟ್ ಮಾಡಬಾರದು ಎಂದು ಅವರು ಮನಸ್ಸು ಮಾಡಿದ್ದಾರೆ. ಖಾದಿಬೋರ್ಡಿಗೆ ಒಂದು ಬಡ್ಜೆಟ್ ಮಾಡಿದ್ದಾರೆ, ತೆಂಗಿನ ನಾರಿನ ಕೈಗಾರಿಕೆಗೆ ಒಂದು ಬಡ್ಜೆಟ್ ಮಾಡಿದ್ದಾರೆ. ಹೀಗಿರುವಾಗ ಎಲೆಕ್ಟ್ರಿಸಿಟಿ ಬೋರ್ಡಿಗೆ ಏತಕ್ಕೆ ನಾನು ಒಂದು ಬಡ್ಜೆಟ್ ಮಂಡನೆ ಮಾಡಬಾರದು ಎಂದು ಒಂದು ನವೀನತೆಯನ್ನು ಹುಡುಕಿ ಇವರು ಮೈಸೂರು ರಾಜ್ಯದ ವಿದ್ಯುಚ್ಛಕ್ತಿ ಮಂಡಲಿಯ ವಾರ್ಷಿಕ ವಿತ್ತೀಯ ಪಟ್ಟಿ ಎನ್ನತಕ್ಕಂಥ ಒಂದು ಬಡ್ಜೆಟ್ಟನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಇದರಲ್ಲಿ ಇವರು ಏನೇನು ಸಾಧನೆ ಮಾಡಿದ್ದಾರೆ, ಏನೇನು ಸಾಧನೆ ಮಾಡುತ್ತಾರೆ, ಎಷ್ಟರಮಟ್ಟಿಗೆ ಇವರು ಇದರಲ್ಲಿ ಸಫಲರಾಗಿದ್ದಾರೆ ಎನ್ನುವುದನ್ನು ನಾನು ಸ್ವಲ್ಪ ಹೇಳುತ್ತೇನೆ. ಇವರು ಸ್ವಲ್ಪ ಭುಜವನ್ನು ತಟ್ಟಿಕೊಂಡಿದ್ದಾರೆ. ಕೇಂದ್ರ ಸರ್ಕಾರದವರು ಹೇಳುತ್ತಾರೆ, ನಾವು ನಮ್ಮ ಬಡ್ಜೆಟ್ಟನ್ನು ಪುನರ್ ಪರಿಶೀಲನೆ ಮಾಡಬೇಕು, ಬಡ್ಜೆಟ್ಟು ಕಡಿಮೆ ಮಾಡಬೇಕು ಎಂದು. ಮೊನ್ನೆ ನಮ್ಮ ರಾಜ್ಯದ ಹಣಕಾಸಿನ ಉಪಮಂತ್ರಿಗಳಾದ ಅಬ್ದುಲ್ ಗಫಾರ್ ಅವರು ರೋಟರಿ ಕ್ಲಬ್ಬಿನಲ್ಲಿ ಭಾಷಣ ಮಾಡುತ್ತಾ ನಮ್ಮ ರಾಜ್ಯದ ಬಡ್ಜೆಟ್ಟನ್ನು ಪುನರ್ ಪರಿಶೀಲನೆ ಮಾಡಬೇಕು, ನಮ್ಮ ರಾಜ್ಯದ ಬಡ್ಜೆಟ್ಟನ್ನು ಕಡಿಮೆ ಮಾಡಬೇಕೆಂದು ಹೇಳಿದ್ದಾರೆ. ಪ್ಲಾನಿಂಗ್ ಕಮಿಷನ್ನಿನವರು ಅಮೆರಿಕಾ ದೇಶದವರನ್ನು ದುಡ್ಡು ಕೇಳುತ್ತಿದ್ದಾರೆ. ಹಿಂದೆ ಕೇಂದ್ರದಲ್ಲಿ ಹಣಕಾಸಿನ ಮಂತ್ರಿಗಳಾಗಿದ್ದ, ಮತ್ತು ನಮ್ಮ ದೇಶದ ಮುಖಂಡರಾದ ಶ್ರೀ ಮೊರಾರ್ಜಿದೇಸಾಯಿ ಅವರು ಹೇಳುತ್ತಾರೆ ಯೋಜನೆಯನ್ನು ಚಿಕ್ಕದಾಗಿ ಮಾಡಬೇಕು, ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು ಎಂದು. ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡತಕ್ಕ ವಿಷಯದಲ್ಲಿ ಇವರು ಏನನ್ನೂ ಸಾಧನೆ ಮಾಡುವುದಕ್ಕೆ ಆಗಿಲ್ಲ ಎಂದು ನಾನು ಹೇಳುತ್ತೇನೆ. ಇವರು ಈ ವಿದ್ಯುಚ್ಛಕ್ತಿ ಬೋರ್ಡಿನ ವಾರ್ಷಿಕ ಬಡ್ಜೆಟ್ಟಿನಲ್ಲಿ ಕೊಟ್ಟಿರುವುದನ್ನು ನೋಡಿದರೆ ಇವರು ಸ್ವರ್ಗದ ಮೆಟ್ಟಲು ಹತ್ತಿರ ಹೋದ ಹಾಗೆ ಭಾಸವಾಗುತ್ತದೆ. ಆದರೆ ಇದನ್ನೆಲ್ಲಾ ಒಳಹೊಕ್ಕು ಓದಿ ನೋಡಿದರೆ ಇವರು ಸ್ವರ್ಗದ ಬಾಗಿಲನಲ್ಲಿಯೂ ಇಲ್ಲ, ನರಕದ ಬಾಗಿಲನಲ್ಲಿಯೂ ಇಲ್ಲ. ಇವರು ತ್ರಿಶಂಕು ಸ್ವರ್ಗದಲ್ಲಿ ಇದ್ದಾರೆ ಎಂದು ನಾನು ಹೇಳುತ್ತೇನೆ. ಇವರು ಏನನ್ನು ಸಾಧನೆ ಮಾಡುತ್ತೇವೆಂದು ಹೇಳಿದ್ದರೋ ಅದನ್ನು ಸಾಧನೆ ಮಾಡುವುದಕ್ಕೆ ಆಗಿಲ್ಲ. ವ್ಯವಸಾಯಗಾರರಿಗೆ ಎಷ್ಟು ಪಂಪುಸೆಟ್ಟುಗಳನ್ನು ಕೊಡಬೇಕಾಗಿತ್ತೋ ಅಷ್ಟು ಪಂಪುಸೆಟ್ಟುಗಳನ್ನು ಕೊಡುವುದಕ್ಕೆ ಆಗಿಲ್ಲ. ಎಷ್ಟು ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕಾಗಿತ್ತೋ ಅಷ್ಟು ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಇವರಿಗೆ ಆಗಿಲ್ಲ. ಹೆಚ್ಚು ಕೈಗಾರಿಕೆಗಳನ್ನು ಸ್ಥಾಪನೆ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಮಾಡುವುದಕ್ಕೆ ಇವರಿಗೆ ಆಗಿಲ್ಲ. ಇದಕ್ಕೆ ಕಾರಣವೇನೆಂದರೆ, ದೇಶಮುಖ್ ಇಲ್ಲ ಎಂದರೆ ಹಣ ಇಲ್ಲ ಎಂದು ಹೇಳುತ್ತಾರೆ. ಸ್ವಾಮಿ, ಈ ಸಂದರ್ಭದಲ್ಲಿ ನನಗೆ ಒಂದು ಪದ್ಯ ಜ್ಞಾಪಕಕ್ಕೆ ಬರುತ್ತದೆ. ಅದು ಈ ರೀತಿ ಇದೆ :

ಒಂದು ಬನ್ನಹ ಹುಲಿಯು ಕೇಳು
ಕಂದನಿರುವನು ದೊಡ್ಡಿಯೊಳಗೆ
ಒಂದು ನಿಮಿಷಕೆ ಮೊಲೆಯ ಕೊಟ್ಟು
ಬಂದು ಸೇರುವೆನಿಲ್ಲಿಗೆ.

ಕೊಟ್ಟಭಾಷಗೆ ತಪ್ಪಲಾರೆನು
ಕೆಟ್ಟ ಯೋಚನೆ ಮಾಡಲಾರೆನು
ನಿಷ್ಠೆಯಿಂದಲಿ ಪೋಪೆ ನಿಲ್ಲಿಗೆ
ಕಟ್ಟಕಡೆಗಿದು ಖಂಡಿತ.

ಇದರ ಅರ್ಥ ಇಷ್ಟೆ. ಒಂದು ಗೋವು ಹುಲಿಯ ಕೈಗೆ ಸಿಕ್ಕಿ ಹಾಕಿಕೊಂಡು ಅದನ್ನು ಹುಲಿಯು ತಿನ್ನುವುದಕ್ಕೆ ಬಂದಾಗ, ಗೋವು ಹುಲಿಗೆ ಹೇಳಿತು, ನಾನು ಒಂದು ನಿಮಿಷದಲ್ಲಿ ನನ್ನ ಕಂದನಿಗೆ ಹಾಲನ್ನು ಕೊಟ್ಟು ವಾಪಸ್ಸು ಬರುತ್ತೇನೆ, ನಾನು ಕೊಟ್ಟ ಭಾಷೆಗೆ ತಪ್ಪುವುದಿಲ್ಲ ಎಂದು ಹೇಳಿ ಆ ಗೋವು ಕೊಟ್ಟ ಭಾಷೆಯನ್ನು ಉಳಿಸಿಕೊಂಡಿತು. ಈ 18 ವರ್ಷಗಳ ಕಾಂಗ್ರೆಸ್ ಸರ್ಕಾರದ ಆಡಳಿತ ದಲ್ಲಿ ಕಾಂಗ್ರೆಸ್ಸಿನವರು ಜನತಗೆ ಆಶ್ವಾಸನೆ ಕೊಟ್ಟಂತಹ ಮಾತಿನಲ್ಲಿ ಯಾವ ಮಾತನ್ನು ಉಳಿಸಿ ಕೊಂಡಿದ್ದಾರೆ ? ಎಷ್ಟು ಸಾರಿ ಇವರು ವಚನ ಭ್ರಷ್ಟರಾಗಿದ್ದಾರೆ ? ಇವರು ಯೋಜನೆಗಳನ್ನು ಎಷ್ಟರ ಮಟ್ಟಿಗೆ ಕಾರ್ಯಗತ ಮಾಡಿದ್ದಾರೆ ಎಂಬುದನ್ನು ನೋಡಿದರೆ ತಮಗೆಲ್ಲರಿಗೂ ಗೊತ್ತಾಗುತ್ತದೆ. ಸ್ವಾಮಿ, ನಾನು ಸ್ವಲ್ಪ ಕಟುವಾಗಿ ಮಾತನಾಡಿ ಟೀಕೆ ಮಾಡುತ್ತೇನೆ. ನಿಂದಕರು ಇರಬೇಕಯ್ಯ ಎಂದು ಪುರಂದರದಾಸರು ಹೇಳಿದ್ದಾರೆ. ನಿಂದೆ ಮಾಡಿದರೆ ನಿಂದೆಯ ಬೆಳಕಿನಲ್ಲಿ ಒಳ್ಳೆಯದನ್ನು ಮಾಡುತ್ತಾರೆ ಎಂದು ಹೇಳುತ್ತಾರೆ. ಯಾವುದೇ ದೃಷ್ಟಿಯಿಂದ ನಾನು ಬಹಳವಾಗಿ ನಿಂದೆ ಮಾಡು ತ್ತಿಲ್ಲ. ಹಿಂದೆ ಒಂದು ಸಾರಿ ಮುಖ್ಯಮಂತ್ರಿಗಳು ಹೇಳಿದ್ದಾರೆ. ನಿಂದೆ ಮಾಡುವುದು ಒಳ್ಳೆಯದು. ನಿಂದೆ ಮಾಡಿದರೆ ಒಳ್ಳೆಯ ಕೆಲಸವಾಗುತ್ತದೆ ಎಂದು ಹೇಳಿದ್ದಾರೆ.

ಈಗ ರಾಜ್ಯದಲ್ಲಿರತಕ್ಕ ಅನೇಕ ಥರ್ಮಲ್ ಸ್ಟೇಶನುಗಳನ್ನು ಖಾಸಗಿ ಆಡಳಿತದಿಂದ ನಿಮಗೆ ತೆಗೆದು ಕೊಳ್ಳಲು ಏತಕ್ಕೆ ಸಾಧ್ಯವಾಗಲಿಲ್ಲ? ಅವರು ಹೈದರಾಬಾದ್ ಕರ್ಣಾಟಕ, ಬೊಂಬಾಯಿ, ಮದ್ರಾಸ್, ಗೋವೆ ಹಾಗೂ ಉತ್ತರ ಕರ್ನಾಟಕದವರಿಗೆ ಹೆಚ್ಚಿನ ಬೆಲೆಗೆ ಪವರ್ ಒದಗಿಸುತ್ತಿದ್ದಾರೆ. ಈ ಥರ್ಮಲ್ ಸ್ಟೇಶನ್ನುಗಳನ್ನು ತಮ್ಮ ಕೈಯಲ್ಲಿ ತೆಗೆದುಕೊಳ್ಳುವುದಕ್ಕೆ ಏನು ಸಾಧನೆ ಮಾಡಿದ್ದೀರಿ ! ಇದನ್ನು ಸ್ವಾಧೀನ ಮಾಡದಿರುವುದಕ್ಕೆ ಯಾವ ರಾಜಕೀಯವು ಇದೆ ? ಅವರಲ್ಲಿರತಕ್ಕ ವಿದ್ಯುಚ್ಛಕ್ತಿ ಯನ್ನು ತಮಗೆ ಉಪಯೋಗಿಸಿಕೊಳ್ಳುವುದಕ್ಕೆ ಶಕ್ತಿ ಇಲ್ಲದೆ ಹೋದರೆ ಇದರಿಂದ ಏನು ನಮಗೆ ಪ್ರಯೋಜನವಾಗುತ್ತದೆ ಎನ್ನತಕ್ಕಂತದ್ದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದರು, ಇದಕ್ಕೆ ಕೇಂದ್ರದಲ್ಲಿ ಸ್ವಲ್ಪ ತೊಂದರೆ ಇದೆ ಎಂದು. ಅವರು ಹೇಳುತ್ತಾ ರೇನೆಂದರೆ, ಕೇಂದ್ರ ಸರ್ಕಾರದವರು ಇದನ್ನು ಕಮಿಶನ್ ಮಾಡುವುದಕ್ಕೆ ಕೊಡುವುದಿಲ್ಲ ಎಂದು. ಆದರೆ, ಶರಾವತಿ ಯೋಜನೆಯು ಸಂಪೂರ್ಣವಾಗಿ, ಎಲ್ಲಾ ಜನರೇಟರ್ ಕಮಿಶನ್ ಮಾಡುವ ಹೊತ್ತಿಗೆ ಅಥವಾ 1967ನೇ ಚುನಾವಣೆಯಲ್ಲಿ ಈ ಸರ್ಕಾರವು ಅಸ್ತವ್ಯಸ್ತವಾಗಿ ಬೇರೆ ಮುಖಂಡತ್ವದಲ್ಲಿ ಇದನ್ನು ಕೇಂದ್ರ ಸರ್ಕಾರದವರು ತೆಗೆದುಕೊಳ್ಳಬೇಕು, ಮತ್ತು ಇದರಲ್ಲಿರತಕ್ಕ ವ್ಯವಹಾರಗಳನ್ನು ಎನ್‌ಕ್ವಾಯರಿ ಮಾಡಬೇಕೆಂದು ಡೆಲ್ಲಿ ಸರ್ಕಾರದವರ ಬಾಯಲ್ಲಿ ಹೇಳುವುದನ್ನು ನಾನು ಕೇಳಿದ್ದೇನೆ. ಇದನ್ನು ಏಕೆ ಹೇಳಿದ್ದೇನೆಂದರೆ, ಮೊರಾರ್ಜಿ ಕಮಿಶನ್ ಮುಂದೆ ಎವಿಡೆನ್ಸ್ ಕೊಡುವಾಗ "Sharavathy scandal must be enquired into" ಎಂದು ಹೇಳಿದ್ದಾರೆ. ಇದರಿಂದ ಕೇಂದ್ರ ಸರ್ಕಾರಕ್ಕೆ ಸಂಪೂರ್ಣವಾಗಿ ಅರ್ಥವಾಗಿದೆ. ಶ್ರೀಮಾನ್ ನಾಮೋಶಿಯವರು ಹೇಳಿದರು ನಮ್ಮ ಮನೆಯಲ್ಲಿ ಅನ್ನಕ್ಕೆ ಎಲೆ ಹಾಕಿರುವಾಗ, ಅದನ್ನು ಎಲ್ಲೆಲ್ಲೋ ತೆಗೆದುಕೊಂಡು ಹೋಗಿ ಹಾಕುತ್ತಿದ್ದೀರಿ. ನಿಮಗೆ ಟ್ರಾನ್ಸ್‌ಫಾರ್ಮರ್ಸ್ ಇಲ್ಲ, ಕಂಬ ಇಲ್ಲ, ಡಬ್ಬು ಇಲ್ಲ ಎಂಬ ಅನೇಕ ಕಾರಣ ಗಳನ್ನು ಹೇಳುತ್ತಿದ್ದೀರಿ. ಆದರೆ ಬೇರೆ ರಾಜ್ಯಗಳಿಗೆ ಇವರು ಯಾವ ಆಧಾರದ ಮೇಲೆ ಕೊಟ್ಟಿದ್ದಾರೆ, ಎಂದು ಕೇಳಿದರೆ ಸರ್ಕಾರ ಮೌನವಾಗಿದೆ. ಇವತ್ತಿನ ದಿವಸ ಹೇಳುತ್ತಾರೆ, ಹೆಚ್ಚು ಆಹಾರ ಬೆಳೆಯ

ಬೇಕು. ಆದರೆ ಹಾಕಿದ ಫ್ಯೂಸ್ ಹೋದರೆ, ಅದನ್ನು ಸರಿಪಡಿಸಲು ಲೈನ್ ಮ್ಯಾನ್ ಕರೆದರೆ ಅವನಿಗೆ ಬರಲು ಮೂರು ದಿನವಾಗುತ್ತದೆ. ಇವತ್ತಿನ ದಿವಸ ರೈತನಿಗೆ ಹಾಕಿರತಕ್ಕ ದರ ಎಷ್ಟು ಮತ್ತು ಸಿನೆಮಾ, ಹೋಟೇಲು, ಕೈಗಾರಿಕಾ ಸಂಸ್ಥೆಗಳಿಗೆ ಹಾಕಿರತಕ್ಕ ದರ ಎಷ್ಟು ಎಂಬುದನ್ನು ನೋಡ ಬೇಕು. ಇಂದು ನಮ್ಮ ವ್ಯವಸಾಯಕ್ಕೆ ಪ್ರಾಮುಖ್ಯತೆಯನ್ನು ಕೊಡಬೇಕು. ಇವತ್ತಿನ ದಿವಸ ವ್ಯವಸಾಯಗಾರನಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟು ಒಂದು ಪೈಸಾ ಕೂಡಾ ವಸೂಲು ಮಾಡದಂತೆ ಮಾಡಿದರೆ, ನಮ್ಮ ರಾಜ್ಯದಲ್ಲಿ ಹೆಚ್ಚು ಆಹಾರ ಬೆಳೆಯುವುದಕ್ಕೆ ಮತ್ತು ವ್ಯವಸಾಯ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಸರ್ಕಾರದವರು ರೈತನ ಮೇಲೆ ಯಾವ ಒಂದು ಹೊರೆಯನ್ನೂ ಹೊರಿಸಬಾರದು ಮತ್ತು ಅವನಿಗೆ ವಿದ್ಯುಚ್ಛಕ್ತಿಯನ್ನು ಪುಕ್ಕಟೆಯಾಗಿ ಒದಗಿಸಬೇಕು. ಅದಲ್ಲದೆ ತಾವು ಈ ರೀತಿ ಮಾಡತಕ್ಕದ್ದು ಸರಿಯಲ್ಲ ಎಂದು ನಾನು ಇಲ್ಲಿ ಹೇಳುತ್ತೇನೆ. ಮತ್ತೊಂದು ವಿಷಯ ನಾನಾದರೂ ಕೇಳುತ್ತೇನೆ, ತಾವು ಆಂಧ್ರ ಸರ್ಕಾರ ಮತ್ತು ಮದ್ರಾಸ್ ಸರ್ಕಾರದವ ರೊಂದಿಗೆ ಯಾವ ರೀತಿ ಒಪ್ಪಿಗೆ ಮಾಡಿಕೊಂಡಿದ್ದೀರಿ, ಯಾವ ರೀತಿ ಪವರ್ ಕೊಟ್ಟಿದ್ದೀರಿ ಇದಕ್ಕೆ ಯಾವ ದರ, ಇದರ ಅವಧಿ ಇಷ್ಟು ಎಂಬುದನ್ನು ನಾವು ಪದೇ ಪದೇ ಕೇಳುತ್ತಿದ್ದರೂ ತಮಗೆ ಅದನ್ನು ಈ ಸಭೆಗೆ ತಿಳಿಸುವುದಕ್ಕೆ ಮನಸ್ಸು ಬರಲಿಲ್ಲ. ಈಗ ಒದಗಿಸಿರತಕ್ಕ ಅಂಕಿ ಅಂಶಗಳು ಬೇರೆ ಒಂದು ಗುಣಾಕಾರ, ಭಾಗಾಹಾರ ಮಾಡಿ ಕೊಟ್ಟಂತಹ ಸಂಖ್ಯೆಗಳು ಆಗಿವೆಯೇ ಹೊರತು ಒಂದು ಆಧಾ ರದ ಮೇಲೆ ಕೊಟ್ಟ ಸಂಖ್ಯೆಗಳಲ್ಲ. ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಏನು ಇದೆ ಅದಕ್ಕೆ 9ರಿಂದ ಗುಣಿಸಿದೊಡನೆ ಏನು ಬರುತ್ತದೆ, ಅದಕ್ಕೆ ಇನ್ನೊಂದು ಸಂಖ್ಯೆಯಿಂದ ಗುಣಿಸಿ, ಭಾಗಿಸಿ ಮಾಡಿದಂತಹ ಸಂಖ್ಯೆಯಾಗಿರುತ್ತದೆ. ಶ್ರೀಮಾನ್ ವೆಂಕಟೇಗೌಡರು ಹೇಳಿದಂತೆ ನಿಮಗೆ ರಾಜ್ಯದಲ್ಲಿ ಏನನ್ನೂ ಸಾಧನೆ ಮಾಡಲಾಗಲಿಲ್ಲ. ನೀವು ಎಷ್ಟು ಹಳ್ಳಿಗಳಿಗೆ ದೀಪಗಳನ್ನು ಕೊಟ್ಟಿದ್ದೀರಿ ? ಎಷ್ಟು ಪಂಪ್ ಸೆಟ್ಟುಗಳನ್ನು ಕೊಟ್ಟಿದ್ದೀರಿ ? ಮತ್ತು ಇದನ್ನೆಲ್ಲಾ ಯಾವ ಆಧಾರದ ಮೇಲೆ ಕೊಡುತ್ತಿ ದ್ದೀರಿ ಎಂದು ನಾನಾದರೂ ಕೇಳುತ್ತೇನೆ. ಶರಾವತಿಯಲ್ಲಿರುವ ಪವರ್ ಮಂಗಳೂರಿನಲ್ಲಿ ಹುಟ್ಟತಕ್ಕ ಫರ್ಟಿಲೈಸರ್ ಕಾರ್ಖಾನೆಗೆ ಕೊಡಬೇಕಾಗುತ್ತದೆ, ಬೆಳ್ಗಾಮ್‌ನಲ್ಲಿರುವ ಅಲ್ಯೂಮಿನಿಯಂ ಕಾರ್ಖಾ ನೆಗೆ ಬೇಕಾಗುತ್ತದೆ ಅದರಿಂದ ಪವರ್ ಕಡಿಮೆ ಬರುತ್ತದೆ, ಅದಕೋಸ್ಕರ ಕಾಳಿನದಿ ಯೋಜನೆ ಬರುತ್ತದೆ; ಆಗ ಎಲ್ಲಾ ಸಮೃದ್ಧಿಯಾಗುತ್ತದೆ ಎಂದು ಹೇಳಿದರು. ಈ ಅಲ್ಯೂಮಿನಿಯಂ ಕಾರ್ಖಾನೆ ಎಷ್ಟು ವರ್ಷಗಳಲ್ಲಿ ಪ್ರಾರಂಭವಾಗುತ್ತದೆ, ಫರ್ಟಿಲೈಸರ್ ಕಾರ್ಖಾನೆ ಯಾವಾಗ ಆಗುತ್ತದೆ, ಎಂಬುವೇ ಸರಿಯಾಗಿ ಖಚಿತವಾಗಿಲ್ಲ. ಈಗ ಉತ್ಪನ್ನವಾಗತಕ್ಕ ವಿದ್ಯುಚ್ಛಕ್ತಿಯನ್ನು ಯಾವ ಯಾವ ಊರಿಗೆ ಕೊಡುತ್ತೀರಿ, ಮೈಸೂರು ಸಂಸ್ಥಾನದಲ್ಲಿ ಎಲ್ಲೆಲ್ಲಿ ಉಪಯೋಗಿಸುತ್ತಿದ್ದಾರೆ ಎಷ್ಟೆಷ್ಟು ಪಂಪ್‌ಸೆಟ್ಟುಗಳಿಗೆ ಕೊಡುತ್ತಿದ್ದೀರಿ ಎಂಬುದನ್ನು ಯಾವುದನ್ನೂ ತಾವು ಏನೂ ಹೇಳಿಲ್ಲ. ನಿಮಗೆ ಆಂಧ್ರ ಮತ್ತು ಮದ್ರಾಸ್ ಸರ್ಕಾರಗಳಿಂದ ಅಲ್ಲಿ ಎಷ್ಟು ಐ.ಪಿ. ಸೆಟ್ಟುಗಳು ಕೆಲಸ ಮಾಡುತ್ತ ವೆಂದು ವರದಿ ಬಂದಿದೆ ? ಅಥವಾ ಅನಂತಪುರದಲ್ಲಿ ಎಷ್ಟು ಸಾವಿರ ಪಂಪ್‌ಸೆಟ್ಟುಗಳು ಕೆಲಸ ಮಾಡು ತ್ತದೆ ಎಂಬುದು ಏನಾದರೂ ನಿಮಗೆ ಗೊತ್ತಿದೆಯೇ ? ನನ್ನ ತಾಲ್ಲೂಕಿನ ಮಟ್ಟಿಗೆ ಹೇಳುವುದಾದರೆ, ಅಲ್ಲಿ ಸಾಧಾರಣ ಎರಡೂವರೆ ಸಾವಿರದಿಂದ ಮೂರು ಸಾವಿರದವರೆಗೆ ಇವತ್ತಿನ ದಿವಸ ಸರ್ವಿಸ್ ಕೊಡಬಹುದು. ಆದರೆ ತಾವು 1,800 ಮಾತ್ರ ಕೊಟ್ಟಿದ್ದೀರಿ. ಅಸಿಸ್ಟೆಂಟ್ ಇಂಜಿನಿಯರರ ಲೆಕ್ಕದ ಪ್ರಕಾರ ಕೊನೆಯ ಪಕ್ಷ ಎಲ್ಲವನ್ನೂ ಪೂರೈಸಬೇಕಾದರೆ ಐದು ವರ್ಷ ಬೇಕಾದೀತು ಎಂದು ಹೇಳಿ ದ್ದಾರೆ. ಇದೇ ಸಮಯದಲ್ಲಿ ತಾವು ತುಮಕೂರು ಜಿಲ್ಲೆಗೆ ಎಷ್ಟು ಕೊಟ್ಟಿದ್ದೀರಿ ಎಂಬುದನ್ನು ನೋಡಿದರೆ ಗೊತ್ತಾಗುತ್ತದೆ.

MR. DEPUTY SPEAKER.—Shimoga District which is much bigger gets only 400 pumpsets.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾವು ಶಿವಮೊಗ್ಗ ಜಿಲ್ಲೆಯ ಪರಿಸ್ಥಿತಿಯಲ್ಲಿದ್ದರೆ, ಇಂತಹ ಪಂಪ್ ಸೆಟ್ಟುಗಳನ್ನು ಕೇಳುತ್ತಿರಲೇ ಇಲ್ಲ. ಅಲ್ಲಿ ತುಂಗಾ, ಭದ್ರಾ ನಾಲಾ ಮುಂತಾದ ಎಲ್ಲಾ ಅನುಕೂಲಗಳೆಗಳೂ ಇವೆ. ಮಾನ್ಯ ಗಾಂಜಿವೀರಪ್ಪನವರು ಈ ಸೌಲಭ್ಯಗಳಿಂದ 25 ಎಕರೆ ಸಾಗುವಳಿ ಮಾಡುತ್ತಿದ್ದಾರೆ. ಇನ್ನು ಪಂಪ್ ಸೆಟ್ ವಿಚಾರ ಹೇಳುವುದಾದರೆ ಬೆಳಗಾಂವ್ ಜಿಲ್ಲೆಗೆ 24 ಸಾವಿರ ಪಂಪ್ ಸೆಟ್ ಕೊಡಬೇಕೆಂದು ಇಟ್ಟಿದ್ದೀರಿ. ಇದನ್ನು ನೋಡಿದರೆ ಇದರಲ್ಲಿ ಏನೋ ಪೊಲಿಟಿಕಲ್ ಸ್ಟಿಗ್ಮಾ ಇದ್ದ ಹಾಗೆ ಕಾಣುತ್ತದೆ. ನಮ್ಮ ಕನ್ನಡ ನಾಡಿಗೆ ಎಲ್ಲಾ ಕಡೆಗೂ ಒಂದೇ ರೀತಿಯ ನೀತಿ ಇರಬೇಕು. ಬೆಳಗಾಂವ ಜಿಲ್ಲೆಯವರು ಗದ್ದಲ ಮಾಡುತ್ತಾರೆ ಅವರಿಗೆ ಪಂಪ್ ಸೆಟ್ ಕೊಟ್ಟುಬಿಡಬೇಕು, ಬೀದರ್ ಜಿಲ್ಲೆಯವರು ಗದ್ದಲ ಮಾಡುತ್ತಾರೆ ಅವರಿಗೆ ಕೊಟ್ಟುಬಿಡಬೇಕು, ಆ ಜಿಲ್ಲೆಯ ಮಂತ್ರಿಗಳು ಇದ್ದಾರೆ ಅವರಿಗೆ ಕೊಟ್ಟು ಬಿಡಬೇಕು ಎಂಬ ನೀತಿ ಸರಿಯಲ್ಲ. ಮೈಸೂರು ರಾಜ್ಯದ ಕಲ್ಯಾಣವಾಗಬೇಕೆಂದು ಹಿಂದೆ ದಿವಾನರಾಗಿದ್ದ ಸರ್. ವಿಶ್ವೇಶ್ವರಯ್ಯ ಅವರು ನಮ್ಮ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ದೇಶದಲ್ಲಿ ಅನೇಕ ಕೈಗಾರಿಕೆಗಳನ್ನು ಪ್ರಾರಂಭ ಮಾಡಿದ್ದಾರೆ. ನಮ್ಮ ಮೈಸೂರು ರಾಜ್ಯದಲ್ಲಿ ಸೋಪ್ ಫ್ಯಾಕ್ಟರಿ ಇದೆ, ಪೋರ್ಸಲೇನ್ ಫ್ಯಾಕ್ಟರಿ ಇದೆ, ಭದ್ರಾವತಿ ಐರನ್ ಫ್ಯಾಕ್ಟರಿ ಇದೆ, ಕಾಗದದ ಫ್ಯಾಕ್ಟರಿ ಇದೆ. ಇವುಗಳನ್ನು ಬಿಟ್ಟರೆ ಈ ಸರಕಾರದವರು ಪ್ರಾರಂಭಿಸಿದ ಐದನೇ ಫ್ಯಾಕ್ಟರಿ ಯಾವುದೂ ಇಲ್ಲ. ಸರ್ ವಿಶ್ವೇಶ್ವರಯ್ಯ ಅವರು, ದಿವಾನ್ ಬಹದ್ದೂರ್ ಮಾಧವ ರಾಯರು, ಸರ್ ಮಿರ್ಜಾ ಇಸ್ಮಾಯಿಲ್ ಸಾಹೇಬರು ಸ್ಥಾಪನೆ ಮಾಡಿದ ಕಾರಖಾನೆಗಳು ಮಾತ್ರ ಇವೆ. ಈ ಎಲ್ಲ ವಿಚಾರಗಳ ಬಗ್ಗೆ ನಿಮಗೆ ಜ್ಞಾನೋದಯ 1967ನೇ ಸಾಲಿನಲ್ಲಿ ನಡೆಯಲಿರುವ ಸಾರ್ವತ್ರಿಕ ಚುನಾವಣೆಯ ಕಾಲಕ್ಕೆ ಓಟು ಕೇಳುವುದಕ್ಕೆ ಹೋದಾಗ್ಗೆ ನಿಮಗೆ ಗೊತ್ತಾಗುತ್ತದೆ. ನೀವು ಹೇಳುವುದು ಏನೆಂದರೆ, ನಾವು ಹಾಗೆ ಮಾಡಿದ್ದೇವೆ, ಹೀಗೆ ಮಾಡಿದ್ದೇವೆ, ಲ್ಯಾಂಡ್ ರಿಫಾರ್ಮ್ಸ್ ಮಾಡಿದ್ದೇವೆ, ಊರಿಗೆ ಒಂದು ಆಸ್ಪತ್ರೆ ಮಾಡಿದ್ದೇವೆ, ಆದರೆ ಅಲ್ಲಿ ಔಷಧಿ ಇಲ್ಲಾ ಡಾಕ್ಟರ್ ಇಲ್ಲಾ ಎಂದು ಹೇಳತಕ್ಕಂಥ ಕಾಲ ಬಂದಿದೆ. ನಿಜವಾಗಿಯೂ ನಮ್ಮ ರಾಜ್ಯದ ರಾಜ್ಯಲಕ್ಷ್ಮಿ ಬೆಳಗ ಬೇಕಾದರೆ ಎಲ್ಲರಿಗೂ ಬೆಳಕುಬೇಕು. ಮೊದಲು ನಮ್ಮ ರಾಜ್ಯಕ್ಕೆ ಬೆಳಕುಕೊಡಿ. ಮಿಕ್ಕಿದ್ದನ್ನು ಹೊರಗಡೆಯವರಿಗೆ ಕೊಡಿ. ಈ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಟೆಂಪರರಿ ಕೆಲಸಗಾರರು ಸಾವಿರಾರು ಜನ ಇದ್ದಾರೆ. ಈ ನತದೃಷ್ಟ ಕೆಲಸಗಾರರು ಟೆಂಪರರಿಯಾಗಿ ಇರುವುದು ಅವರ ದುರಾದೃಷ್ಟ. ಇದು ದುರ್ದೈವದ ಸಂಗತಿಯಾಗಿದೆ. ಇವರು ಟೆಂಪರರಿಯಾಗಿ ಅಂದರೆ ಹಂಗಾಮಿ ಆಗಿ ಕೆಲಸ ಮಾಡುವುದು ಹೋಗಿ ಕೆಲಸದ ಬಗ್ಗೆ ಅವರಿಗೆ ಒಂದು ಸೆಕ್ಯೂರಿಟಿ ಕೊಡಬೇಕು ಎಂದು ಸರಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತರುಣ ಮಿತ್ರರು ಆಗಿರುವ ಮಂತ್ರಿಗಳು ಈ ಇಲಾಖೆಯಲ್ಲಿ ಇರತಕ್ಕ ಲೋಪದೋಷಗಳನ್ನು ಅವರು ಹೋಗುವುದರೊಳಗಾಗಿ ಸರಿಪಡಿಸಬೇಕು ಎಂದು ಹೇಳುತ್ತೇನೆ.

†ಶ್ರೀ ಬಿ. ಭೈರಪ್ಪಾಜಿ (ತುರುವೇಕೆರೆ).—ಸ್ವಾಮಿ, ನಮ್ಮ ಮುಂದೆ ಇರತಕ್ಕಂಥ ಮೈಸೂರು ರಾಜ್ಯದ ವಿದ್ಯುಚ್ಛಕ್ತಿ ಮಂಡಲಿಯ 1966-67ನೇ ಸಾಲಿನ ಹಣಕಾಸಿನ ವಿವರಣಾ ಪಟ್ಟಿಯ ಬಗ್ಗೆ ಮಾತನಾಡುತ್ತಾ ಈ ಇಲಾಖೆಯವರು ವ್ಯವಸಾಯ ಇಂಡಸ್ಟ್ರೀಸ್, ಅಗ್ರಿಕಲ್ಚರಲ್ ಇಂಡಸ್ಟ್ರೀಸ್ ಇವುಗಳಿಗೆ ವಿದ್ಯುಚ್ಛಕ್ತಿ ಪೂರೈಕೆ ಮಾಡುವುದಕ್ಕೆ ಮಾನ್ಯತೆ ಈ ವಿದ್ಯುಚ್ಛಕ್ತಿ ಮಂಡಲಿಯು ಕೊಟ್ಟಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೆಲಸದ ಅಂದಾಜು ತಯಾರು ಮಾಡಿ ಎರಡು ವರ್ಷ ಮೂರು ವರ್ಷಗಳಾಗಿದ್ದರೂ ಕೂಡ ಮಂಜೂರು ಆಗಿದ್ದರೂ ಕೂಡ ಕೆಲಸ ತೆಗೆದುಕೊಂಡಿಲ್ಲ. ಅನೇಕ ಕಡೆ ರೈತಾಪಿ ಜನ ಸಾಲ-ಸೋಲ ಮಾಡಿ ಬಾವಿ ತೆಗೆದು ಎರಡು ಮೂರು ವರ್ಷವಾಗಿದ್ದರೂ ಕೂಡ ವಿದ್ಯುಚ್ಛಕ್ತಿ ಪೂರೈಕೆ ಮಾಡಿಲ್ಲ. ಸಾಮಾನ್ಯವಾಗಿ ಇದಕ್ಕೆ ಬೇಕಾಗುವ ತಂತಿ ಇಲ್ಲಾ, ಕಂಬ ಇಲ್ಲಾ ಎಂದು ಹೇಳಿ ಕೆಲಸ ನಿಲ್ಲಿಸತಕ್ಕಂಥ ನಿದರ್ಶನಗಳು ಅನೇಕ ಇವೆ, ದೇಶದಲ್ಲಿ ಇಂದು ಆಹಾರ ಹೆಚ್ಚು ಬೆಳೆಯಬೇಕು, ಆಹಾರದ ವಿಚಾರದಲ್ಲಿ ನಾವು ಸ್ವಾವಲಂಬಿಗಳಾಗಬೇಕು ಎಂದು ಕೇವಲ ಬಾಯಿಯಲ್ಲಿ ಹರಿಸತಕ್ಕಂಥ ಸರಕಾರ ಇದು ಆಗಿದೆ. ಇದು ಬಹಳ ಶೋಚನೀಯವಾದುದು ಎಂದು ಹೇಳಬೇಕಾಗುತ್ತದೆ. ನಮ್ಮಲ್ಲಿ ಎರಡು ವರ್ಷಗಳ ಹಿಂದೆ 20 ಲಕ್ಷ ರೂಪಾಯಿಗಳ ಒಂದು ಸಬ್ ಟ್ರಾನ್ಸ್‌ಮಿಷನ್ ಲೈನ್ ಸ್ಯಾಂಕ್ಷನ್ ಆಗಿದೆ. ಇದನ್ನು ಕಾರ್ಯಗತ ಮಾಡಬೇಕು ಎಂದು ಸುಮಾರು ಎರಡು ವರ್ಷಗಳಿಂದ ನಮ್ಮ ಪ್ರಾರ್ಥನೆ ಸಲ್ಲಿಸುತ್ತಲೇ ಇದ್ದೇವೆ. ಆದರೆ ಅದು ಇನ್ನೂ ಕಾರ್ಯಗತವಾಗಿಲ್ಲ. ಅನೇಕ ಕಡೆ ಕೆಲಸ ಕಾರ್ಯಗಳನ್ನು ನಿಲ್ಲಿಸಿದ್ದಾರೆ. ಇಂಥ ಲೋಪದೋಷಗಳನ್ನು ಕೂಡಲೇ ಸರಿಪಡಿಸಬೇಕು. ಇದಕ್ಕೆ ಹೆಚ್ಚು ಗಮನ ಕೊಡಬೇಕು. ವ್ಯವಸಾಯಕ್ಕೆ ಸಂಬಂಧಪಟ್ಟ ಬಾವಿಗಳಿಗೆ ವಿದ್ಯುಚ್ಛಕ್ತಿ ಒದಗಿಸುವ ಏರ್ಪಾಡು ಮಾಡಬೇಕೆಂದು ಸರಕಾರ ಕೂಡಲೇ ಸೂಚನೆ ಕೊಡಬೇಕು ಎಂದು ಈ ಸಂದರ್ಭದಲ್ಲಿ ಸರಕಾರಕ್ಕೆ ಪ್ರಾರ್ಥನೆ ಮಾಡುತ್ತಾ ಇದ್ದೇನೆ.

ಇನ್ನು ಹೆಚ್ಚು ವೇಳೆ ತೆಗೆದುಕೊಳ್ಳದೆ ಒಂದು ಮಾತು ಹೇಳಲು ಬಯಸುತ್ತೇನೆ. ಈ ಇಲಾಖೆಯಲ್ಲಿ ಕೆಲಸ ಮಾಡತಕ್ಕಂಥ ಹಂಗಾಮಿ ನವಕರರ ಬಗ್ಗೆ ಒಂದು ಮಾತು ಹೇಳುತ್ತೇನೆ. ಈ ಇಲಾಖೆಯ ನತದೃಷ್ಟ ನವಕರರ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಸಂಸಾರವಂದಿಗರ ಸ್ಥಿತಿ ಬಹಳ ಕಷ್ಟದಾಯಕವಾಗಿದೆ. ಈ ನವಕರರನ್ನು ಕಾಯಮಾಗಿ ಸೇರಿಸದೇ ಇದ್ದರೆ ಅವರ ಸ್ಥಿತಿ ಇನ್ನೂ ಶೋಚನೀಯವಾಗುತ್ತದೆ. ಈ ದುರಾದೃಷ್ಟ ಪರಿಸ್ಥಿತಿಯನ್ನು ತಪ್ಪಿಸುವುದು ಸರಕಾರದ ಕರ್ತವ್ಯ. ಇದನ್ನು ಸರಿಪಡಿಸದೇ ಇದ್ದರೆ ಇದು ಸರಕಾರ ಆಗಲಾರದು ಎಂದು ಹೇಳುತ್ತೇನೆ. ಅನೇಕ ಸಂದರ್ಭದಲ್ಲಿ ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿ ಒದಗಿಸತಕ್ಕಂಥ ಸಂದರ್ಭದಲ್ಲಿ ಕೂಡ ನಿಧಾನವಾಗುತ್ತಿದೆ. ವರ್ಷಗಟ್ಟಲೆ ವಿದ್ಯುಚ್ಛಕ್ತಿ ಒದಗಿಸದೇ ಇರತಕ್ಕಂಥ ಸನ್ನಿವೇಶಗಳಿವೆ. ಸಣ್ಣಪುಟ್ಟ ಕೈಗಾರಿಕೆಗಳಿಗೆ ಒದಗಿಸುತ್ತೇವೆ ಎಂದು ಸರಕಾರ ಬಾಯಲ್ಲಿ ಹೇಳುವುದು ಒಂದು ಸ್ಲೋಗನ್ನು

ಆಗಿದೆ. ಇದನ್ನು ಬಿಡಬೇಕು. ಮತ್ತು ವಿದ್ಯುಚ್ಛಕ್ತಿ ಒದಗಿಸುವುದಕ್ಕೆ ಸೂಕ್ತ ಏರ್ಪಾಡು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಂಥ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣ ಮುಗಿಸುತ್ತೇನೆ.

† ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಸ್ವಾಮಿ, ನಮ್ಮ ಊರಿಗೆ ಹಣಕಾಸಿನ ಮಂತ್ರಿಗಳು ಮತ್ತು ಮರಾಮತ್ತು ಇಲಾಖೆಯ ಮಂತ್ರಿಗಳು ಬಂದಾಗ್ಗೆ ಪಂಪ್ ಸೆಟ್ ಸಪ್ಲೈ ಮಾಡುವ ಬಗ್ಗೆ ಏನು ಹೇಳಿದ್ದಾರೆ ಅಂದರೆ, ಅರ್ಜಿ ಕೊಟ್ಟ ಮೇಲೆ ಹದಿನೈದು ದಿವಸದಿಂದ ಒಂದು ತಿಂಗಳ ಒಳಗೆ ಪಂಪ್ ಸೆಟ್ ಸಪ್ಲೈ ಮಾಡುತ್ತೇವೆ, ಇದಕ್ಕೆ ಯಾವ ಅನುಮಾನ ಬೇಡ, ಅಧಿಕಾರಿಗಳು ರೈತನ ಮನೆಯ ಬಾಗಿಲಿಗೆ ಹೋಗಿ ಪಂಪ್ ಸೆಟ್ಸ್ ಕೊಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಪಂಪ್ ಸೆಟ್ಸ್ ಸಪ್ಲೈ ಮಾಡಬೇಕೆಂದು ಅರ್ಜಿ ಕೊಟ್ಟು ಎರಡು ವರುಷಗಳಾಗಿದ್ದರೂ ಕೂಡ ಇನ್ನೂ ಸಪ್ಲೈ ಮಾಡಿಲ್ಲ. ಅಲ್ಲದೆ ಇವರ ಮನೆ ಬಾಗಿಲಿಗೆ ದೇವರ ಗುಡಿಗೆ ಹೋದ ಹಾಗೆ ಅಲೆದಾಡಿದ್ದಾಯಿತು. ಆದುದರಿಂದ ಮಂತ್ರಿಗಳು ಕೊಟ್ಟಂಥ ವಚನಕ್ಕೆ ಭಂಗ ಬಾರದಂತೆ ನೋಡಿಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ವಿದ್ಯುತ್ ಶಕ್ತಿ ಸಪ್ಲೈ ಮಾಡಬೇಕು ಎಂದು ಕೇಳಿಕೊಂಡರೆ ಕಂಬ ಇಲ್ಲಾ ತಂತಿ ಇಲ್ಲಾ ಮೆಟೀರಿಯಲ್ ಸ್ಟಾಕ್ ಇಲ್ಲಾ ಎಂದು ಹೇಳುತ್ತಾರೆ. ನೀವು ಮಟೀರಿಯಲ್ ಕೊಂಡದ್ದು ಎಷ್ಟು, ಲೈನ್ ಮೇಲೆ ಉಪಯೋಗಿಸಿದ್ದು ಎಷ್ಟು ಎಂಬುದಕ್ಕೆ ನಿಮ್ಮ ಹತ್ತಿರ ಲೆಕ್ಕ ಇಲ್ಲವೇ ಎಂದು ಕೇಳುತ್ತೇನೆ. ದಾಕ್ಷಿಣ್ಯಕ್ಕಾಗಿ ಕಾಂಗ್ರೆಸ್ ಮುಖಂಡರ ಪ್ರಭಾವಕ್ಕೆ ಒಳಗಾಗಿ ವಿದ್ಯುತ್ ಶಕ್ತಿ ಪೂರೈಕೆ ಮಾಡುವುದಕ್ಕಾಗಿ ಕಂಬ ಸಪ್ಲೈ ಮಾಡುತ್ತೀರಿ ಎಂಬ ಉದಾಹರಣೆಗಳಿವೆ. ಇದನ್ನು ಸರಿಪಡಿಸುವುದಕ್ಕೆ ನಿಮಗೆ ಶಕ್ತಿ ಇಲ್ಲವೇ ?

5-30 P.M.

ಕೊನೆಗೆ ಅದನ್ನು ಯಾರು ತೆಗೆದುಕೊಂಡರೋ ಅವರದೇ ಆಯಿತು ! ನನ್ನದು ಈ ಕಂಬ ಎಂದು ಹೇಳುವವರೇ ಇಲ್ಲದೆ ಹೋಯಿತು ! ಅಂದ ಮೇಲೆ ನಿಮಗೆ ನಿಮ್ಮಲ್ಲಿರುವ ಸ್ಟಾಕ್ ಎಷ್ಟೆಂಬುದೇ ಗೊತ್ತಾಗಿಲ್ಲವೆಂದಾಯಿತು. ಆದ್ದರಿಂದ ತಾವು ಈ ವಿದ್ಯುಚ್ಛಕ್ತಿ ಬೋರ್ಡಿಗೆ ಹಣವನ್ನು ಕೊಟ್ಟಿದ್ದರಿಂದ ಏನಾದರೂ ಸೌಲಭ್ಯ ಪಡೆಯಬೇಕೆಂದಿದ್ದರೆ ಈ ರೀತಿಯ ಸಾಮಾನುಗಳ ಲೆಕ್ಕಪತ್ರವನ್ನು ಮೊದಲು ಸರಿಪಡಿಸಬೇಕು. ಕೊಳ್ಳುವಾಗ ಹೆಚ್ಚಿನ ಪ್ರಮಾಣದಲ್ಲಿ ತೆಗೆದುಕೊಂಡು, ಆಮೇಲೆ ಎಷ್ಟು ಕೊಂಡಿದ್ದೀರೆಂದು ಕೇಳಿದಾಗ ಸಾಮಾನುಗಳು ಸರಿಯಾಗಿರಲಿಲ್ಲವೆಂದು ಹೇಳಿದರೆ ಅಂಥ ಅಂಗಡಿ ಉಳಿಯುತ್ತದೆಯೇ ? ವ್ಯಾಪಾರ ಮಾಡುವವರು ಎಂದಾದರೂ ಹೀಗೆ ಮಾಡುತ್ತಾರೆಯೇ ? ಈ ಬೋರ್ಡು ತನ್ನ ಕೆಲಸಕಾರ್ಯಗಳನ್ನು ವ್ಯವಹಾರ ದೃಷ್ಟಿಯಿಂದ ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ಮಂತ್ರಿಗಳು ಉತ್ತರ ಹೇಳುವಾಗ, ಎಷ್ಟು ಪೋಲ್‌ಗಳನ್ನು ಕೊಂಡುಕೊಂಡಿದ್ದರು, ಕೊಳ್ಳುವಾಗ ಯಾರಾದರೂ ಅಧಿಕಾರಿಗಳು ನೋಡಿ ಸರ್ಟಿಫೈ ಮಾಡಿದ್ದರೇ ಎಂಬುದನ್ನು ದಯವಿಟ್ಟು ತಿಳಿಸಬೇಕು. ಅಲ್ಲದೆ ಈ ಕಬ್ಬಿಣದ ಪೋಲ್‌ಗಳು ಬೇರೆ ಎಲ್ಲಿಯೂ ತಯಾರಾಗುವುದಿಲ್ಲ. ಆದ್ದರಿಂದ ನೀವು ತರಿಸತಕ್ಕ ಪೋಲ್‌ಗಳಿಗೆ ಒಂದು ಸೀಲ್ ಹಾಕಿಸಿ ಅದು ಬೇರೆ ರೀತಿಯಲ್ಲಿ ಇತರರ ಪಾಲಾಗದ ಹಾಗೆ ಮಾಡಬೇಕು. ಈಗ ಎಷ್ಟೋ ಕಡೆ ಕಾಡುಗಳಲ್ಲಿ ಈ ಪೋಲ್‌ಗಳು ಬಿದ್ದಿರುತ್ತವೆ. ಯಾವನೋ ಗಾಡಿಯಲ್ಲಿ ತುಂಬಿಕೊಂಡು ಹೋಗಿಬಿಡುತ್ತಾನೆ. ಅದನ್ನು ಹಿಡಿದು ತನ್ನದೆಂದು ಸಾಧಿಸುವ ಸ್ಥಿತಿಯಲ್ಲಿ ನೀವಿಲ್ಲ. ಇತ್ತ ತಾವು ಸ್ವಲ್ಪ ಗಮನಕೊಡಬೇಕು.

ಇನ್ನೊಂದು ವಿಷಯ. ನಾವು ಶರಾವತಿ ಪ್ರಾಜೆಕ್ಟ್ ಕಟ್ಟಿ ಈಗಾಗಲೇ ಎಷ್ಟು ವರ್ಷವಾಯಿತು ! ಇಷ್ಟು ವರ್ಷಗಳಾದರೂ, ಇದುವರೆಗೂ ಅಲ್ಲಿಂದ ಉತ್ಪತ್ತಿಯಾಗುವ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಳ್ಳುವುದಕ್ಕೆ ಎಷ್ಟು ಪೋಲುಗಳು ಬೇಕು, ಎಷ್ಟು ತಂತಿ ಬೇಕು-ಎಂಬುದನ್ನೇನಾದರೂ ಯೋಚನೆ ಮಾಡಿದ್ದೀರಾ ? ಎಲ್ಲಿ ಕೇಳಲಿ, ತಂತಿಯಿಲ್ಲ ! ಪೋಲ್ ಇಲ್ಲ ! ಎಂದು ಹೇಳುತ್ತೀರಿ. ಇದುವರೆಗೂ ತಂತಿಯಿಲ್ಲ, ಪೋಲ್ ಇಲ್ಲವೆಂದು ಹೇಳುತ್ತಿದ್ದ ಮಂತ್ರಿಗಳು, ಈಗ ಅದೆಲ್ಲಾ ಇದೆ, ಟ್ರಾನ್ಸ್‌ಫಾರ್ಮರ್‌ಗಳು ಇಲ್ಲವೆಂದು ಹೇಳುತ್ತಿದ್ದಾರೆ. ಟ್ರಾನ್ಸ್‌ಫಾರ್ಮರ್‌ಗಳು ಸಿಕ್ಕಿಯಾಯಿತೆಂದು ಮಂತ್ರಿಗಳು ಇನ್ನೊಮ್ಮೆ ಹೇಳುತ್ತಾ, ಕಂಬವನ್ನು ನೆನಸುವುದಕ್ಕೆ ಬೇಕಾದ ಎಣ್ಣೆಗೆ ಅಭಾವವಿದೆಯೆಂದು ತಿಳಿಸಿದರು. ಹೀಗಾದರೆ ನೀವು ಮೈಸೂರು ದೇಶದಲ್ಲಿ ಉತ್ಪನ್ನವಾಗುವ ವಿದ್ಯುತ್ತನ್ನು ಉಪಯೋಗಿಸುವ ಯೋಚನೆಯೇನಾದರೂ ನಿಮಗಿದೆಯೇ ಎಂದು ನಾನು ಕೇಳಬಯಸುತ್ತೇನೆ. ಅಥವಾ ಆಂಧ್ರಕ್ಕೋ, ಗೋವಾಕ್ಕೋ, ಮದ್ರಾಸಿಗೋ ನಮ್ಮಲ್ಲಿರುವ ವಿದ್ಯುತ್ತನ್ನು ಮಾರೋಣವೆಂಬುದೇ ತಮ್ಮ ಉದ್ದೇಶವೋ ? 'ಓಡಿ ಹೋಗುವ ಬಡ್ಡಿ ಮೊಸರಿಗೆ ಹೆಪ್ಪು ಹಾಕುತ್ತಾಳೆಯೇ' ಎಂಬಂತೆ ನೀವೇನಿದ್ದರೂ ಬಂದಷ್ಟೇ ಸಾಕೆಂದು ನಮ್ಮಲ್ಲಿರುವ

(ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ)

ವಿದ್ಯುಚ್ಛಕ್ತಿಯನ್ನು ಮಾರಿಕೊಂಡು ಹೋಗುವ ಯೋಚನೆಮಾಡಿರುವಂತೆ ಕಾಣುತ್ತೆ. ನಮ್ಮ ದೇಶಕ್ಕೆ ಅನುಕೂಲವಾಗಲಿ, ನಮ್ಮ ರೈತರಿಗೆ ಅನುಕೂಲವಾಗಲಿ ಎಂಬ ಧ್ಯೇಯ ತಮ್ಮದಿದ್ದರೆ ನೀವು ಎಂದೂ ಹೀಗೆ ಮಾಡುವುದಿಲ್ಲ. ರೈತರು 5—6 ಸಾವಿರ ರೂಪಾಯಿ ಖರ್ಚು ಹಾಕಿಕೊಂಡು ನಿಮ್ಮನ್ನು ವಿದ್ಯುಚ್ಛಕ್ತಿಯನ್ನು ಕೊಡಿ ಎಂದು ಕೇಳಿದಾಗ ನೀವು ನಿಮ್ಮಲ್ಲಿ ಕಂಭ ಇಲ್ಲ, ಸಾಮಾನಿಲ್ಲ—ಎಂದರೆ ಆ ರೈತನ ಗತಿ ಏನಾಗಬೇಕು ! ಅವನಿಗೆಷ್ಟು ನಿರುತ್ಸಾಹವಾಗುತ್ತದೆ! ಅವನಿಗೆಷ್ಟು ಬಡ್ಡಿ ಬಿದ್ದಿರುತ್ತದೆ, ಎಷ್ಟು ನಷ್ಟವಾಗುತ್ತದೆ ಎಂಬುದನ್ನು ಆಲೋಚನೆಮಾಡಿ.

ಇನ್ನೊಂದು ವಿಷಯ. ಈ ಬೋರ್ಡಿನಲ್ಲಿ ಕೆಲಸಮಾಡುವ ಜನರಿಗೆ ನೆಮ್ಮದಿ ಇದೆಯೇ ನೋಡಿ. ಎಷ್ಟೋ ವರ್ಷ ಸರ್ವಿಸ್ ಮಾಡಿದ್ದರೂ ಹಂಗಾಮಿಯಾಗಿಯೇ ಇರುತ್ತಾರೆ. ತಮಗಾದರೂ ಒಂದು ಭದ್ರವಾದ ಆಫೀಸಿದೆ; ಕುಳಿತು ಕೆಲಸಮಾಡುತ್ತೇವೆಂಬ ಭರವಸೆಯಿದೆ. ಅವರಿಗ ಏದರೂ ಯಾರಿದ್ದಾರೆ ಅವರು ಅಕಸ್ಮಾತ್ತಾಗಿ ಬಿದ್ದು ಸತ್ತರೆ? ಅವರ ಹೆಂಡಿರುಮಕ್ಕಳಿಗೆ ದಿಕ್ಕೇನಿದೆ ? 20 ವರ್ಷ ಕೆಲಸ ಮಾಡುತ್ತಿದ್ದರೂ ಅವರಿಗೆ ಮನಸ್ಸಿಗೆ ನೆಮ್ಮದಿಯಿಲ್ಲ. ಯಾವತ್ತು ಕೆಲಸದಿಂದ ತೆಗೆದು ಬಿಡುತ್ತಾರೋ ಎಂದು ಭಯಪಟ್ಟುಕೊಂಡು ಸಾಹೇಬರಿಗೆ ಅಡಿಯಾಳಾಗಿರಬೇಕು. ಚಿಲ್ಲರೆ ಅಂಗಡಿಯಲ್ಲಿ ಕೆಲಸದಲ್ಲಿ ಇರುವ ಒಬ್ಬ ಮನುಷ್ಯನನ್ನು ಕೆಲಸದಿಂದ ತೆಗೆಯಬೇಕೆಂದರೆ ಲೇಬರ್ ಆಕ್ಟ್—ಇತ್ಯಾದಿ ಎಲ್ಲವೂ ಅವನ ನೆರವಿಗೆ ಬರುತ್ತವೆ. ಆದರೆ, ಈ ಬೋರ್ಡಿನ ಕೂಲಗಾರರಿಗೆ ಆ ಸಹಾಯವೂ ಇಲ್ಲ! ಅವರು ಎಂದಿಗಾದರೂ ನೆಮ್ಮದಿಯಿಂದ ಬದುಕುವ ಸನ್ನಿವೇಶವೇ ಇಲ್ಲ ! ಇದೊಂದು ಕಳಂಕವಾಗಿದೆಯೆಂದು ಹೇಳುತ್ತೇನೆ.

ಆಮೇಲೆ, ತಾವು ಯೋಜನೆಗಳನ್ನು ಹಾಕುವ ಸಂದರ್ಭದಲ್ಲಿಯೇ, ನಮ್ಮದೇಶಕ್ಕೆ ವಿದ್ಯುಚ್ಛಕ್ತಿ ಬೇಕು, ನಮ್ಮಲ್ಲಿ ಉತ್ಪತ್ತಿಯಾಗುವ ವಿದ್ಯುಚ್ಛಕ್ತಿಯನ್ನು ಯಾವ ರೀತಿ ಬಳಸಬೇಕು ಎಂಬದನ್ನೂ ವ್ಯವಸ್ಥೆ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ನಾನು ಮತ್ತೊಮ್ಮೆ ಕಂಭದ ವಿಷಯ ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದನ್ನು ಅಷ್ಟು ಸುಲಭವಾಗಿ ಭಾವಿಸಬಾರದು. ಒಂದೊಂದು ಕಂಭಕ್ಕೂ 300—400 ರೂಪಾಯಿ ಬಾಳುತ್ತದೆ. ಎಷ್ಟೋ ಜನರು ತೆಗೆದುಕೊಂಡು ಹೋಗುತ್ತಾರೆ. ಅದನ್ನು ಕೇಳುವುದಕ್ಕೇ ಆಗುವುದಿಲ್ಲ. ಅದು ನಮ್ಮದು ಎನ್ನುವುದಕ್ಕೆ ಸೀಲ್ ಆಗಲಿ, ಮತ್ತೊಂದಾಗಲಿ ಇರುವುದಿಲ್ಲ. ಕಂಪ್ಲೇಂಟ್ ಕೊಟ್ಟರೆ, ಕಂಭ ನಿಮ್ಮದೇ ಅನ್ನುವುದಕ್ಕೆ ಸೀಲ್ ಇದೆಯೇ ಎಂದು ಪೋಲೀಸಿನವರು ಕೂಡ ಉತ್ತರ ಹೇಳಿರುತ್ತಾರೆ. ನಿಮ್ಮಲ್ಲಿ ಲೆಕ್ಕ ಪತ್ರಗಳು ಬೇರೆ ಸರಿಯಾಗಿಲ್ಲ. ಏನೋ ಒಂದು ಪುಸ್ತಕ ತಯಾರು ಮಾಡಿಟ್ಟುಕೊಂಡಿದ್ದೀರಿ ! ಲೆಕ್ಕ ಪತ್ರಗಳೇ ಇಲ್ಲದಿರುವ ಬಾಬಿನ ವಿಷಯದಲ್ಲಿ ಏನೂ ಹೆಚ್ಚಿಗೆ ಹೇಳುವ ಹಾಗಿಲ್ಲ. ಈ ಪರಿಸ್ಥಿತಿಯನ್ನು ಸುಧಾರಿಸುವ ಕಡೆ ಮಂತ್ರಿಗಳು ಗಮನ ಕೊಡಬೇಕು. ರೈತರುಗಳು ಅರ್ಜಿ ಹಾಕಿದ 15 ದಿವಸಗಳಲ್ಲಿ ಪಂಪ್‌ಸೆಟ್ಟು ವಿದ್ಯುಚ್ಛಕ್ತಿ ಕೊಡುವಂತೆ ಏರ್ಪಾಡು ಮಾಡಬೇಕು. ಕೆಲವು ವೇಳೆ ಏನೋ ಮಂತ್ರಿಗಳು ಫೋನ್ ಮಾಡಿ 'ನಮ್ಮವರು, ಬೇಗ ಪಂಪ್‌ಸೆಟ್ ಕೊಡಿ' ಎಂದು ಹೇಳಿ ಕೊಡಿಸಿರುವ ಸಂದರ್ಭಗಳೇನೋ ಇವೆ. ದಾಕ್ಷಿಣ್ಯಕ್ಕಾಗಿ ಕಂಪೆನಿಯವರು ಕೆಲವರಿಗೆ ಬೇಗ ಪಂಪು ಒದಗಿಸುತ್ತಾರೆ. ಆದರೆ ಎಷ್ಟೋ ಕಡೆ ಅರ್ಜಿ ಹಾಕಿ ಅನೇಕ ದಿವಸಗಳಾದರೂ ಪಂಪ್‌ಸೆಟ್ಟು ಸಿಕ್ಕಿಲ್ಲ. ನಿಮಗೆ ಬೇಗ ಒದಗಿಸಲಿಕ್ಕೆ ಸಾಧ್ಯವಿಲ್ಲದಿದ್ದರೆ ನಮ್ಮ ಕೈಗೆ ದುಡ್ಡು ಕೊಟ್ಟುಬಿಡಿ. ನಮಗೆ ಬೇಕಾದ ಸೆಟ್ಟನ್ನು ಆರಿಸಿ ತೆಗೆದುಕೊಳ್ಳುತ್ತೇವೆ. ಈಗ ನೀವು ಸಾಲಕೊಡುತ್ತೀರೆಂದು ಹೇಳಿ, ಏನಿರಲಿ—ಏನಿಲ್ಲದಿರಲಿ ಪಂಪನ್ನು ನೀವು ಕೊಟ್ಟದ್ದನ್ನು ತೆಗೆದುಕೊಳ್ಳುತ್ತಿದ್ದೇವೆ. ಹಾಕಿಸಿದ ಮೂರು ದಿವಸಕ್ಕೆ ಅದರ ಸ್ಟಾರ್ಟರ್ ಹೋಗಿಬಿಡುತ್ತದೆ; 'ಕಾಯಿಲ್'' ಸುಟ್ಟು ಹೋಗುತ್ತದೆ. ಅಲ್ಲಿಗೆ ರೈತನೇ ಸುಟ್ಟು ಹೋದಂತೆ ಇದೇಕೆ ಹೀಗೆ ಮಾಡಬೇಕು ? ರೈತನಿಗೇ ಹಣ ಕೊಟ್ಟುಬಿಡಿ. ಅವನ ಇಡೀ ಜಮೀನನ್ನೇ ಆಧಾರಮಾಡಿ ಕೊಟ್ಟಿರುತ್ತಾನಲ್ಲಾ ! ನಿಮ್ಮ ಹಣಕ್ಕೆ ಹೆದರಿಕೆ ಎಲ್ಲಿ ? ಈ ರೀತಿ ಏರ್ಪಾಡು ಮಾಡಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಭಾಸ್ಕರಶೆಟ್ಟಿ (ಕಾಪ್).—ಮೈಸೂರು ರಾಜ್ಯದ ವಿದ್ಯುತ್ ಮಂಡಲಿಯ 1966-67ನೆಯ ವಾರ್ಷಿಕ ಹಣಕಾಸಿನ ಬಡ್ಜೆಟ್ಟಿನಲ್ಲಿ ತಾವು ನಮೂದಿಸಿರುವ ಅಂಕಿ ಸಂಖ್ಯೆಗಳನ್ನು ನೋಡಿದರೆ, ಪ್ರಥಮತಃ ನಮ್ಮ ಮೈಸೂರು ದೇಶವು ಹೆಚ್ಚಿಗೆ ವಿದ್ಯುಚ್ಛಕ್ತಿಯನ್ನು ಉತ್ಪನ್ನ ಮಾಡಿದರೂ ಅದರಿಂದ ಅದು ಪಡೆದಿರತಕ್ಕ ಪ್ರಯೋಜನವಾದರೂ ಬಹಳ ಕಡಮೆಯೆಂದೇ ಭಾವಿಸಬಹುದು. ಹೇಗೆಂದರೆ, ತಾವು ಕೊಟ್ಟಿರುವ ಅಂಕಿ ಸಂಖ್ಯೆಗಳ ಪ್ರಕಾರ ಏನೋ 430 ಮೆಗಾವ್ಯಾಟ್ ಶಕ್ತಿಯನ್ನು ಉತ್ಪಾದನೆ ಮಾಡುತ್ತಿದೆ. ಆದರೆ ಇದರಲ್ಲಿ ಶರಾವತಿಯಿಂದ ಬಂದ ಜಾಸ್ತಿ ವಿದ್ಯುಚ್ಛಕ್ತಿ

ಯೆಲ್ಲಾ ನಮ್ಮ ಸಂಸ್ಥಾನದ ಹೊರಗಿರುವ ಮದ್ರಾಸ್, ಗೋವಾ, ಆಂಧ್ರ ಪ್ರದೇಶಗಳಿಗೆ ಕೊಡಲಾಗಿದೆ. ಆ ದೇಶಗಳು ನಮ್ಮ ವಿದ್ಯುಚ್ಛಕ್ತಿಯ ಉತ್ಪಾದನೆಯಿಂದ ಪ್ರಯೋಜನ ಹೊಂದುತ್ತಿವೆ. ನಮ್ಮಲ್ಲಿ ಅದನ್ನು ಉಪಯೋಗಿಸಿಕೊಳ್ಳುವುದಕ್ಕೆ ತಕ್ಕಷ್ಟು ಸಾಧನಗಳಿಲ್ಲ. ಆದ್ದರಿಂದ ಈ ರೀತಿ ನಾವು ಉತ್ಪಾದನೆ ಮಾಡಿದ ವಿದ್ಯುತ್ತನ್ನು ಉಪಯೋಗಿಸಿಕೊಳ್ಳಲಿಕ್ಕೆ ತಕ್ಕ ಕಾರ್ಖಾನೆಗಳನ್ನು ಸ್ಥಾಪಿಸಿದ ಹೊರತು, ವಿದ್ಯುಚ್ಛಕ್ತಿಯಿಂದ ನಮಗೆ ಹೆಚ್ಚಿನ ಪ್ರಯೋಜನ ಪಡೆದಂತಾಗುವುದಿಲ್ಲ. ಎಣ್ಣೆ ಬಂದಾಗ ಗಾಣ ಮುರಿದುಹೋಯಿತು ಎಂಬಂತೆ, ನಮಗೆ ಹೆಚ್ಚಿಗೆ ವಿದ್ಯುಚ್ಛಕ್ತಿ ದೊರೆತಾಗ ಅದನ್ನು ಉಪಯೋಗಿಸಿಕೊಳ್ಳುವ ಶಕ್ತಿಯಿಲ್ಲದೆ ಹೋಗಿದೆ. ಉತ್ಪತ್ತಿಮಾಡಿದ ಶಕ್ತಿಯನ್ನು ಉಪಯೋಗಿಸಿ ಜೀರ್ಣಿಸಿಕೊಳ್ಳುವ ದೊಡ್ಡ ಕಾರ್ಖಾನೆಗಳಿಲ್ಲದೆ ನಾವು ಬಹಳ ಹೀನಸ್ಥಿತಿಯಲ್ಲಿದ್ದೇವೆ. ಈ ಅಂಶ ಸರ್ಕಾರದ ನಪುಂಸಕತ್ವವನ್ನು ಎತ್ತಿ ತೋರಿಸುತ್ತಿದೆಯೆಂದು ನಾನು ಹೇಳಬೇಕಾಗಿದೆ. ತಾವೇನೋ ಹೇಳಿದ್ದೀರಿ, ಅಲ್ಯೂಮಿನಿಯಂ ಫ್ಯಾಕ್ಟರಿ, ರಾಸಾಯನಿಕ ಗೊಬ್ಬರದ ಕಾರ್ಖಾನೆ, ಹೊಸಪೇಟೆಯ ಕಬ್ಬಿಣದ ಕಾರ್ಖಾನೆ—ಇವೆಲ್ಲಾ ಕಾರ್ಯರೂಪಕ್ಕೆ ಬಂದರೆ 300 ಮೆಗಾವ್ಯಾಟ್ಸ್‌ಗಳಷ್ಟು ಶಕ್ತಿಯನ್ನು ಉಪಯೋಗಿಸಬಹುದಾಗಿದೆ, ಎಂದು ಆದರೆ, ಈಗ ಈ ರೀತಿ ತಾವು ರಿಪೋರ್ಟಿನಲ್ಲಿ ಹೇಳುತ್ತಿರುವುದೆಲ್ಲಾ 'ಆದರೆ, ಹೋದರೆ, ಹತ್ತಿ ಬೆಳೆದರೆ ಅಜ್ಜಿಗೊಂದು ಪಟ್ಟೆಯಸೀರೆ' ಎಂಬಂತಾಗಿದೆ.

ಇತ್ತ ವ್ಯವಸಾಯದ ಬಾಬಿನಲ್ಲಿ, ತಾವು ನೀರಾವರೀ ಪಂಪು ಸೆಟ್ಟುಗಳಿಗೆ ಒದಗಿಸುತ್ತಿರುವ ವಿದ್ಯುತ್ ಲೆಕ್ಕಾಚಾರ ನೋಡುವುದಾದರೆ, ನಮ್ಮ ರಾಜ್ಯದಲ್ಲಿ ಈ ತನಕ ಕೊಟ್ಟಿರತಕ್ಕ ಪಂಪು ಸೆಟ್ಟುಗಳ ಸಂಖ್ಯೆ ಇತರ ರಾಜ್ಯಗಳವರು ಕೊಟ್ಟಿರತಕ್ಕ ಪಂಪು ಸೆಟ್ಟುಗಳಿಗಿಂತ ಬಹಳ ಕಡಮೆಯಿದೆಯೆನ್ನಬಹುದು. ನೀವು ಹೇಳಿರುವ ಲೆಕ್ಕದ ಪ್ರಕಾರವೇ, ಮದ್ರಾಸಿನಲ್ಲಿ ಈಗಾಗಲೇ 3,75,000 ಪಂಪುಗಳಿವೆ. ಆಂಧ್ರದಲ್ಲಿ 2,07,124 ಪಂಪುಗಳಿವೆ. ನಮ್ಮಲ್ಲಿ 42,288 ಮಾತ್ರ ಇವೆ. ಒಂದು ಕಡೆ, ಹೆಚ್ಚು ಆಹಾರದ ಉತ್ಪಾದನೆ ಮಾಡಬೇಕೆಂದು ಸೋಗು ಹಾಕಿಕೊಳ್ಳುತ್ತಿದ್ದೀರಿ. ಇನ್ನೊಂದು ಕಡೆ ನೀರಾವರಿ ಸೌಲಭ್ಯ ಒದಗಿಸಲು ಪಂಪುಗಳನ್ನು ಕೊಡುವುದರಲ್ಲಿ ನಿಧಾನಿಸುತ್ತಿದ್ದೀರಿ. ಹೀಗಾದರೆ ನಮ್ಮ ವ್ಯವಸಾಯ ಹೇಗೆ ಮುಂದುವರಿದೀತು ? ಹೀಗಿರುವಲ್ಲಿ, ಈ ನಾಲ್ಕನೆಯ ಯೋಜನೆಯಲ್ಲಿ ನೀವು ಕಾಣಿಸಿರುವುದೂ ಬಹಳ ಕಡಮೆಯೆನ್ನಬೇಕು. ತಾವು ಒಂದುಲಕ್ಷ ಪಂಪುಸೆಟ್ಟುಗಳನ್ನು ಕೊಡಬೇಕೆಂದು ಅಂದಾಜು ಮಾಡಿರುವುದು ಎಷ್ಟು ಮಾತ್ರವೂ ಸಾಲದೆಂದು ನಾನು ಹೇಳುತ್ತೇನೆ. ಇದು ಬಹಳ ಕಡಮೆ. ಹೆಚ್ಚು ಆಹಾರ ಧಾನ್ಯದ ಉತ್ಪಾದನ ಆಗಲಿಕ್ಕೆ, ನಮ್ಮ ರೈತರು ಹೆಚ್ಚಿನ ಉತ್ಪಾದನೆಯನ್ನು ಪಡೆಯಲಿಕ್ಕೆ ಹೆಚ್ಚು ಹೆಚ್ಚು ಪಂಪ್‌ಸೆಟ್‌ಗಳನ್ನು ಒದಗಿಸಬೇಕಾಗುತ್ತದೆ. ಇಲ್ಲದೆ ಹೋದರೆ ಅಧಿಕ ಉತ್ಪಾದನೆಯ ಕೂಗು ಕಾಗದದ ಮೇಲೆ ಉಳಿಯುತ್ತದೆ, ಕಾರ್ಯಾಚರಣೆಯಲ್ಲಿ ಬರಲಾರದು ಎಂದು ಒತ್ತಿ ಹೇಳುತ್ತೇನೆ.

ನಾಲ್ಕನೆಯ ಯೋಜನೆಯಲ್ಲಿ 53 ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಆದರೆ ವಿದ್ಯುತ್ ಮಂಡಲಿಯು 63 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಕಾರ್ಯಕ್ರಮಗಳನ್ನು ಇಟ್ಟುಕೊಂಡಿದೆ ಎಂದು ಇದರಲ್ಲಿ ಹೇಳುತ್ತಿದ್ದಾರೆ. 63 ಕೋಟಿ ರೂಪಾಯಿ ಅಲ್ಲ ನೂರು ಕೋಟಿ ರೂಪಾಯಿವರೆಗೂ ಅದನ್ನು ಹೆಚ್ಚಿಸಿದರೂ ಅಡ್ಡಿ ಇಲ್ಲ. ವಿದ್ಯುತ್ತನ್ನು ಆದಷ್ಟು ಹೆಚ್ಚು ಹೆಚ್ಚಾಗಿ ವ್ಯವಸಾಯದ ಉಪಕರಣಗಳಿಗೆ ಒದಗಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಇನ್ನು ಪಂಪ್ ಸೆಟ್‌ಗಳನ್ನು ಕೊಡುವಾಗ ಮಾನ್ಯ ಮುಕ್ಕಣ್ಣಪ್ಪನವರು ಹೇಳಿದ ಹಾಗೆ ಮಲತಾಯಿ ಧೋರಣೆಯನ್ನು ಹೊಂದಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯನ್ನು ಸಂಪೂರ್ಣವಾಗಿ ಹೀನಾಯವಾಗಿ ಕಂಡಿದ್ದಾರೆಂದು ನನಗನ್ನಿಸುತ್ತದೆ. ಮೈಸೂರು ದೇಶದ ನೀರಾವರಿ ಅಭಿವೃದ್ಧಿಯನ್ನು ತೆಗೆದು ನೋಡುವಾಗ ನಮ್ಮ ಜಿಲ್ಲೆಯಲ್ಲಿ ಏನೇನೂ ದೊಡ್ಡ ನೀರಾವರಿ ಯೋಜನೆಗಳಿಲ್ಲ. ನಮ್ಮ ಜಿಲ್ಲೆಯಲ್ಲಿ ಇರುವಷ್ಟು ಬಾವಿಗಳು ಮೈಸೂರು ರಾಜ್ಯದ ಯಾವ ಜಿಲ್ಲೆಯಲ್ಲಿ ಕೂಡ ಇಲ್ಲ. ಮಾತ್ರವಲ್ಲದೆ ಬತ್ತ ಬೆಳೆಯುವ ಜಿಲ್ಲೆಗಳಲ್ಲಿ 5 ಲಕ್ಷ ಎಕರೆಯಲ್ಲಿ ಬತ್ತ ಬೆಳೆಯುತ್ತಿರುವ ದಕ್ಷಿಣ ಕನ್ನಡ ಜಿಲ್ಲೆ ಮೈಸೂರು ರಾಜ್ಯದ ಐದನೇ ಒಂದು ಅಂಶವನ್ನು ಬೆಳೆಯುತ್ತಿದೆ. ಹೀಗಿದ್ದೂ ಕೂಡ ನಮ್ಮ ಜಿಲ್ಲೆಗೆ ಪಂಪ್‌ಸೆಟ್‌ಗಳನ್ನು ಒದಗಿಸುವುದರಲ್ಲಿ ಸರ್ಕಾರದವರು ತಾರತಮ್ಯ ಮಾಡಿದ್ದಾರೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾತ್ರವಲ್ಲದೆ, ನಾಲ್ಕನೆಯ ಯೋಜನೆಯಲ್ಲಿ ಪಂಪ್‌ಸೆಟ್‌ಗಳನ್ನು ಒದಗಿಸಬೇಕೆಂದು ಇಟ್ಟುಕೊಂಡಿರುವ ಗುರಿಯನ್ನು (ಟಾರ್ಜೆಟ್) ನೋಡಿದರೆ ಬೆಳಗಾಂನಲ್ಲಿ ಮೂರನೆಯ ಯೋಜನೆ ಅಂತ್ಯದ ವೇಳೆಗೆ 20 ಪಂಪ್‌ಸೆಟ್‌ಗಳಿದ್ದು ಒಮ್ಮೆಲೇ 24,000 ಕ್ಕೆ ಏರಿಸುವ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದಾರೆ. ಈವಾಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಐದು ಸಾವಿರದವರೆಗು ಪಂಪ್ ಸೆಟ್‌ಗಳಿಗೆ, ಆದರೆ ಇದರಲ್ಲಿ 4338 ಪಂಪ್‌ಸೆಟ್‌ಗಳನ್ನು ಮೂರನೆ ಯೋಜನೆ ಅಂತ್ಯದ ವೇಳೆಗೆ ಕೊಟ್ಟಿದ್ದೇವೆ, ನಾಲ್ಕನೆಯ ಯೋಜನೆಯಲ್ಲಿ 9500 ಪಂಪ್ ಸೆಟ್‌ಗಳನ್ನು ಕೊಡಬೇಕೆಂದು ಮಾಡಿದ್ದಾರೆ. ಈ ಲೆಕ್ಕಾಚಾರಗಳನ್ನು ತೆಗೆದು ನೋಡಿದರೆ, ಈ ತಾರತಮ್ಯಗಳನ್ನು ನೋಡಿದರೆ

(ಶ್ರೀ ಬಿ. ಭಾಸ್ಕರಶೆಟ್ಟಿ)

ಏನೋ ಒಂದೆ ತರಹ 'ಅನ್‌ಡ್ಯೂ ಇನ್‌ಫ್ಲುಯೆನ್ಸ್‌ಗೆ' ಒಳಗಾಗಿದ್ದಾರೆಂದು ಗೊತ್ತಾಗುತ್ತದೆ. ಮಾತ್ರವಲ್ಲದೆ ಅವರು ಕೊಟ್ಟಿರುವ ಅಂಕಿ ಸಂಖ್ಯೆಗಳ ಪ್ರಕಾರ ನೋಡಿದರೆ ನಮ್ಮ ಜಿಲ್ಲೆಗೆ ಅನ್ಯಾಯ ಮಾಡಿದ್ದಾರೆ.

ಅಧ್ಯಕ್ಷರು.—ನಿಮ್ಮ ಜಿಲ್ಲೆಗೆ ಅನ್ಯಾಯವಾಗಿದೆ ಎಂದು ಹೇಗೆ ಹೇಳುತ್ತೀರಿ ? ನನಗೆ ಹಾಗೆ ಕಾಣುವುದಿಲ್ಲವಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಬೆಳಗಾವಿಯಲ್ಲಿ 20 ಪಂಪ್‌ಸೆಟ್‌ಗಳು ಕೆಲಸ ಮಾಡುತ್ತಿದ್ದು ನಾಲ್ಕನೆಯ ಯೋಜನೆಯಲ್ಲಿ 24,000ಕ್ಕೆ ಹೋಗುತ್ತದೆ. ನಮ್ಮ ಜಿಲ್ಲೆಯಲ್ಲಿ ಸುಮಾರು 5 ಸಾವಿರ ಪಂಪ್‌ಸೆಟ್‌ಗಳವರೆಗೂ ಕೆಲಸ ಮಾಡುತ್ತಿದ್ದು ನಾಲ್ಕನೆ ಯೋಜನೆಯಲ್ಲಿ 9,500ಕ್ಕೆ ಮಾತ್ರ ಏರಿಸುವ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದಾರೆ. ಇದು ಅನ್ಯಾಯ ಎಂದು ಹೇಳುತ್ತೇನೆ. ಇಡೀ ಮೈಸೂರು ರಾಜ್ಯದಲ್ಲಿ ನೀರನ್ನು ಎತ್ತಿ ಸಾಗುವಳಿ ಮಾಡುವ ಏಕಮಾತ್ರ ಜಿಲ್ಲೆ ಎಂದರೆ ದಕ್ಷಿಣ ಕನ್ನಡ ಜಿಲ್ಲೆ ಮಾತ್ರ. ಅಲ್ಲಿರುವಷ್ಟು ಬಾವಿಗಳು ಮಾತ್ರವಲ್ಲದೆ ಸಿಹಿ ನೀರಿನ ನದಿಗಳು ಸಹ ಬೇರೆ ಯಾವ ಕಡೆಯೂ ಇಲ್ಲ. ಈ ಜಿಲ್ಲೆಯಲ್ಲಿ ನೀರು ಎತ್ತಿ ಸಾಗುವಳಿ ಮಾಡುವುದರಿಂದ ಹೆಚ್ಚಿಗೆ ನೀರಾವರಿ ಪಂಪ್‌ಸೆಟ್‌ಗಳನ್ನು ಒದಗಿಸಬೇಕು. 50 ಸಾವಿರ ಪಂಪ್‌ಸೆಟ್‌ಗಳನ್ನಾದರೂ ದಕ್ಷಿಣ ಕನ್ನಡ ಜಿಲ್ಲೆಗೆ ನಾಲ್ಕನೆಯ ಯೋಜನೆಯಲ್ಲಿ ಒದಗಿಸಿದರೆ ಇನ್ನೂ ಮೂರು ನಾಲ್ಕು ಲಕ್ಷ ಟನ್ ಆಹಾರ ಉತ್ಪಾದನೆ ಜಾಸ್ತಿಯಾಗಿ ಕೊಡುತ್ತೇವೆ. ಅಂಥ ಒಂದು ಸಂಪತ್ತು, ಅಂಥ ಉತ್ಪಾದನಾ ಶಕ್ತಿ ನಮ್ಮ ಜಿಲ್ಲೆಯಲ್ಲಿದೆ ಎಂದು ಹೇಳುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಂಪ್‌ಸೆಟ್‌ಗಳನ್ನು ಒದಗಿಸಲು ಹಾಕಿಕೊಂಡಿರುವ ಕಾರ್ಯಕ್ರಮ ಏನೇನೂ ಸಾಲದು. ಈವಾಗ 50 ಲಕ್ಷ ರೂಪಾಯಿಗಳ ನೀರಾವರಿ ಪಂಪ್‌ಸೆಟ್‌ಗಳ ಯೋಜನೆ ಮಂಜೂರಾಗಿದ್ದು ಆ ಪ್ರಕಾರ 870 ಪಂಪ್‌ಸೆಟ್‌ಗಳನ್ನು ಹಾಕಬಹುದು. ಇನ್ನು 28 ಲಕ್ಷ ರೂಪಾಯಿಗಳ ಯೋಜನೆ ಅಂಗೀಕಾರವಾದರೆ 516 ಪಂಪ್‌ಸೆಟ್‌ಗಳು ಬರುತ್ತವೆ. ಈ ಎಲ್ಲ ಕಾರ್ಯಕ್ರಮಗಳನ್ನೂ ಆದಷ್ಟು ಬೇಗ ಮಾಡುವುದಕ್ಕೆ ಪ್ರಯತ್ನಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ವಿದ್ಯುಚ್ಛಕ್ತಿ ಮಂಡಲಿಯಲ್ಲಿ ಇನ್ನೊಂದು ದೊಡ್ಡ ತೊಂದರೆಯುಂಟಾಗಿದೆ. ಸೆಂಟ್ರಲೈಜೇಷನ್ ಆಫ್ ಅಕೌಂಟ್ಸ್ ಎಂದು ಕೇಂದ್ರೀಕರಣವನ್ನು ಮಾಡಿದ್ದಾರೆ. ಈಗ ಲೆಕ್ಕಪತ್ರಗಳೆಲ್ಲ ಶಿವಮೊಗ್ಗ ಸರ್ಕಲ್ ಆಫೀಸಿಗೆ ಹೋಗ ಬೇಕಾಗುತ್ತದೆ. ಸರ್ಕಲ್ಲಿನಲ್ಲಿ ಮಾತ್ರ ಲೆಕ್ಕ ಪತ್ರಗಳಿರಬೇಕು, ಮಂಗಳೂರು ಡಿವಿಜನ್ನಿನ ಲೆಕ್ಕಪತ್ರಗಳನ್ನೆಲ್ಲ ಶಿವಮೊಗ್ಗೆಗೆ ಕಳುಹಿಸಬೇಕು, ನೌಕರರೇನಿದ್ದಾರೆ ಅವರ ಸಂಬಳ ಸಾರಿಗೆಗಳು ಅಲ್ಲಿಂದ ಬರಬೇಕು, ಇನ್ನಿತರ ಕಾಮಗಾರಿಗಳಿಗೆ ಸಂಬಂಧಪಟ್ಟ ಲೆಕ್ಕಗಳೂ ಅಲ್ಲಿ ಇರಬೇಕು ಎಂದು ಮಾಡಿರುವುದರಿಂದ ಬಹಳ ತೊಂದರೆಯುಂಟಾಗಿದೆ. ಮದ್ರಾಸಿನಲ್ಲಿ ಮಾಡಿದ್ದಾರೆ, ಆಂಧ್ರದಲ್ಲಿ ಮಾಡಿದ್ದಾರೆ, ಇದರಿಂದ ಒಳ್ಳೆಯದಾಗುತ್ತದೆ ಎಂದು ನೆನೆಸಿಕೊಂಡು ಈ ರೀತಿ ಮಾಡುವುದರಿಂದ ಬಹಳ ಕೆಲಸಗಳಿಗೆ ತುಂಬ ತೊಂದರೆಯಾಗಿದೆ. ಆದ್ದರಿಂದ ಹಿಂದೆ ಇದ್ದ ಕ್ರಮವನ್ನು ಪುನಃ ಅನುಸರಿಸುವಂತೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಸ್ಟೋರ್ಸ್ ಮೊದಲು ಎಲ್ಲ ಸಬ್ ಸ್ಟೇಷನ್‌ಗಳಲ್ಲಿಯೂ ಇರುತ್ತಿತ್ತು. ಅಲ್ಲಿಂದ ಬೇಕಾದ ಸಾಮಾನುಗಳನ್ನು ತೆಗೆದುಕೊಂಡು ಕೆಲಸ ಮಾಡುತ್ತಿದ್ದರು. ಈವಾಗ ಇಡೀ ದಕ್ಷಿಣ ಜಿಲ್ಲೆಗೆ ಉಡುಪಿ ಮತ್ತು ಮಂಗಳೂರು ಜಿಲ್ಲೆಗಳಲ್ಲಿ ಮಾತ್ರ ಎರಡು ಸ್ಟೋರ್ಸ್ ಇಟ್ಟಿದ್ದಾರೆ. ಅಲ್ಲಿಂದ ಜಿಲ್ಲೆಯ ಎಲ್ಲ ಭಾಗಗಳಿಗೂ ಬೇಕಾದ ಸಾಮಾನು ಸಲಕರಣೆಗಳನ್ನು ತೆಗೆದುಕೊಂಡು ಹೋಗಿ ಕೆಲಸ ಮಾಡಬೇಕಾಗಿದೆ. ಇದರಿಂದ ಬಹಳ ತೊಂದರೆಯುಂಟಾಗಿದೆ. ಈ ರೀತಿ ಬದಲಾವಣೆ ಮಾಡಿರುವುದರಿಂದಾಗಿ ಸಬ್ ಸ್ಟೇಷನ್‌ಗಳಲ್ಲಿ ಸೂಪರ್‌ವೈಸರ್‌ಗಳು ಇರುವುದೇ ಇಲ್ಲ. ಅವರು ಬೇಕಾದ ಸಾಮಾನುಗಳನ್ನು ತೆಗೆದುಕೊಳ್ಳಲು ಆಗಾಗ್ಗೆ ಉಡುಪಿ ಅಥವಾ ಮಂಗಳೂರಿಗೆ ಹೋಗಬೇಕಾಗುತ್ತದೆ. ಒಂದು ನೀರಾವರಿ ಪಂಪ್‌ಸೆಟ್‌ಗೆ ಸರ್ವಿಸ್ ಕೊಡಲು ಬೇಕಾದ ಮೆಟೀರಿಯಲ್ ಡ್ರಾ ಮಾಡಬೇಕಾದರೆ ಕಾಪುನಿಂದ ಮಂಗಳೂರು ಅಥವಾ ಉಡುಪಿಗೆ ಓಡಾಡುವುದಕ್ಕೆ ಎರಡು ಮೂರು ದಿನ ಹೋಗುತ್ತದೆ. ಯಾವಾಗ ನೋಡಿದರೂ ಸೂಪರ್‌ವೈಸರುಗಳು ಸಬ್ ಸ್ಟೇಷನ್‌ಗಳಲ್ಲಿ ಇರುವುದಿಲ್ಲ. ನೀರಾವರಿ ಪಂಪ್ ಸರ್ವಿಸ್ ಮಾಡಬೇಕಾದರೆ, ವಿಚಾರ ಮಾಡಿದಾಗ ಸಾಮಾನು ತರಲಿಕ್ಕೆ ಉಡುಪಿಗೆ ಹೋಗಿದ್ದಾರೆ ಎಂದು ಹೇಳುತ್ತಾರೆ. ಇದರಿಂದಾಗಿ ನೂರಕ್ಕೆ 75 ಅಂಶ ಕೆಲಸ ಕಡಮೆಯಾಗಿದೆ. ಮೊದಲಿನಿಂದ ಇದ್ದ ಹಾಗೆ ಸ್ಟೋರ್ಸ್ ಸೌಕರ್ಯವನ್ನು ಸಬ್ ಸ್ಟೇಷನ್‌ಗಳಲ್ಲಿ ಇಟ್ಟುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†Sri SANJEEVANATH AIKALA.—Mr. Speaker, Sir, without getting into the merits and demerits of the Budget Estimates, I want to refer to certain points inasmuch as they relate to South Kanara.

Sri A. P. APPANNA (Virajpet).—South Kanara is the most benefitted district in electricity.

Sri SANJEEVANATH AIKALA.—My friend Sri Bhasker Shetty has very vividly put forward how we were given a stepmotherly treatment. South Kanara consists of several rivers, rivulets, tanks and wells.

Sri C. J. MUCKANNAPPA.—It is a very strange thing that my friends Sri Bhasker Shetty and Sri Sanjeevanath Aikala are putting forward.

Sri SANJEEVANATH AIKALA.—It is true that we have been given step-motherly treatment and we are so much agitated over it. If the matter had been left to us, we would have by this time electrified at least 10,000 pumpsets and we would have fed not only South Kanara but even Coorg also.

Sri A. P. APPANNA.—If a pumpset is installed you cease to grow paddy and begin to grow arecanut only.

Sri SANJEEVANATH AIKALA.—The Hon'ble member is casting aspersions which I strongly refute.

Why I say this is, because there are several rivers, rivulets, tanks and mud-cutters and wells which are supplied with perennial water seources; and if this water has to be used, for irrigation, it could be only by mechanical or physical means. Here comes the utility of I.P. sets. So far in South Kanara, only 219 villages have been provided with electric light and only 5,000. I.P. sets have been serviced. Today, still there are not less than 43 schemes costing a lakh of rupees below are awaiting sanction either at Shimoga or Bangalore. There are some more big schemes. If such schemes are not sanctioned in time and implemented within a year, we will not be able to reach the target fixed for the next five years. The people of South Kanara have the capacity and drive to go ahead. The people in our district are very co-operative and enthusiatic; I am proud to say that in our District, people are prepared to take the burden of any number of projects and schemes. Only you must give them the necessary scope and the opportunity. You need not even give subsidies or loans to them. The people will provide themselves with their own money. If lift irrigation projects are implemented in South Kanara district, it will benefit the people there, enormously. It is here that you have done some injustice to the people of South Kanara by not providing them with sufficient power to the pumpsets. When our people are prepared to instal them, why do you deny them the requisite facilities. The people of our district are very industrious and work-minded. They do not depend upon Government help for money; they are capable of finding funds and they love hard work.

Sri C. J. MUCKANNAPPA.—We too are industrious.

SRI SANJEEVANATH AIKALA.—Without going into any other controversial matters, I wish to bring home to the Hon'ble Members on the other side, certain economy measures which have been adopted by the Electricity Board. Already, my friend Sri Bhaskara Shetty has referred to them. I lay emphasis only on a few economy measures which, instead of facilitating and augmenting the volume of work, have cried halt even to the normal work. I mean, the normal work-load an employee could have done, has come now down; this is due to the fact that the employees are not satisfied with their wages. Secondly, most of the stores materials have been removed to the Central Office; consequently, it is very difficult to make indents and get materials for I.P. sets from near-by places. Even to give simple electric connection, it will take two to three days. There is difficulty even for indenting small materials. Thirdly, there is the question of transport. I do not know the position of transport so far as other districts are concerned. In our Districts, we have five lorries belonging to the M.S.E.B., out of which, three are always in sick bed. Only two are in working condition. Even these two lorries will not be available as and when required; they will be used by the Supervisors and other staff for their work, with the result the people are put into severe hardship; the electrical materials they require will not be promptly transported to the required places. Besides, the people have not only to pay money, they have to go with the departmental staff to carry and remove the materials from place to place; the parties have to provide men also to remove things. Now even so much help is given by the concerned officers. Moreover, there is great delay in attending to the work in the Sectional Office. The Sectional officers are not always responsive with the result the people are put to great hardship; they are not willing to help the agriculturists in installing the pumpsets and giving service connection. Lot of delay occurs at all stages and people are disgusted. There are instances where they have taken two to three days to give service connection. I do not want to make allegations against them. This much I would like to say; there is lot of corruption at the Section Office level; if the palms of the officials is not greased, nothing will be done at the Section Office level. That is my experience also. These things have been pointed out time after time even at the meetings of the Development Council and nothing has been done to rectify them.

In the revised tariff, certain injustice has been done to the farmers of the South Kanara District. In the Note attached to the booklet "Electric Power Tariffs," it is said that consumers under this tariff are entitled to utilise electrical energy supplied under this schedule for lighting the pump house, well and 'farm houses' up to a limit. This term 'farm house' is new to South Kanara because there, we have got only farmer's houses. This note has to be clarified. Otherwise, the benefit accruing from this schedule will be lost to the farmers of the South Kanara District.

Further under the same Note, it has been stated that consumers are permitted "to utilise electrical energy alternately with the pump sets for small cottage industries for farm products such as cane crushing, grinding

thrashing, incubators, heating,.........etc if they are located outside the village panchayat areas.'' There is nothing like a village or place in South Kanara which is located outside the village panchayat area. Every village there is construed as being located within the village panchayat area. If this Note is not again clarified, as far South Kanara is concerned, certainly our famers will not stand to benefit by this concession. I wish the Note is properly worded so that all farms may be benefited.

I also wish the position of the casual workers working in the Electricity Department is clarified. Their plight pitiable. Hon'ble Members have referred to their deplorable position already. I need not touch about it again. I only wish to strees that unless these people are kept contented and given wages commensurate with the workload they are expected to undertake, we cannot expect much work form them. They are depressed and frustrated. They are capable of doing more work; but nobody can force work on dissatisfied workers; the wages paid to them are so meagre that we cannot expect them to do more work. Four or five workers engage themselves to dig and plant one or two poles. If adequate wages are paid to them, the same number of workers will plant 8 to 10 poles. I must say that the scale of wages paid to them is far below the standard of wages expected to be paid to their work.

There is lot of delay in sanctioning schemes. Sanction has to be obtained from the Superintending Engineer at Shimoga or at Bangalore. I know the instance of schemes costing Rs. 62,000, taking 2½ years to obtain sanction; they had to be sanctioned at Bangalore. Now that power of sanction was given to The Shimoga region Engineer. I wish more power is given to the District Executive Engineer and also the Divisional Officer concerned, because the schemes should be sanctioned immediately and executed as early as possible.

6-00 P.M.

Hitherto, there was the problem of shortage of electrical energy. Now that additional power is available from Sharavathi, the Electricity Board must think of having sufficient materials to enable th m to supply power. If the Electricity Board and its officials work with drive, energy and enthusiasm, within a year we can fulfil the target which has been fixed for the five years. At least, 25 per cent of the targets would be fulfilled within a year if only the Board works with vigour, earnestness and drive in this matter. Sir, providing electrical energy to the pump sets is a supreme necessity, because we are in a very bad state of food shortage. Only electricity can come to the rescue of our people to relieve the food shortage. If electricity is given to the pump sets, we need not look for other countries for our foodgrains. I request the young and enthusiastic Hon'ble Minister and the experienced Electricity Board to see that the schemes adumbrated here are implemented and executed as early as possible.

With these words, I conclude.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಸ್ವಾಮಿ, ಮಾನ್ಯ ಸಭಾಪತಿಗಳೇ, ಈಗ ಎಲೆಕ್ಟ್ರಿಸಿಟಿ ಬೋರ್ಡಿನ ಆಯವ್ಯಯದ ಮೇಲೆ ಮಾತನಾಡತಕ್ಕ ಅವಕಾಶವನ್ನು ಕಲ್ಪಿಸಿಕೊಟ್ಟಿರತಕ್ಕ ಅಧ್ಯಕ್ಷರಿಗೆ ವಂದಿಸಿ ಕೆಲವು ಮಾತುಗಳನ್ನು ಆಡಿ ನನ್ನ ಮಾತನ್ನು ಪೂರೈಸುತ್ತೇನೆ. ಸ್ವಾಮಿ, ಈ ದಿವಸ, ಈ ಬೋರ್ಡಿನ ಅಧಿಕಾರಿ ವರ್ಗದ ಮೇಲೆ ಸುಮಾರು ಎರಡು ಕೋಟಿ ಇಪ್ಪತ್ತೈದು ಲಕ್ಷ ರೂಪಾಯಿಗಳವರೆಗೂ ಖರ್ಚು ಮಾಡುತ್ತಾ ಇದ್ದೇವೆ. ಇದರ ಬಗ್ಗೆ ಪ್ರಾಯಶಃ ಸಾಕಷ್ಟು ಕೆಲಸ ವಾಗುತ್ತಿಲ್ಲ ಎಂದು ಹೇಳಿದರೆ ಅದನ್ನು ಅಧಿಕಾರಿ ವರ್ಗದವರು ತಪ್ಪುತಿಳಿದುಕೊಳ್ಳುವುದಿಲ್ಲ ಎಂದು ನಾನು ಭಾವಿಸಿದ್ದೇನೆ. ಎರಡು ಕೋಟಿ ಇಪ್ಪತ್ತೈದು ಲಕ್ಷ ರೂಪಾಯಿ ಸಿಬ್ಬಂದಿ ಖರ್ಚು ಏನಿವೆ ಇದು ಬಹಳ ಹೆಚ್ಚು ಎಂದು ನನ್ನ ವೈಯಕ್ತಿಕವಾದ ಅಭಿಪ್ರಾಯ. ಈ ದಿವಸ ಒಂದು ನಿದರ್ಶನ ವನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮೀಟರ್ ರೀಡಿಂಗ್ ಜವಾಬ್ದಾರಿಯನ್ನು ಒಬ್ಬರಿಗೆ ಹೊರಿಸಿದ್ದೀರಿ, ಅವರು 1500 ಮೀಟರ್ ರೀಡಿಂಗ್ ತಂದರೆ ಸಾಕು ಎಂದು ಹೇಳಿದ್ದೀರಿ ಯಾವ ಆಧಾರದ ಮೇಲೆ ಇದನ್ನು ನಿಗದಿ ಮಾಡಿದ್ದೀರಿ ಎಂಬುದು ಅರ್ಥವಾಗುವುದಿಲ್ಲ. ಬಹಳ ಜನ ಈ ಮಾನ್ಯ ಸಭೆಯ ಮಾನ್ಯ ಸದಸ್ಯರು ಹೇಳಿದ್ದಾರೆ. 27 ಸಾವಿರ ಜನ ಎಂಪ್ಲಾಯೀಸ್‌ಗೆ ಸಾಕಾದಷ್ಟು ಇಮಾಲ್ಯುಮೆಂಟ್ಸ್ ಇಲ್ಲ. ಪುನಃ ಪರಿಶೀಲನೆ ಮಾಡಬೇಕೆಂದು ವಾದವನ್ನು ಮಾಡಿದರು. ಒಂದು ಪ್ರಶ್ನೆ ಕೇಳಿದ್ದಕ್ಕೆ ಮಾನ್ಯ ಮಂತ್ರಿಗಳು ಹೇಳಿದರು, ಮೀಟರ್ ರೀಡಿಂಗ್ ಮಾಡತಕ್ಕ ಒಬ್ಬ ಸೂಪರ್ ವೈಸರ್ ಸುಮಾರು ಮೂರು ಸಾವಿರ ಮೀಟರ್ ರೀಡಿಂಗ್ ಮಾಡುವುದಕ್ಕೆ ಸಾಧ್ಯವಿದೆ. ಹಾಗಿರುವಾಗ ಈ ಇಲಾಖೆಯಲ್ಲಿರತಕ್ಕ ಅಧಿಕಾರಿ ವರ್ಗದ ಸಂಖ್ಯೆಯನ್ನು ಕಡಿಮೆ ಮಾಡಿ ಇರತಕ್ಕವರಿಗೆ ಹೆಚ್ಚಿಗೆ ಸಂಬಳ ಕೊಡಿ ಅದಕ್ಕೆ ನಾನು ಬೇಡ ಎನ್ನುವುದಿಲ್ಲ. ಪ್ರತಿಯೊಬ್ಬರಿಗೂ ಸಂಬಳ ಜಾಸ್ತಿ ಮಾಡಬೇಕು, ಬೋರ್ಡಿನ ಪ್ರತಿಯೊಬ್ಬ ಅಧಿಕಾರಿಗೂ ಹೆಚ್ಚಿನ ಸವಲತ್ತು ಕೊಡಬೇಕೆಂದರೆ, ಭೂಮಿಯಲ್ಲಿ ಕೆಲಸ ಮಾಡತಕ್ಕ ಅಗ್ರಿಕಲ್ಚರಲ್ ಲೇಬರರ್ ಯಾರಿದ್ದಾರೆ ಅವನಿಗೆ ಅವರನ್ನು ಹೋಲಿಸಿ ಯೋಚನೆ ಮಾಡುವುದಾದರೆ ಅವನಿಗೆ ಯಾರೂ ರಕ್ಷಣೆ ಕೊಡುವವರೇ ಇಲ್ಲ ಎಂದು ಅರ್ಥವಾಗುತ್ತದೆ. ಒಂದು ಕಡೆ ನಾವು ಯಾವ ಒಂದು ವರ್ಗಕ್ಕೆ ಸವಲತ್ತು ಇವೆ, ಅವರಿಗೇ ಸವಲತ್ತನ್ನು ಹೆಚ್ಚು ಮಾಡುವುದಕ್ಕೆ ಬೇಡಿಕೆಯನ್ನು ತಮ್ಮ ಮುಂದೆ ಇಡುತ್ತಾ ಹೋದರೆ ಪ್ರಾಯಶಃ ಅದಕ್ಕೆ ಕೊನೆ ಮೊದಲೇ ಇಲ್ಲ ಎಂದು ಅನಿಸುತ್ತದೆ. ಬೋರ್ಡಿನ ಪರಿಮಿತಿಯಲ್ಲಿ ಇಂಡಸ್ಟ್ರಿಯಲ್ ಡಿಸ್ಪ್ಯೂಟ್ಸ್ ಆಕ್ಟ್‌ನಲ್ಲಿರತಕ್ಕ ಕಾಲಂ ಪ್ರಕಾರ, 500 ರೂಪಾಯಿಗಳಿಗೆ ಕಡಿಮೆ ಇರತಕ್ಕ ಸಂಬಳದ ನೌಕರರೆಲ್ಲರೂ ಯೂನಿಯನ್‌ಗೆ ಸೇರತಕ್ಕ ಅವಕಾಶವಿದೆ. ಅದನ್ನು ತಿದ್ದುಪಡಿ ಮಾಡಿದರೆ ಒಳ್ಳೆಯದು ಎಂದು ನನ್ನ ಭಾವನೆ. ಕೆಲವು ಜನ ಸೂಪರ್‌ವೈಸರ್ಸ್ ಅಥವಾ ಪ್ರಥಮ ದರ್ಜೆ ಗುಮಾಸ್ತರು 350–500 ಸಂಬಳ ಬರತಕ್ಕವರಿಗೆ ಈ ಒಂದು ಅವಕಾಶವನ್ನು ಕೊಟ್ಟಿರುವುದು ಸರಿಯಲ್ಲ. ಎಕ್ಸಿಕ್ಯೂಟೀವ್ ಲೈನ್‌ನಲ್ಲಿ ಕೆಲಸ ಮಾಡುತ್ತಾ ಇರುತ್ತಾನೆ, ಅವನಿಗೆ ಈ ಒಂದು ಸೌಲಭ್ಯ ಇರಬೇಕಾದ್ದು ಬಹಳ ಅಗತ್ಯ.

ರಿಟೈರ್ ಆದ ಟೆಕ್ನಿಕಲ್ ಅಧಿಕಾರಿಗಳನ್ನು ಈ ಬೋರ್ಡಿನ ಚೇರ್ಮನ್ ಆಗಿ ನೇಮಕ ಮಾಡಿದ್ದೀರಿ. ನಾನು ಒಂದು ಪ್ರಶ್ನೆ ಕೇಳುತ್ತೇನೆ, ಈ ನಿವೃತ್ತರಾಗಿರತಕ್ಕ ಅಧಿಕಾರಿಗಳು ಈ ಇಲಾಖೆಯನ್ನು ಎಷ್ಟುಮಟ್ಟಿಗೆ ರೀ ಆರ್ಗನೈಸ್ ಮಾಡಿದ್ದಾರೆ? ಅವರಿಗೆ ಅಧಿಕಾರದ ಅದಬ್ ಹೋಗಿಲ್ಲ ಎಂದು ಮಾನ್ಯ ಸ್ನೇಹಿತರೊಬ್ಬರು ಹೇಳಿದರು ಅದು ನಿಜ. ನಾನು ಒಂದು ದಿವಸ ಅವರನ್ನು ನೋಡುವುದಕ್ಕೆ ಹೋದ ಕಾಲದಲ್ಲಿ–ಶಾಸಕರಿಗೂ ಕೂಡ ಇಂಟರ್‌ವ್ಯೂ ಕೊಡತಕ್ಕ ಸೌಜನ್ಯತೆ ಅವರಲ್ಲಿ ಇರಲಿಲ್ಲ. ಕೊಡದಿದ್ದರೆ ಹೋಗಲಿ ಚಿಂತೆ ಇಲ್ಲ. ಖಾಸಗಿ ಜನರ ಹತ್ತಿರ ವ್ಯವಹಾರ ಮಾಡತಕ್ಕ ಸನ್ನಿವೇಶಗಳು ಇರತಕ್ಕ ಕಡೆ, ನಿವೃತ್ತರಾಗಿರತಕ್ಕ ಆ ಅಧಿಕಾರಿಗಳು ತಮ್ಮ ಹಳೆಯ ಸಂಪ್ರದಾಯವನ್ನೇ ಅನುಸರಿಸಿಕೊಂಡು ಹೋಗುತ್ತಾ ಇದ್ದು, ಅವರಿಗೆ ಬಂದವರನ್ನು ನೋಡಲು ಇಂಟರ್‌ವ್ಯೂ ಕೊಡಲು ಕೂಡ ತಾಳ್ಮೆ ಇಲ್ಲ ಎಂದರೆ ಇದು ಎಂತಹ ಪ್ರಸಂಗ ಎಂಬುದನ್ನು ಬಹಳ ನೊಂದು ಹೇಳುತ್ತಾ ಇದ್ದೇನೆ. ತಾವು ಇದರ ಬಗ್ಗೆ ಯೋಚನೆ ಮಾಡಬೇಕು. ಅವರ ಎಫಿಷೆನ್ಸಿ ಎಲ್ಲಿದೆ ಎಂದು ಪ್ರಶ್ನೆ ಮಾಡುತ್ತೇನೆ.

ಪಂಪ್ ಸೆಟ್ಸ್‌ಗೆ ರೇಟ್ ಕೊಟೇಷನ್ಸ್ ಪ್ರೈವೇಟ್ ಫರ್ಮ್ಸ್‌ನಿಂದ ಚೆರ್ಮನ್‌ರು ಆಕ್ಸೆಪ್ಟ್ ಮಾಡಬೇಕು. ಅದು ಇನ್ನೂ ಆಗಿಲ್ಲ. 1966-67ನೇ ಸಾಲಿನಲ್ಲಿ 6 ತಿಂಗಳು ಮುಗಿದು ಹೋಯಿತು ಇನ್ನೂ ಅಪ್ರೂವ್ ಮಾಡಿಲ್ಲ ಎಂದರೆ ಎಷ್ಟುಮಟ್ಟಿಗೆ ರೈತನಿಗೆ ಪಂಪ್ ಸೆಟ್ಟುಗಳನ್ನು ಕೊಡುವುದರ ಬಗ್ಗೆ ಸಾಧ್ಯವಾದೀತು ಎಂದು ಹೇಳಿ ಪ್ರಶ್ನೆ ಮಾಡುತ್ತೇನೆ.

ಫ್ರೀಕ್ವೆನ್ಸಿ ಟ್ರಾನ್ಸ್‌ಮಿಷನ್ ಲೈನ್ಸ್ ವಿಷಯ ಎರಡು ವರ್ಷದಿಂದ ಪ್ರಸ್ತಾಪ ಮಾಡುತ್ತಾ ಇದ್ದೇವೆ. 58 ರಿಂದ ಈಚೆಗೆ ಎಷ್ಟು ಫ್ರೀಕ್ವೆನ್ಸಿ ಟ್ರಾನ್ಸ್‌ಮಿಷನ್ ಲೈನ್ ಎಳೆದಿದ್ದೀರಿ? ಅದು ತಮ್ಮ ಪುಸ್ತಕದಲ್ಲಿ ಇದೆ. ಇನ್ನೂ ಸುಮಾರು 6-7 ಕಡೆ ಎಳೆಯತಕ್ಕ ಬಗ್ಗೆ ತಮ್ಮ ಆನ್ಯುಯಲ್

ಸ್ಟೇಟ್‌ಮೆಂಟಿನಲ್ಲಿ ಅಳವಡಿಸಿದ್ದೀರಿ. ಈಗ ನಾವು ಎಳೆದಂತಹ ಲೈನ್‌ಗಳು ಎಲ್ಲಾ ಲೈನ್‌ಗಳು ಇವೆಯೋ ಎಂದು ಪರಿಶೀಲನೆ ನಡೆಸಿದರೆ ತಮಗೆ ಗೊತ್ತಾಗುತ್ತದೆ. ಶ್ರೀಮಾನ್ ರೇವಣಸಿದ್ದಪ್ಪನವರು ಹೇಳಿದರು ಎಷ್ಟೋ ಕಡೆ ಕಂಬಗಳೇ ಪತ್ತೆ ಇಲ್ಲ, ಅವುಗಳು ಬೋರ್ಡಿನವೇ ಇಲ್ಲವೆ ಎಂಬುದನ್ನು ಐಡೆಂಟಿಫೈ ಮಾಡುವುದಕ್ಕೇ ಆಗುವುದಿಲ್ಲ. ನಿಮ್ಮ ಇಲಾಖೆಯಲ್ಲಿ ಇವುಗಳ ಲೆಕ್ಕಪತ್ರ ಇದೆಯೆ ? ಒಂದು ವೇಳೆ ಆ ರೀತಿ ಅವುಗಳು ಇರಬೇಕಾದ ಕಡೆ ಇಲ್ಲದೇ ಹೋದರೆ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಯಾರಿದ್ದಾರೋ ಅವರ ಮೇಲೆ ರೆಸ್‌ಪಾನ್ಸಿಬಲಿಟಿ ಫಿಕ್ಸ್ ಮಾಡಿದ್ದೀರಾ ? ತಾವು ಕೊಟ್ಟಿರತಕ್ಕ ಅಂಕಿಅಂಶಗಳಿಂದ ಇದು ಯಾವುದೂ ಅರ್ಥವಾಗುತ್ತಾ ಇಲ್ಲ. ಇವತ್ತು ಎಮರ್ಜೆನ್ಸಿ ಫೀಡರ್ ಲೈನ್ಸ್ ಇಲ್ಲ ಎಂದರೆ ಅದಕ್ಕೆ ಯಾರು ಜವಾಬ್ದಾರರು ? ಶೇಕಡ ಮೂವತ್ತು ಭಾಗದಷ್ಟು ಮೆಟೀರಿಯಲ್ಸ್ ಈ ಬೋರ್ಡಿನ ವ್ಯವಹಾರದಲ್ಲಿ ಅಪವ್ಯಯವಾಗುತ್ತಾ ಇದೆ. ಎಂದು ಹೇಳಿದರೆ ಇದು ಒಂದು ಉತ್ಪ್ರೇಕ್ಷೆಯಲ್ಲ. ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತಿನ ದಿವಸ ಈ ಬೋರ್ಡಿನ ವ್ಯವಹಾರ ಎಷ್ಟು ಅವ್ಯವಸ್ಥಿತವಾಗಿದೆ ಎಂದರೆ ಒಬ್ಬ ಅಧಿಕಾರಿಗೆ ಯಾವುದೇ ಒಂದು ಜವಾಬ್ದಾರಿಯೂ ಇಲ್ಲ, ಇದರ ಬಗ್ಗೆ ತಾವು ಫುಲ್ ಆಪ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಇವತ್ತಿನ ದಿವಸ ತಾವು ಕೆಲವು ಸ್ಟ್ಯಾಂಡರ್ಡ್ಸ್ ಫಿಕ್ಸ್ ಮಾಡಿದ್ದೀರಿ, ರೂರಲ್ ಎಲೆಕ್ಟ್ರಿಫಿಕೇಷನ ಗೆ ಎಳೂವರೆ ಪರ್ಸೆಂಟ್ ರಿಟರ್ನ್ ಬಂದರೆ ಮಾಡುತ್ತೇವೆ ಎಂದು ಹೇಳುತ್ತೀರಿ. ನಾನಾದರೋ ಈ ದಿವಸ ಈ ಒಂದು ಪ್ರಶ್ನೆಯನ್ನು ತಮ್ಮ ಮುಂದೆ ಇಡಲಿಚ್ಛಿಸುತ್ತೇನೆ. ಈ ದಿವಸ ಬೋರ್ಡಿನವರೇನು ಕ್ಯಾಪಿಟಲ್ ಎಕ್ಸ್‌ಪೆಂಡಿಚರಿನಲ್ಲಿ ಈ 220-110-66 ಮತ್ತು 33 ಕೆ.ವಿ. ಲೈನುಗಳನ್ನು ಹಾಕಬೇಕೆಂದು ಇಚ್ಛಿಸಿದ್ದಾರೋ ಇದರ ಜೊತೆಗೆ ಕ್ಯಾಪಿಟಲ್ ಎಕ್ಸ್‌ಪೆಂಡಿಚರ್‌ನಲ್ಲಿ ಸಬ್ ಟ್ರಾನ್ಸಿಮಿಷನ್ ಲೈನ್ ಕೂಡ ಮಾಡಿದರೆ ಕಾಸ್ಟ್ ಸ್ವಲ್ಪ ಕಡಮೆಯಾಗಬಹುದು. ಕ್ಯಾಪಿಟಲ್ ಎಕ್ಸ್‌ಪೆಂಡಿಚರಿನಲ್ಲಿ ಒಂದು ಪಂಪ್ ಸೆಟ್ಟಿಗೆ ಸರ್ವೀಸನ್ನು ಕೊಡುವುದಕ್ಕೆ 2500 ರೂಪಾಯಿ ಬಿದ್ದರೆ ಇದು ಡೆವಲಪ್‌ಮೆಂಟ್‌ಬಾಬಿನಲ್ಲಿ ಒಂದು ಹೆಚ್.ಪಿ. ಗೆ 2500 ರೂ. ಯಿಂದ ಇಳಿಯುತ್ತದೆ ಒಟ್ಟಿನಲ್ಲಿ ನಾನು ಹೇಳಬೇಕೆಂದಿರುವುದು ಈ ಸಬ್ ಟ್ರಾನ್ಸ್‌ಮಿಷನ್ ಲೈನುಗಳನ್ನು ಡೆವಲಪ್‌ಮೆಂಟ್ ಬಾಬಿನಲ್ಲಿ ಮಾಡಿದರೆ ಅನುಕೂಲ ರೈತರಿಗೆ ಕಡಮೆ ಖರ್ಚು ಬರುತ್ತೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ ತಾವೀಗ ಇಲ್ಲಿ ಕೊಟ್ಟಿರತಕ್ಕ ಪಟ್ಟಿಯಲ್ಲಿ ಯಾವ ಯಾವ ಏರಿಯಾಕ್ಕೆ ಎಷ್ಟೆಷ್ಟು ಪಂಪ್ ಸೆಟ್‌ಗಳನ್ನು ಕೊಟ್ಟಿದ್ದೀರೆಂಬುದನ್ನು ಪ್ರಶ್ನೆ ಮಾಡಬೇಕಾಗಿದೆ. ಹಳೆಯ ಮೈಸೂರಿನಲ್ಲಿ ಒಂದೂ ಸಬ್ ಟ್ರಾನ್ಸ್‌ಮಿಷನ್ ಲೈನನ್ನು ಎಳೆಯುವುದಕ್ಕೆ ಅವಕಾಶಮಾಡಿಕೊಂಡಿಲ್ಲ. ತೋರಿಸಿರತಕ್ಕ ಒಂದೆರಡು ಲೈನುಗಳನ್ನು ಇಲ್ಲಿ ನಮೂದಿಸಿರತಕ್ಕ ಅಂದಾಜಿನಲ್ಲಿ ಹಾಕುವುದಕ್ಕಾಗುವುದಿಲ್ಲ. ಯಾರು ಅಂದಾಜುಗಳನ್ನು ತಯಾರಿಸಿದರೋ ಗೊತ್ತಾಗದು. ಹೋಗಲಿ ಈ ಕೆಲಸಗಳನ್ನೆಲ್ಲಾ ಬೋರ್ಡಿನವರು ಒಂದು ರ್‍ಯಾಷನಲ್ ಬೇಸಿಸ್ಸಿನ ಮೇಲಾದರೂ ಮಾಡುತ್ತಿದ್ದಾರೆಯೆ ಅಂದರೆ ಅದೂ ಇಲ್ಲ. ತಮಗೆ ಈ ವಿಚಾರಗಳನ್ನೆಲ್ಲಾ ತಿಳಿಸಬೇಕೆಂದರೆ ಮನಸ್ಸಿಗೆ ಬಹಳ ನೋವಾಗುತ್ತದೆ. ಕೆಲಸಗಳಲ್ಲಿ ಹೆಚ್ಚಿಗೆ ಆಗಿವೆ ಎಲ್ಲಿ ಕಡಮೆ ಆಗಿವೆ ಎಂಬುದನ್ನು ವಿಚಾರಮಾಡಿ ವಿವೇಚನೆಯಿಂದ ಕೆಲಸಗಳನ್ನು ಮಾಡುತ್ತಿಲ್ಲ. ಈ ಹಿಂದೆ ಹಾಸನ ಜಿಲ್ಲೆಯಲ್ಲಿ 290 ಹಳ್ಳಿಗಳಿಗೂ ಮತ್ತು 600 ಪಂಪ್ ಸೆಟ್ಟುಗಳಿಗೂ ಪವರನ್ನು ಕೊಡಬೇಕೆಂದು ತೀರ್ಮಾನವಾಗಿತ್ತು. ಆ ವಿಚಾರದಲ್ಲಿ ಜಿಲ್ಲಾ ಕಾಂಗ್ರೆಸ್ಸಿನಿಂದ ಹಿಡಿದು ಈ ಮಾನ್ಯ ಸಭೆಯ ಸದಸ್ಯರೆಲ್ಲರೂ ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿದ್ದರು. ಆದರೇನೂ ಪ್ರಯೋಜನವಾಗಲಿಲ್ಲ. ಈಗ ಮತ್ತೆ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ 600 ಪಂಪ್‌ಸೆಟ್‌ಗಳಿಗೆ ಪವರನ್ನು ಕೊಡುವುದಾಗಿ ಹೇಳುತ್ತಿದ್ದಾರೆ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ 230 ಪಂಪ್ ಸೆಟ್‌ಗಳಿಗೆ ಸರ್ವೀಸನ್ನು ಕೊಟ್ಟಿದ್ದಾರೆ. ಇದನ್ನೆಲ್ಲಾ ನೋಡಿದರೆ ನಮ್ಮ ಸ್ಥಿತಿ ಈ ಮಟ್ಟಕ್ಕಿಳಿಯಿತಲ್ಲಾ ಎಂದು ನನಗನಿಸುತ್ತಿದೆ. ಇದು ಬಹಳ ಅನ್ಯಾಯ, ನನ್ನ ಮನಸ್ಸಿಗೆ ಬಹಳ ನೋವನ್ನುಂಟುಮಾಡಿದೆ. ಆದುದರಿಂದ ಇದನ್ನು ಕೂಡಲೇ ಸರ್ಕಾರದವರೂ ಮತ್ತು ಬೋರ್ಡಿನವರೂ ಸರಿಪಡಿಸಬೇಕೆಂದು ಹೇಳುತ್ತೇನೆ. ಇದಕ್ಕೆಲ್ಲಾ ಮೂಲ ಕಾರಣ ಬೋರ್ಡಿಗೆ ಒಬ್ಬ ನಿವೃತ್ತಿ ಅಧಿಕಾರಿಗಳನ್ನು ನೇಮಕ ಮಾಡಿರುವುದೇ ಆಗಿದೆ. ಅವರ ನೇತೃತ್ವದಲ್ಲಿ ಯಾವ ಒಂದು ಕೆಲಸವೂ ಒಂದು ಪ್ಲಾನಿನ ಪ್ರಕಾರ ನಡಿಯುತ್ತಿಲ್ಲ. ಒಂದು ತಾಲ್ಲೂಕನ್ನು ಒಂದು ಯೂನಿಟ್ಟಾಗಿ ಇಟ್ಟುಕೊಂಡು ಅವರು ಕೆಲಸ ಮಾಡುತ್ತಿಲ್ಲ. ಯಾವ ಕಡೆಯಿಂದ ಒತ್ತಾಯ ಬಂದರೆ ಆ ಕಡೆ ಪಾಲಿ ಕೆಲಸ ಮಾಡುತ್ತಾರೆ. ಈ ಇಲಾಖೆಯಲ್ಲಿ ನಡೆಯತಕ್ಕ ಕೆಲಸ ಕಾರ್ಯಗಳು ನೋ-ಲಾಸ್, ನೋ-ಪ್ರಾಫಿಟ್ ಬೇಸ್ಸಿಸಿನ ಮೇಲಾದರೂ ನಡೆಯುತ್ತಿದೆಯೇ ಎಂದರೆ ಅದೂ ಸಹಾ ಇಲ್ಲ. ಇವತ್ತು ಬೋರ್ಡಿನವರು ಕೊಡತಕ್ಕ ಪಿ.ಪಿ. ಸೆಟ್ಸ್‌ಗಳೇನಿವೆ ಅವುಗಳನ್ನು ಕೊಡತಕ್ಕ ವಿಚಾರದಲ್ಲಿ ಸಹಾ ಒಂದು ನೀತಿ ನೇಮವಿಲ್ಲ. ಬಾವಿ ಇದ್ದವನಿಗೆ ಪಂಪ್ ಸೆಟ್ ಸಿಕ್ಕುವುದಿಲ್ಲ, ಪಂಪ್ ಸೆಟ್ ಸಿಕ್ಕತಕ್ಕವನಿಗೆ ಬಾವಿ ಇರುವುದಿಲ್ಲ; ಇಂಥ ಸಂದರ್ಭಗಳೂ ಇವೆ. ಹುಬ್ಬಳ್ಳಿಯಲ್ಲಿ ಹಾಗಾಗಿದೆ ಇಂಥ ಕೆಲಸಗಳನ್ನು ಮಾಡುವುದಕ್ಕೇನು ಬೋರ್ಡಿರುವುದು ?

(ಶ್ರೀ ಹೆಚ್. ಡಿ. ದೇವೇಗೌಡ)

ಇನ್ನು ಇಂಟರ್ನಲ್ ವೈರಿಂಗಿನ ವಿಚಾರಕ್ಕೆ ಬಂದರೆ—ಪಾರ್ಟಿಯ ಕಟ್ಟಡದವರೆಗೆ ಅಂದರೆ ಅಲ್ಲಿರತಕ್ಕ ಮೀಟರಿನ ಬೋರ್ಡಿನವರೆಗೂ ಲೈನನ್ನು ಹಾಕತಕ್ಕದ್ದು ಇಲಾಖೆಯವರ ಕೆಲಸವೆಂದೂ ಅಲ್ಲಿಂದ ಮುಂದಕ್ಕೆ ಹಾಕತಕ್ಕದ್ದು ಪಾರ್ಟಿಗೆ ಸಂಬಂಧಪಟ್ಟದ್ದು ಎಂದು ಹೇಳಿ ಅವರಿಂದ ಒಂದು ಕಡೆ ಲೈನನ್ನು ಎಳೆಯುವುದಕ್ಕೆ ಇಂಟರ್ನಲ್ ಲೈನಿಂಗೆ 200-300 ರೂಪಾಯಿಗಳನ್ನು ಛಾರ್ಜು ಮಾಡುತ್ತಿದ್ದಾರೆ. ಆ ಕಂಟ್ರಾಕ್ಟರನ್ನು ಕೇಳತಕ್ಕವರೇ ಇಲ್ಲ. ಅವರಿಗೆ ಯಾವ ಒಂದು ಕಾನೂನು ನಿಬಂಧನೆಯೂ ಇದ್ದ ಹಾಗೆ ಕಾಣುವುದಿಲ್ಲ. ಅವರು ಮಾಡತಕ್ಕ ಕೆಲಸವನ್ನು ಚೆಕ್‌ಮಾಡತಕ್ಕವರೇ ಇಲ್ಲ. ಈ ವಿಚಾರದಲ್ಲಿ ಇನ್ನಾದರೂ ಒಂದು ಸರ್ಕ್ಯುಲರನ್ನು ಹೊರಡಿಸಿ ಕಂಟ್ರಾಕ್ಟರು ರೈತರಿಂದ ದುಡ್ಡನ್ನ ಸುಲಿಗೆ ಮಾಡದಂತೆ ಮಾಬೇಕೆಂದು ಕೇಳಿಕೊಳ್ಳುತ್ತೇನೆ. ಇಂಥ ಒಂದು ನಿಬಂಧನೆಯನ್ನು ಮಾಡದಿದ್ದರೆ ರೈತರಿಗೆ ಈ ವಿಚಾರದಲ್ಲಿ ತುಂಬಾ ಮೋಸವಾಗುತ್ತದೆ. ಇದನ್ನು ಕೂಡಲೇ ತಡೆಗಟ್ಟಬೇಕೆಂದು ಪ್ರಾರ್ಥಿಸಿ, ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಬಿ. ವಸ್ತ್ರದ (ಬಿಜಾಪುರ).—ಮಾನ್ಯ ಅಧ್ಯಕ್ಷರೇ, ನಾನು ಕೇವಲ ಒಂದು ಮಿನಿಟ್ ಮಾತ್ರ ಮಾತನಾಡಬೇಕೆಂದು ಇಷ್ಟಪಟ್ಟ ಬಗ್ಗೆ ತಾವು ನನಗೊಂದು ಅವಕಾಶ ಕಲ್ಪಿಸಿ ಕೊಟ್ಟದಕ್ಕಾಗಿ ನಾನು ತಮಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ.

ಮಾನ್ಯ ಶ್ರೀ ವೀರೇಂದ್ರ ಪಾಟೀಲರವರು ಸಭೆಯ ಮುಂದೆ ಮಂಡಿಸಿರತಕ್ಕ ವರದಿಯನ್ನು ನಾನು ಸ್ವಾಗತಿಸುತ್ತಾ ಒಂದೆರಡು ವಿಚಾರಗಳನ್ನು ಸರ್ಕಾರದವರ ನಜರಿಗೆ ತರಲಿಷ್ಟಪಡುತ್ತೇನೆ. ಸರ್ಕಾರದವರು ಮೂರನೇ ಪಂಚವಾರ್ಷಿಕ ಯೋಜನೆಯ ಕೊನೆಗೆ ಯಾವ ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಪಂಪ್ ಸೆಟ್ಟುಗಳನ್ನು ಒದಗಿಸಲಾಗಿದೆ, ಹಾಗು ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಗ್ರಾಮಗಳಿಗೆ ವಿದ್ಯುಚ್ಛಕ್ತಿ ಪೂರೈಕೆಯಾಗಿದೆ ಎಂಬುದನ್ನು ಗಮನಿಸಿದರೆ ನಮ್ಮ ಬಿಜಾಪುರ ಜಿಲ್ಲೆಗೆ ಈವರೆಗೆ ಕೇವಲ 20 ಗ್ರಾಮಗಳಿಗೆ ಮಾತ್ರ ವಿದ್ಯುಚ್ಛಕ್ತಿಯನ್ನು ಪೂರೈಸಲಾಗಿದೆ. ಅದೇ ರೀತಿ 21 ಪಂಪ್ ಸೆಟ್ಟುಗಳ ಪೂರೈಕೆಯಾಗಿದೆ. ನಮ್ಮ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿ ಪೂರೈಕೆಯಾಗಬೇಕಾದ ಗ್ರಾಮಗಳಿನ್ನೂ ಸಾವಿರಾರು ಹಾಗೇ ಉಳಿದಿವೆ. ಅದೇ ರೀತಿ ಪಂಪ್ ಸೆಟ್ಟುಗಳೂ ಪೂರೈಕೆಯಾಗಬೇಕಾಗಿದೆ. ಈ ದಿವಸ ಎಲ್ಲಿ ವಿದ್ಯುಚ್ಛಕ್ತಿ ಇಲ್ಲವೋ ಅಲ್ಲಿ ಕೈಗಾರಿಕಾಭಿವೃದ್ಧಿ ನಡೆದಿಲ್ಲ. ಇನ್ನು ಮುಂದೆ ಅಂಥ ಸ್ಥಳಗಳು ಯಾವು ಇರುತ್ತವೆಂಬುದನ್ನು ನೋಡಿಕೊಂಡು ಅಂಥ ಜಾಗಕ್ಕೆ ಪ್ರಾಶಸ್ತ್ಯ ನೀಡಬೇಕು. 4ನೇ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ಜಿಲ್ಲೆಗೆ 350 ಗ್ರಾಮಗಳಿಗೂ ಮತ್ತು 15 ಸಾವಿರ ಪಂಪ್ ಸೆಟ್ಟುಗಳಿಗೂ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆಂದು ಭರವಸೆ ನೀಡಿದ್ದೀರಿ. ಆದರೆ ಇದು ಸಾಕಾಗದು. ನಮ್ಮದು ಬರಗಾಲದ ಜಿಲ್ಲೆ, ಅಲ್ಲಿ ಬಾವಿಗಳನ್ನೇ ಅವಲಂಬಿಸಿ ನಾವು ಕೆಲಸ ಮಾಡಬೇಕು. ಅಲ್ಲಿ 30,000ಕ್ಕೆ ಮೇಲ್ಪಟ್ಟು ಬಾವಿಗಳಿವೆ. ಆದಕಾರಣ ಅಲ್ಲಿಗೆ ಹೆಚ್ಚಿನ ನಿಗಾ ಕೊಟ್ಟು ಒಂದು ವಿಶಾಲ ಭಾವನೆಯಿಂದ ಸರ್ಕಾರದವರು ಆ ಪ್ರದೇಶಕ್ಕೆ ಮನ್ನಣೆ ಕೊಡುತ್ತಾರೆಂತ ಆಶಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ವೀರೇಂದ್ರ ಪಾಟೀಲ್ (ಮರಾಮತ್ತು ಶಾಖಾ ಸಚಿವರು).—ಮಾನ್ಯ ಅಧ್ಯಕ್ಷರೇ, ನಿನ್ನೆಯಿಂದ ಎಲೆಕ್ಟ್ರಿಸಿಟಿ ಬಡ್ಜೆಟ್ಟಿನ ಮೇಲೆ ಅನೇಕ ಮಾನ್ಯ ಸದಸ್ಯರುಗಳು ತಮ್ಮ ವಿಚಾರಗಳನ್ನು ವ್ಯಕ್ತಮಾಡಿದ್ದಾರೆ. ಕೆಲವರು ಟೀಕೆ ಮಾಡಿದ್ದಾರೆ ಮತ್ತೆ ಕೆಲವರು ಸೂಕ್ತವಾದ ಸಲಹೆಗಳನ್ನೂ ಮಾಡಿದ್ದಾರೆ. ಇಂತಹ ಟೀಕೆ ಮತ್ತು ಸಲಹೆಗಳನ್ನು ನಾನು ಸ್ವಾಗತಿಸುತ್ತೇನೆ. ಮತ್ತೆ ತಾವು ಮಾಡಿದಂತಹ ಸಲಹೆಗಳನ್ನು ಎಷ್ಟುಮಟ್ಟಿಗೆ ಪರಿಶೀಲನೆ ಮಾಡಿ ಕಾರ್ಯಗತ ಮಾಡುವುದಕ್ಕೆ ಸಾಧ್ಯವಾಗುವುದೋ ಅಷ್ಟನ್ನು ಕಾರ್ಯಗತ ಮಾಡುವುದಕ್ಕೆ ಸರ್ವ ಪ್ರಯತ್ನ ಮಾಡುತ್ತೇವೆ ಎಂದು ಈ ಮಾನ್ಯ ಸಭೆಯಲ್ಲಿ ಭರವಸೆ ನೀಡುತ್ತೇನೆ. ಅನೇಕ ವಿಚಾರಗಳನ್ನು ಹೇಳಿದ್ದಾರೆ ಅವನ್ನೆಲ್ಲಾ ಪ್ರಸ್ತಾಪಿಸಲು ಸಮಯ ಸಾಕಷ್ಟು ಸಾಲದು. ಇದಕ್ಕಾಗಿ ಮುಖ್ಯವಾಗಿ ಕೆಲವು ವಿಚಾರಗಳನ್ನು ಮಾತ್ರ ಇವೊತ್ತು ಇಲ್ಲಿ ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅನೇಕ ಮಾನ್ಯ ಸದಸ್ಯರುಗಳು ಒಂದು ಮಾತನ್ನು ಪದೇ ಪದೇ ಇಲ್ಲಿ ಉಚ್ಚರಿಸುತ್ತಿದ್ದಾರೆ. ಅವರು ನಮ್ಮ ಸ್ಟೇಟ್‌ನಲ್ಲಿ ಉತ್ಪತ್ತಿಯಾಗುವಂತಹ ವಿದ್ಯುಚ್ಛಕ್ತಿಯನ್ನು ನಮ್ಮ ರಾಜ್ಯದೊಳಗೇ ನಮ್ಮ ಕೈಗಾರಿಕೆದಾರರುಗಳಿಗೆ ಹಾಗೂ ಬಳಕೆದಾರರುಗಳಿಗೆ ಕೊಡುವುದಕ್ಕಾಗಿ ನೂರಾರು ಕೋಟಿಯಷ್ಟು ಖರ್ಚು ಮಾಡಿದ್ದರೂ ಕೂಡ ಅದನ್ನು ಪೂರ್ಣವಾಗಿ ಇಲ್ಲಿ ಬಳಸದೇ ಬೇರೆ ಪ್ರಾಂತಗಳಿಗಾಗಿ ಮಾರುವುದರಲ್ಲೇ ಹೆಚ್ಚು ಆಸಕ್ತಿ ಇದೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ತಮಗೆಲ್ಲರಿಗೂ ಗೊತ್ತೇ ಇದೆ, ಇವೊತ್ತು ನಾವು ಆಂಧ್ರಕ್ಕೆ ಮತ್ತು ಮದರಾಸು ಪ್ರಾಂತಕ್ಕೆ ವಿದ್ಯುಚ್ಛಕ್ತಿಯನ್ನು ಕೊಡುತ್ತಿದ್ದೇವೆ. ಸ್ವಲ್ಪಮಟ್ಟಿಗೆ

ಈಗ ಉತ್ಪತ್ತಿಯಾಗುತ್ತಿರುವ ವಿದ್ಯುಚ್ಛಕ್ತಿ ತಾತ್ಕಾಲಿಕವಾಗಿ ಸರ್‌ಪ್ಲಸ್ ಆಗಿರಬಹುದು ಮತ್ತು ಸ್ವಲ್ಪ ಹೆಚ್ಚಾಗಿರಬಹುದು. ಇದನ್ನು ನಮಗಿಂತಲೂ ಹೆಚ್ಚು ಕಷ್ಟದಲ್ಲಿರುವ ನಮ್ಮ ನೆರೆ ಪ್ರಾಂತದಲ್ಲಿರುವ ನಮ್ಮ ಅಣ್ಣತಮ್ಮಂದಿರಿಗೆ ಸಹಾಯ ಮಾಡಬೇಕು ಎನ್ನುವ ಒಂದು ಉದ್ದೇಶದಿಂದ ನಾವು ಎಷ್ಟುಮಟ್ಟಿಗೆ ಶರಾವತಿಯ ವಿದ್ಯುಚ್ಛಕ್ತಿಯನ್ನು ಹೆಚ್ಚಿಸಬಹುದೋ ಅಷ್ಟು ಮಾಡಲು ಅಲ್ಲಿ ಹೆಚ್ಚು ಹೆಚ್ಚು ರೋಡುಗಳನ್ನು ಹಾಕಿಕೊಂಡು ಸ್ವಲ್ಪಮಟ್ಟಿಗೆ ಹೆಚ್ಚು ವಿದ್ಯುಚ್ಛಕ್ತಿ ಉತ್ಪಾದನೆ ಮಾಡಿ ಅದನ್ನು ಸ್ವಲ್ಪಮಟ್ಟಿಗೆ ನಮ್ಮ ಪಕ್ಕದಲ್ಲಿರುವ ಅಣ್ಣತಮ್ಮಂದಿರ ಸಹಾಯಕ್ಕಾಗಿ ನೆರೆ ಪ್ರಾಂತಗಳ ಪ್ರಯೋಜನಕ್ಕಾಗಿ ಸಹಾಯ ಮಾಡುತ್ತಿದ್ದೇವೆ. ಇದನ್ನು ಇಲ್ಲ ಎಂದು ಹೇಳುತ್ತಿಲ್ಲ. ಆದರೆ ನಮ್ಮ ಜನರಿಗೆ ಇಲ್ಲಿ ಅಗತ್ಯವಾದಷ್ಟು ಕೊಡದೆ ಇವರಿಗೆ ತೊಂದರೆ ಮಾಡುವ ಸಂದರ್ಭವಿಲ್ಲ. It is not at the cost of our consumer or the people in our State. ಈ ಒಂದು ಮಾತನ್ನು ಇಲ್ಲಿ ಸ್ಪಷ್ಟವಾಗಿ ಹೇಳಬೇಕಾಗಿದೆ. ವಿದ್ಯುಚ್ಛಕ್ತಿಯನ್ನು ಕೇಳಿದವರಿಗೆಲ್ಲಾ ಕೊಡುವುದಕ್ಕೆ ಏನು ಕಷ್ಟಗಳಿವೆ ಎನುವುದನ್ನೂ ನೋಡಿಕೊಂಡು ಕೊಡಲು ಪ್ರಯತ್ನಮಾಡುತ್ತಿದ್ದೇವೆ. ಆದರೆ ಮಾನ್ಯ ಸದಸ್ಯರಾದ ಶ್ರೀ ನಾಮೋಷಿಯವರು ಇಲ್ಲಿ ಮಾತನಾಡುತ್ತಾ ಹೇಳಿದರು, ಮದರಾಸು ಪ್ರಾಂತದವರೇ ಈಗ ಕಾಂಗ್ರೆಸ್ಸು ಪಕ್ಷದ ಅಧ್ಯಕ್ಷರಾಗಿದ್ದಾರೆ. ಅವರ ಒಂದು ಸಹಕಾರ ಪಡೆಯುವುದಕ್ಕಾಗಿ ನಮ್ಮ ದೇಶದಲ್ಲಿ ಉತ್ಪತ್ತಿ ಆಗುತ್ತಿರುವ ವಿದ್ಯುಚ್ಛಕ್ತಿಯನ್ನು ಬೇರೆ ಪ್ರಾಂತಗಳಿಗೆ ಕೊಡುವುದರಿಂದಾಗಿ ನಮ್ಮ ದೇಶದಲ್ಲಿರುವ ಬಳಕೆದಾರರುಗಳಿಗೆ ಕೊಡಲು ಸಾಧ್ಯವಿಲ್ಲ ಎನ್ನುವ ಒಂದು ಮಾತನ್ನೂ ಇಲ್ಲಿ ಹೇಳಿದರು. ಅವರು ಹೇಳಿದಂತೆ ನಾವು ಕೇಳಿಕೊಂಡು ಕೊಡಬೇಕಾದ್ದಿಲ್ಲ. ಅವರಿಗೆ ಸಹಾಯ ಮಾಡಿದ್ದೇವೆ, ರಿಯಾಯಿತಿ ಕೊಟ್ಟಿದ್ದೇವೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಇದರಿಂದ ಅವರು ಹೇಳುವ ಮಾತು ಸತ್ಯಕ್ಕೆ ದೂರವಾದುದು ಎಂದು ಹೇಳಲು ಇಷ್ಟಪಡುತ್ತೇನೆ. ನಾವು ಪರ ಪ್ರಾಂತಗಳಿಗೆ ವಿದ್ಯುಚ್ಛಕ್ತಿಯನ್ನು ಮಾರುತ್ತಿದ್ದೇವೆ, ನಿಜ. ಮದರಾಸಿಗೆ ನಾವು ವಿದ್ಯುಚ್ಛಕ್ತಿ ಮಾರುತ್ತಿದ್ದೇವೆ. ಅವರಿಗೆ ಒಂದು ಕಿಲೋವಾಟ್‌ಗೆ 9 ಪೈಸೆಯಂತೆ ಮಾರುತ್ತಿದ್ದೇವೆ. 7·5 ಪೈಸೆ ಖರ್ಚು ಮಾಡಿದುದನ್ನು ನಾವು ಅವರಿಗೆ 9 ಪೈಸದಂತೆ ಮಾರುತ್ತಿದ್ದೇವೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಇಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ. ಇವೊತ್ತು ನಾವು ಏನು ನೆರೆ ಪ್ರಾಂತಗಳಿಗಾಗಿ ಪವರು ಸಪ್ಲೈ ಮಾಡುತ್ತಿದ್ದೇವೆ ಅದರಿಂದ ನಮಗೇನೂ ಹಾನಿ ಇಲ್ಲ ಎನ್ನುವ ಮಾತನ್ನು ಇಲ್ಲಿ ಹೇಳುತ್ತೇನೆ. ಆದರೆ ಇದರಿಂದ ನನಗೂ ಲಾಭ ಇದೆ. ಲಾಭ ಇದೆಯೋ ಇಲ್ಲವೋ ಎಂಬುದನ್ನು ತಾವು ಇಲ್ಲಿ ಕೇಳಬಾರದು. ನಮಗೆ ಎಷ್ಟು ಪರ್ಸೆಂಟ್ ಲಾಭ ಇದೆ ಎನ್ನುವುದನ್ನು ಮುಂದಿನ ಸಲ ಅವಕಾಶ ಸಿಕ್ಕಿದಾಗ ಹೇಳಲು ಪ್ರಯತ್ನ ಮಾಡೋಣ. ಎರಡನೇ ಪ್ರಾಂತಕ್ಕಾಗಿ ಪವರು ಏನು ಕೇಳುತ್ತಿದ್ದಾರೆ ಅದನ್ನು ಕೊಡುವುದರಿಂದ ನಮಗೆ ನಷ್ಟವೇನೂ ಇಲ್ಲ, ಹಾನಿಯೇನೂ ಇಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ಟೇಟು ಪೊಟೆನ್‌ಷಿಯಲ್ ಏನಿತ್ತು ?

ಶ್ರೀ ವೀರೇಂದ್ರ ಪಾಟೀಲ್.—ನಾನಾಗಲೇ ಸ್ಪಷ್ಟವಾಗಿ ಹೇಳಿದ್ದೇನೆ. ಇದರ ಒಂದು ಲೆಕ್ಕ ಹಾಕಿ ನಾವು ಹೇಗೆ ಮಾರುತ್ತಿದ್ದೇವೆ ಎಂದರೆ ಮದರಾಸಿಗಾಗಿ 9 ಪೈಸೆ, ಆಂಧ್ರದವರಿಗೆ 10·5 ಪೈಸೆ ಪರ್ ಕಿಲೋವಾಟ್ ಅವರಿನಂತೆ ಮಾರುತ್ತಿದ್ದೇನೆ. ನಮ್ಮ ಸ್ಟೇಟಿನಲ್ಲಿರುವ ರೈತರಿಗಾಗಿ ಐ. ಪಿ. ಸೆಟ್ ಕೇಳಿದವರಿಗಾಗಿ 10 ಪೈಸೆಯಂತೆ ರೇಟು ಇದೆ. ನಮ್ಮ ಸ್ಟೇಟಿನಲ್ಲಿರುವ ಎಸ್. ಟಿ. ರೇಟು, ಇಂಡಸ್ಟ್ರೀಸ್‌ಗಳಿಗಾಗಿ ಕೊಡುವಾಗ ಅದು ಐದು ಪೈಸೆಯಿಂದ ಆರು ಪೈಸೆವರೆಗೆ ಬರುತ್ತದೆ. ನಮ್ಮ ಸ್ಟೇಟ್‌ನಲ್ಲಿರುವ ಬಳಕೆದಾರರುಗಳಿಗೆ ಕೊಡುತ್ತಿರುವ ರೇಟಿಗಿಂತ ಸ್ವಲ್ಪ ಹೆಚ್ಚು ರೇಟಿನಲ್ಲಿ ಇವೊತ್ತು ನಾವು ಮದರಾಸು ಹಾಗೂ ಆಂಧ್ರದವರಿಗೆ ಮಾರುತ್ತಿದ್ದೇವೆನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ನಾವು ಟ್ರಾನ್ಸ್‌ಮಿಷನ್ ಲೈನು ಎರಡನೇ ಸ್ಟೇಟಿಗಾಗಿ ಏನು ಕೊಡುತ್ತೇವೆ ಅದರ ಖರ್ಚಿನಲ್ಲಿ ನಮ್ಮ ಏರಿಯಾದ ಭಾಗಗಳಲ್ಲಿ ನಾವು ಕೊಡುತ್ತೇವೆ, ಬೇರೆ ಪ್ರಾಂತಗಳ ಏರಿಯಾದಲ್ಲಿ ಬಂದರೆ ಅದನ್ನು ಆ ಪ್ರಾಂತಗಳವರೇ ಅದರ ಖರ್ಚನ್ನೂ ಕೊಡುತ್ತಾರೆ. ಹೀಗಿದ್ದೂ ನಾವು ಕೇಂದ್ರ ಸರ್ಕಾರದವರು ಹೇಳಿದಂತೆ ಒಂದು ಗ್ರಿಡ್ ಮಾಡಬೇಕೆಂದು ಅದರಲ್ಲಿ ಎಲ್ಲ ಸ್ಟೇಟುಗಳ ಪ್ರತಿನಿಧಿಗಳೂ ಇರಬೇಕೆಂದೂ ಒಂದು ನಿರ್ಣಯ ಮಾಡಿದ್ದೇವೆ. ಇಂಟರ್ ಸ್ಟೇಟು ಗ್ರಿಡ್ ಮೂಲಕ ಇಂಟರ್‌ಸ್ಟೇಟು ಲೈನ್ ಲಿಂಕ್ ಮಾಡುವಾಗ ನಮ್ಮ ನಮ್ಮ ಏರಿಯಾದಲ್ಲಿ ಟ್ರಾನ್ಸ್‌ಮಿಷನ್ ಲೈನುಗಳನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಟ್ರಾನ್ಸ್‌ಮಿಷನ್ ಲೈನ್ ಕಟ್ಟಿಕೊಂಡ ಮೇಲೆ ಪಕ್ಕದ ಸ್ಟೇಟಿಗೆ ಪವರು ಕೊಡುವಾಗ ಅದರ ಖರ್ಚೂ ಸೇರಿ ಅದರ ಮೇಲೆ ಮಾರುತ್ತಿದ್ದೇವೆ. ಇದರಲ್ಲಿ ಕನ್‌ಸ್ಟ್ರಕ್ಷನ್ ಡಿಪ್ರಿಸಿಯೇಷನ್ ಹಾಗೂ ಇನ್ನಿತರ ಖರ್ಚುಗಳು ಅವರ ಮೇಲೆ ಬೀಳುತ್ತದೆ. ಇದನ್ನು ಸ್ಪಷ್ಟವಾಗಿ ಹೇಳಿಯೇ ಆಮೇಲೆ ಲೈನ್ ಮಾಡಲು ಖರ್ಚು ಮಾಡುತ್ತೇವೆ. ಇವನ್ನೆಲ್ಲಾ ಪೂರ್ತಿಯಾಗಿ ಮಾಡಿಕೊಂಡು ಈಗ ಮದರಾಸಿಗೆ 220 ಕೆ. ವಿ. ಲೈನು ಹಾಕಿದ್ದಾಯಿತು. ಇದರಲ್ಲಿ ಹೊಸೂರುವರೆಗೆ ನಮ್ಮ ಭಾಗಕ್ಕೆ ಬಂದುದರಿಂದ ಇದರ ಖರ್ಚು ನಾವು

(ಶ್ರೀ ವೀರೇಂದ್ರ ಪಾಟೀಲ್)

ಮಾಡಿ ಲೈನ್ ಹಾಕಿದ್ದಾಯಿತು. ಉಳಿಕೆಯಾದ ಭಾಗದಲ್ಲಿ ಮದರಾಸು ಪ್ರಾಂತದವರು ಪೂರ್ತಿಯಾಗಿ ಖರ್ಚು ಮಾಡಿಕೊಂಡು ಹಾಕಿಸಿಕೊಂಡಿದ್ದಾರೆ. ಇವೆಲ್ಲಾ ಆಲ್ ಇಂಡಿಯಾ ಪ್ಯಾಟರನ್‌ಗೆ ಅನುಗುಣವಾಗಿ ಮಾಡಬೇಕಾದುದು, ಇದಕ್ಕಾಗಿ ಇಂಟರ್‌ಸ್ಟೇಟ್ ಗ್ರಿಡ್ ಎನ್ನುವುದೂ ಕೂಡ ಈಗ ಬಂದಿದೆ. ಈ ಗ್ರಿಡ್‌ನವರು ಒಂದು ಪ್ರಿನಿಸಿಪಲ್ ಹಾಕಿಕೊಂಡು ಮಾಡುತ್ತಾರೆ, ಪ್ರತಿಯೊಂದು ಏರಿಯಾದವರೂ ತಮ್ಮ ತಮ್ಮ ಏರಿಯಾದಲ್ಲಿ ಬರುವ ಟ್ರಾನ್ಸ್‌ಮಿಷನ್ ಲೈನುಗಳನ್ನು ಅವರೇ ಹಾಕಬೇಕು ಎಂದು ನಿರ್ಣಯಮಾಡಿದ್ದಾರೆ. ಆದುದರಿಂದ ಈ ಏರಿಯಾದಲ್ಲಿ ಲೈನುಗಳನ್ನು ಹಾಕಲು ಯಾರೂ ನಮಗೆ ಉಪಕಾರ ಮಾಡಲಿಲ್ಲ ಮತ್ತು ಯಾರಿಗೂ ಸಹಾನುಭೂತಿ ತೋರಿಸುವುದಕ್ಕಾಗಿ ಮಾಡುತ್ತಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ.

ಇನ್ನೊಂದು ಪ್ರಶ್ನೆ ಮಾನ್ಯ ಸದಸ್ಯರು ಹೇಳಿದರು. ಗೋವಾದಲ್ಲಿ ಲೈನು ಏನಿದೆ ಅದನ್ನೆಲ್ಲಾ ನಾವೇ ಕಟ್ಟಿದ್ದೇವೆ ಎಂದು ಹೇಳಿದರು. ಇಲ್ಲಿರುವ ಲೈನು ಎಲ್ಲ ಲೈನು ಸೇರಿ 60 ಮೈಲಿಗಳಷ್ಟು ಇದೆ. ಇದರಲ್ಲಿ ಮೂವತ್ತು ಮೈಲಿ ಲೈನು ನಮ್ಮ ಏರಿಯಾದೊಳಗೆ ಇದೆ. ಗೋವಾ ಟೆರಿಟರಿಯೊಳಗೆ ಮೂವತ್ತು ಮೈಲಿಗಳಷ್ಟು ಬರುತ್ತದೆ. ಎಲ್ಲ ಅರವತ್ತು ಮೈಲಿಗಳ ಲೈನುಗಳ ಖರ್ಚನ್ನೂ ನಾವೇ ನಹಿಸಿಕೊಂಡು ಮಾಡಬೇಕೆಂದು ಆ ರಾಜ್ಯದವರು ಕೇಳಿದರು. ಅದರಂತೆ ನಾವೇ ಹಾಕಿ ಮಾಡಿದರೂ ಮುಂದೆ ಇದರ ಖರ್ಚನ್ನು ಅವರು ವಾಪಸು ಕೊಡುತ್ತಾರೆ. ಅವರಿಗೆ ಸ್ವಲ್ಪ ಕಷ್ಟ ಇದೆ ಎಂದು ನಮಗೆ ಹೇಳಿದ್ದರಿಂದ ನಾವೇ ಎಲ್ಲ ಖರ್ಚನ್ನು ಹಾಕಿಕೊಂಡು ಮಾಡುತ್ತಿದ್ದೇವೆ. ಇಂಟರ್‌ಸ್ಟೇಟು ಗ್ರಿಡ್‌ನ ಸಲಹೆಯಂತೆ ನಾವು ಲೈನು ಲಿಂಕ್‌ಗಳನ್ನು ಹಾಕುವಾಗ ತಾತ್ಕಾಲಿಕವಾಗಿ ಸಾಲವಾಗಿ ಹಣವನ್ನು ನಾವೇ ಕೊಟ್ಟು ಮೂವತ್ತು ಮೈಲಿಗಳಷ್ಟು ಲೈನನ್ನೂ ಕೂಡ ಮಾಡಿ, ನಮ್ಮಲ್ಲಿ ಸದ್ಯಕ್ಕೆ ಸರ್‌ಪ್ಲಸ್ ಆಗಿರುವ ವಿದ್ಯುಚ್ಛಕ್ತಿಯನ್ನು ಅವರಿಗೂ ಕೊಟ್ಟು ಸಹಾಯ ಮಾಡಿದಂತಾಗುತ್ತದೆ ಎಂದು ಅವರಿಗೂ ಮಾರುತ್ತಿದ್ದೇವೆ. ಇದರಿಂದ ಒಂದು ಕಿಲೋವಾಟು ಪವರು ಕೂಡ ವೇಸ್ಟ್ ಆಗಿ ಹರಿದು ಹೋಗುತ್ತಿದೆ ಎಂದು ಹೇಳುವ ಮನೋಭಾವನೆ ಸರಿಯಲ್ಲ. ಈಗ ರೈತರಿಗೆ ನಾವು ಪವರು ಕೊಡುವಾಗ ಅವರಿಂದ ನಮಗೆ ಶೇಕಡಾ ಮೂರು ಅಥವಾ ನಾಲ್ಕರಷ್ಟು ಬಡ್ಡಿ ಬಂದರೂ ಅದೂ ಸಾಲುವುದಿಲ್ಲ. ನಾವು ನೂರಾರು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಅದಕ್ಕೆ ಸಾಕಷ್ಟು ರಿಟರ್ನ್ ಸರಿಯಾಗಿ ಬಾರದೆ ಹೋದರೆ ಅದರಿಂದ ಪ್ರಯೋಜನ ಹೇಗೆ ಪಡೆಯಲು ಸಾಧ್ಯ? ಈಗ ನಾವು ಸ್ವಲ್ಪ ಮಟ್ಟಿಗೆ ಮಾರಾಟ ಮಾಡುತ್ತಿರುವುದರಿಂದ ಈಗಾಗಲೇ ಸುಮಾರು ಮೂರು ನಾಲ್ಕು ಕೋಟಿಗಳಿಗಿಂತ ಹೆಚ್ಚು ಆದಾಯ ಬರುತ್ತದೆ. ದೇಶದ ಹಿತರಕ್ಷಣೆಯ ದೃಷ್ಟಿಯಿಂದ ಈ ರೀತಿ ಮಾಡದೇ ಹೋದರೆ ದೇಶವನ್ನು ಪ್ರಗತಿ ಪರಕ್ಕೆ ಒಯ್ಯುವುದಕ್ಕೆ ಸಾಧ್ಯವಾಗುವುದಿಲ್ಲ. ಮೊದಲಿಗೆ ಮದರಾಸಿಗೆ ಆರು ತಿಂಗಳವರೆಗೆ ಎಂದು ಮಾಡಿತ್ತು. ಈಗ ಇನ್ನೂ ಒಂದು ತಿಂಗಳು ಹೆಚ್ಚು ಮಾಡಬೇಕೆಂದು ಕೇಳಿಕೆ ಬಂದುದರಿಂದ ಹೆಚ್ಚು ಮಾಡಲಾಯಿತು. ಹಾಗೇ ಆಂಧ್ರದಲ್ಲೂ ಕೂಡ ಮೂರು ತಿಂಗಳ ಕಾಲ ಹೆಚ್ಚು ಮಾಡಲಾಗಿದೆ ಹೀಗೆ ಆರಾರು ತಿಂಗಳಿಗೆ ಅಥವಾ ಮೂರು ತಿಂಗಳಿಗೊಂದು ಸಾರಿ ನಾವು ಪವರು ಸರಬರಾಜು ಮಾಡುವಾಗ ಪರಿಶೀಲನೆ ಮಾಡಿ ಕೊಡುತ್ತಿದ್ದೇವೆ. ಒಮ್ಮೆಲೇ ಹತ್ತು ಅಥವಾ ಇಪ್ಪತ್ತು ವರ್ಷಗಳಿಗಾಗಿ ಎಂದು ಕೊಡುತ್ತಿಲ್ಲ. ಇದು ಕೂಡ ತಾತ್ಕಾಲಿಕವಾಗಿ ಮಾಡುತ್ತಿದ್ದೇವೆ. ಅದು ನಮ್ಮ ಪಕ್ಕದಲ್ಲಿರುವ ಅಣ್ಣತಮ್ಮಂದಿರ ಸಹಾಯಕ್ಕಾಗಿ ಮಾಡುತ್ತಿದ್ದೇವೆ. ನಮ್ಮಲ್ಲಿ ಸ್ವಲ್ಪ ಪವರು ಹೆಚ್ಚು ಬರುತ್ತಿರುವುದರಿಂದ ತಾತ್ಕಾಲಿಕವಾಗಿ ಈ ರೀತಿ ಮಾಡುತ್ತಿದ್ದೇವೆ. ಆಮೇಲೆ ಲೈನು ಮೆಟೀರಿಯಲ್ಸ್‌ಗಳಿಲ್ಲ, ಟ್ರಾನ್ಸ್‌ಮಿಷನ್ ಲೈನು ಹಾಕುವಾಗ ಇಂಟರ್ ಸ್ಟೇಟ್ ಲಿಂಕುಗಳನ್ನು ತಮ್ಮ ತಮ್ಮ ಏರಿಯಾಗಳವರೇ ಹಾಕಿಕೊಳ್ಳಬೇಕು ಎನ್ನುವ ಒಂದು ವಾದವು ಇದೆ. ತಮಗೆ ಹೇಳಬೇಕಾದರೆ ಲೈನ್ ಮೆಟೀರಿಯಲ್ಸ್‌ಗಳ ಷಾರ್ಟೇಜು ಜಾಸ್ತಿಯಾಗಿದೆ, 11ಕೆ. ವಿ. ಲೈನು ಹಾಗೂ 33 ಕೆ. ವಿ. ಲೈನು ಮಾಡಲು ಕಷ್ಟ ಇದೆ. ಆದರೆ 110 ಕೆ. ವಿ. ಲೈನು ಮತ್ತು 210 ಕೆ. ವಿ. ಲೈನು ಮಾಡಲು ಕಷ್ಟ ಇಲ್ಲ. ಇದಕ್ಕೆ ಬೇಕಾದ ಮೆಷಿನರಿಗಳು ಸಾಕಷ್ಟು ಇವೆ. ಇದರಲ್ಲಿ ಕೇಂದ್ರ ಸರ್ಕಾರದವರೂ ಕೂಡ ನಮಗೆ ಸಹಾಯ ಮಾಡುತ್ತಾರೆ. ಇದಕ್ಕಾಗಿ ಅವರೂ ಕೂಡ ಇಂಟರ್ ಸ್ಟೇಟು ಗ್ರಿಡ್ ಎಂದು ಮಾಡಿದ್ದಾರೆ. ಇದರಲ್ಲೇನೂ ನಾವು ಬೇರೆ ದೇಶಕ್ಕಾಗಿ ತ್ಯಾಗ ಮಾಡುವ ಪ್ರಶ್ನೆ ಉದ್ಭವವಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ತಮ್ಮ ಮುಂದೆ ಹೇಳುತ್ತೇನೆ, ಅಂತಹುದರಲ್ಲಿ ಮಾನ್ಯ ಸದಸ್ಯರಾದ ನಾಮೋಷಿಯವರು ಒಂದು ಮಾತು ಇಲ್ಲಿ ಹೇಳಿದರೂ ಏರೂವರೆ ಪೈಸದಂತೆ ಮಾರುವುದನ್ನು ಬಿಟ್ಟು 13 ಪೈಸೆಯಂತೆ ಪವರನ್ನು ಮಾರುತ್ತಿದ್ದಾರೆಂದು ಹೇಳಿದರು. ನಾನು ಆಗಲೇ ಹೇಳಿದಂತೆ ಮದರಾಸಿಗೆ ಈಗ 9 ಪೈಸೆದಂತೆ ಮಾರುತ್ತಿದ್ದೇವೆ, ಆಂಧ್ರದವರಿಗೆ ಶರಾವತಿ ಪವರು ರೇಟು ಜಾಸ್ತಿಯಾಯಿತು ಎಂದು 10. 5 ಪೈಸೆಯಂತೆ ಮಾರುತ್ತಿದ್ದೇವೆ, ಇದಕ್ಕೆಲ್ಲಾ ಲೆಕ್ಕಗಳಿವೆ. ಇದನ್ನೆಲ್ಲಾ ನಮ್ಮ ಎಲ್ಲ ಇಂಜನೀ

ಯರುಗಳೂ ಕುಳಿತುಕೊಂಡು ಸರಿಯಾಗಿ ಲೆಕ್ಕಚಾರ ಮಾಡುತ್ತಾರೆ. ಅವರು ಹಾಕಿರುವ ವರ್ಕಿಂಗ್ ಕಾಸ್ಟು ಮೇಲೆ ಮದ್ರಾಸಿಗೆ 9 ಪೈಸೆಯಂತೆ 220 ಕೆ. ವಿ. ಲೈನು ಮೇಲೆ ನಮ್ಮ ಪವರಿಗಾಗಿ ಅವರು ಕೊಡುತ್ತಿದ್ದಾರೆ. ಇದರಲ್ಲಿ ಅವರಿಗೆ ಟ್ರಾನ್ಸ್‌ಮಿಷನ್ ಲೈನು ಕಾಸ್ಟು ಕಡಿಮೆಯಾಗುತ್ತದೆ.

2 ಕೆ.ವಿ.ಗೆ 9 ಪೈಸೆ ಚಾರ್ಜು ಮಾಡುತ್ತೇವೆ. 66 ಕೆ.ವಿ. ಲೈನ್‌ನಿಂದ 220 ಕೆ. ವಿ. ಸ್ಟೆಪ್‌ಡೌನ್ ಮಾಡುತ್ತಿದ್ದೇವೆ. ನಮ್ಮಲ್ಲಿ ಪವರ್ ಹೆಚ್ಚಾಗಿರುವುದರಿಂದ ಮದ್ರಾಸಿನವರಿಗೆ 10.5 ರಂತೆ ಮದ್ರಾಸಿನವರಿಗೆ ಮಾರುತ್ತಿದ್ದೇವೆ. ಆದರೆ ಮದ್ರಾಸಿನವರು ನಮ್ಮಿಂದ ತೆಗೆದುಕೊಂಡ ಪವರನ್ನು ಕೇರಳದವರಿಗೆ 13 ಪೈಸೆಯಂತೆ ಕೊಡುತ್ತಿರುವುದು ಗೊತ್ತಿಲ್ಲ. ಅಲ್ಲದೆ ಇದಕ್ಕೆ ಕೇರಳದವರು ಒಪ್ಪಿದ್ದಾರೋ ಇಲ್ಲವೋ ಗೊತ್ತಿಲ್ಲ. 13 ಪೈಸೆ ಜಾಸ್ತಿಯೆಂದು ಕೇರಳದವರು ಮೊನಲು ಒಪ್ಪಿರಲಿಲ್ಲ. ಈಗೇನಾದರೂ ಅವರವರು ಒಂದು ನಿರ್ಣಯ ಮಾಡಿಕೊಂಡಿರಬಹುದೆಂದು ಕಾಣುತ್ತದೆ. ಟ್ರಾನ್ಸ್‌ಮಿಷನ್‌ಲೈನ್ಸ್, ಡಿಸ್ಟ್ರಿಬ್ಯೂಷನ್ ಮತ್ತು ಇನ್‌ಟ್ರೆಸ್ಟ್ ಚಾರ್ಜಸ್ ಇವುಗಳನ್ನೆಲ್ಲಾ ಲೆಕ್ಕ ಹಾಕಿ, ಆ ಲೆಕ್ಕದ ಪ್ರಕಾರದ ರೇಟನ್ನು ಫಿಕ್ಸ್ ಮಾಡಬೇಕಾಗುತ್ತದೆ. ಈ ರೇಟನ್ನು ಮದ್ರಾಸ್‌ನವರಿಗೆ ಮತ್ತು ಆಂಧ್ರದವರಿಗೆ ಹಾಕಿದ್ದೇವೆ.

6–30 p.m.

ಇನ್ನೊಂದು ವಿಚಾರ, ಶರಾವತಿ ಪವರ್ ಬಂದಮೇಲೆ ರೈತರುಗಳು ಮತ್ತು ಜನಸಾಮಾನ್ಯರುಗಳು ಹೆಚ್ಚು ಹೆಚ್ಚಾಗಿ ಪವರನ್ನು ಉಪಯೋಗ ಮಾಡಿಕೊಳ್ಳುವ ಮನೋಭಾವ ಇರಬೇಕು, ಆ ರೀತಿ ಉಪಯೋಗ ಮಾಡಿಕೊಳ್ಳಬೇಕಾದರೆ ರೇಟ್ ಕಡಿಮೆಯಿರಬೇಕೆಂದು ಮಾನ್ಯ ಸದಸ್ಯರುಗಳು ಸಭೆಯ ಮುಂದೆ ತಿಳಿಸಿದ್ದಾರೆ. ತಮಗೆಲ್ಲರಿಗೂ ಗೊತ್ತಿದೆ, ಕೇಂದ್ರದವರ ಆದೇಶದಂತೆ ವೆಂಕಟರಾಮನ್ ಕಮಿಟಿಯವರು, ವಿದ್ಯುಚ್ಛಕ್ತಿ ಬೋರ್ಡಿನವರು ಲಾಭ ಮಾಡಬೇಕಾದರೆ ಹನ್ನೊಂದು ಪರಸೆಂಟ್ ಮಿನಿಮಮ್ ರಿಟರ್ನ್ ಮುಟ್ಟಬೇಕೆಂದು ಸಲಹೆ ಕೊಟ್ಟಿದ್ದಾರೆ. ಇದನ್ನು ಕೇಂದ್ರ ಸರ್ಕಾರದವರು ಒಪ್ಪಿಕೊಂಡಿದ್ದಾರೆ. ನಮ್ಮ ಸ್ಟೇಟ್‌ನವರು ಸಹ ಅದೇರೀತಿ ಹನ್ನೊಂದು ಪರಸೆಂಟ್ ರಿಟರ್ನ್‌ಗೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದೇವೆ. ನಾವು ಈ ರೇಟ್ ಟ್ಯಾರಿಫ್‌ನ್ನು ನಿರ್ಣಯ ಮಾಡುವಾಗ ಮುಖ್ಯವಾದ ಅಂಶವನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತೇವೆ. ಮತ್ತು ಎಷ್ಟುಮಟ್ಟಿಗೆ ರೇಟನ್ನು ಹೆಚ್ಚು ಮಾಡಬಹುದು ಎಂಬ ವಿಚಾರವೂ ಇದೆ. ವಿದ್ಯುಚ್ಛಕ್ತಿ ಬೋರ್ಡಿಗೆ ಪ್ರತಿಯೊಂದಕ್ಕೂ ಸಾಲ ಕೊಡುವುದನ್ನು ತಪ್ಪಿಸಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಆದರೆ ವಿದ್ಯುಚ್ಛಕ್ತಿ ಬೋರ್ಡ್ ತನ್ನ ಕಾಲಮೇಲೆ ತಾನು ನಿಲ್ಲಬೇಕಾದರೆ, ಸ್ವಾವಲಂಬಿಯಾಗಬೇಕಾದರೆ, ಡೆವಲಪ್‌ಮೆಂಟ್ ಆಕ್ಟಿವಿಟೀಸ್‌ಗೆ ಸಾಕಷ್ಟು ಹಣ ಬೇಕಾಗುತ್ತದೆ. ಈ ಬೋರ್ಡಿನವರು ಟ್ರಾನ್ಸ್‌ಫಾರಮರ್ಸ್ ಮುಂತಾದ ಸಲಕರಣೆಗಳಿಗೆ ಹಣ ಕೊಡಬೇಕಾಗುತ್ತದೆ. ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ 63 ಕೋಟಿ ರೂಪಾಯಿಗಳನ್ನು ಈ ಬೋರ್ಡಿನವರು ಖರ್ಚು ಮಾಡಬೇಕಾಗುತ್ತದೆ. ಅಂದರೆ 63 ಕೋಟಿ ರೂಪಾಯಿಗಳ ರಿಸೋರ್ಸ್‌ನ್ನು ಅವರು ಹುಟ್ಟಿಸಿಕೊಳ್ಳಬೇಕಾಗುತ್ತದೆ. ಇದರಿಂದ ಅವರಿಗೆ ಸಾಕಷ್ಟು ರೆವಿನ್ಯೂ ಬರಬೇಕಾಗುತ್ತದೆ. ಅಲ್ಲದೆ ನಾವು ಸಹ ಸಾಕಷ್ಟು ಸಹಾಯ ಮಾಡಬೇಕಾಗುತ್ತದೆ.

ಇನ್ನು ಶರಾವತಿ ಪವರನ್ನು ನಾವು ಸಂಪೂರ್ಣವಾಗಿ ಉಪಯೋಗಮಾಡಿಕೊಳ್ಳಬೇಕಾಗಿದೆ. ಇದಕ್ಕಾಗಿ ಮೇನ್‌ಟೆನೆನ್ಸ್ ಚಾರ್ಜು ಸಹ ಹೆಚ್ಚಾಗುತ್ತದೆ. ಮನಸ್ಸು ಬಂದ ರೀತಿ ಟ್ಯಾರಿಫ್‌ನ್ನು ಹೆಚ್ಚು ಮಾಡುವುದಕ್ಕೆ ಹೋಗಿಲ್ಲ. 11 ಪರ್‌ಸೆಂಟ್ ಬರಬೇಕೆಂದು ಒಂದು ಗುರಿ ಇಟ್ಟುಕೊಂಡಿದ್ದೇವೆ. ಎರಡನೇ ಸ್ಟೇಟ್‌ಗೆ ಕೊಡುತ್ತಿರುವ ರೇಟಿಗಿಂತ ಕಮ್ಮಿ ರೇಟಿನಲ್ಲಿ ನಮ್ಮ ರಾಜ್ಯದವರಿಗೆ ಪವರನ್ನು ಒದಗಿಸುತ್ತಿದ್ದೇವೆ. ಅವರೇಜ್ ಮೊದಲಿಗಿಂತ 15 ಪರ್‌ಸೆಂಟ್ ಹೆಚ್ಚಾಗಿರಬಹುದು. ಅದಕ್ಕಿಂತ ಹೆಚ್ಚಾಗಿಲ್ಲ. ತಮಗೆ ಗೊತ್ತಿರುವಂತೆ ಎಲ್ಲಾ ಖರ್ಚುಗಳೂ ಹೆಚ್ಚಾಗುತ್ತಿದೆ.

ಶ್ರೀ ಎಸ್. ಗೋಪಾಲಗೌಡ.—ಟ್ಯಾರಿಫ್ ಕಮೀಷನ್ ರಿಪೋರ್ಟನ್ನು ಪಬ್ಲಿಷ್ ಮಾಡುವುದಕ್ಕೆ ಇರುವ ತೊಂದರೆಯೇನು ?

ಶ್ರೀ ವೀರೇಂದ್ರ ಪಾಟೀಲ್.—ಅದನ್ನು ಪಬ್ಲಿಷ್ ಮಾಡಲು ಅನೇಕ ಆತಂಕಗಳು ಇವೆ. ಆದರ ರಿಪೋರ್ಟನ್ನು ಈ ಸಭೆಯ ಮುಂದೆ ಇಟ್ಟಿಲ್ಲ. ಅದನ್ನು ಇಡುವುದಕ್ಕಾಗುವುದಿಲ್ಲ. ಏಕೆಂದರೆ, ಅದು ಸೀಕ್ರೆಟ್ ಡಾಕ್ಯುಮೆಂಟ್ ಆಗಿದೆ. ಆದ್ದರಿಂದ ಅದನ್ನು ಪಬ್ಲಿಷ್ ಮಾಡುವುದಕ್ಕಾಗುವುದಿಲ್ಲ

(ಶ್ರೀ ವೀರೇಂದ್ರ ಪಾಟೀಲ್)

ಇನ್ನು ಐ.ಪಿ.ಸೆಟ್ಸ್ ಬಗ್ಗೆ ಹೇಳುವುದಾದರೆ, ಕೆಲವು ಮಾನ್ಯ ಸದಸ್ಯರುಗಳು ಐ.ಪಿ.ಸೆಟ್ಸ್‌ಗೆ 10 ಪೈಸೆಯಂತೆ ಹಾಕಿರುವುದು ಜಾಸ್ತಿಯೆಂದು ಹೇಳಿದ್ದಾರೆ. ಆದರೆ ಒಂದು ವಿಚಾರವನ್ನು ಇದರ ಬಗ್ಗೆ ತಿಳಿದುಕೊಳ್ಳಬೇಕಾಗಿದೆ. ಐ.ಪಿ.ಸೆಟ್ಸ್‌ಗಳಿಗೆ ರೂರಲ್ ಎಲೆಕ್ಟ್ರಿಫಿಕೇಷನ್ ಮಾಡಲು ಸರ್ಕಾರಕ್ಕೆ ಖರ್ಚು ಬಹಳವಾಗುತ್ತದೆ. ಇವತ್ತು ಒಂದು ಅಲ್ಯೂಮಿನಿಯಮ್ ಕಾರ್ಖಾನೆಗೆ ಬೇಕಾದರೆ ಸುಮಾರು 250 ಅಥವಾ 300 ಎಂ. ಡಬ್ಲ್ಯೂ.ಟಿ. ಲೈನನ್ನು ಹುಬ್ಬಳ್ಳಿಯಿಂದ ಎಳೆದು ಬಿಡಬಹುದು. ಬಹಳ ಕಮ್ಮಿ ಖರ್ಚಿನಲ್ಲಿ ಮುಗಿಯುತ್ತದೆ. ಆದರೆ ಸಣ್ಣ ಸಣ್ಣ ಯೂನಿಟ್‌ಗಳಿಗೆ ಲೈನನ್ನು ಎಳೆಯಲು ಹೆಚ್ಚು ಖರ್ಚಾಗುತ್ತದೆ. ಐ.ಪಿ.ಪವರ್ ಸೆಟ್ಸ್ ತೆಗೆದುಕೊಂಡಲ್ಲಿ 2500 ಎಚ್.ಪಿ. ಪವರ್ ಖರ್ಚಾಗುತ್ತದೆ. ಅದನ್ನು 1500 ಎಚ್.ಪಿ. ಎಂದು ಇಟ್ಟುಕೊಂಡರೂ ಸಹ 4 ಎಚ್.ಪಿ.ಎಸ್.ಗೆ ಸುಮಾರು 4 ಸಾವಿರದಿಂದ 5 ಸಾವಿರದವರೆಗೆ ಖರ್ಚಾಗುತ್ತದೆ. ಆದರೆ ಬಳಕೆದಾರರ ಒಂದು ಐ.ಎಚ್.ಪಿ.ಗೆ 24 ರೂಪಾಯಿ ಮಿನಿಮಮ್ ಕೊಡುತ್ತಾನೆ. ಇದನ್ನು ಎಲಾ ಕಾಲದಲ್ಲೂ ಉಪಯೋಗಿಸುವುದಿಲ್ಲ, ನೀರು ಕಡಿಮೆ ಬಂದಾಗ ಮಾತ್ರ ಉಪಯೋಗಿಸುತ್ತಾರೆ. ಸರಾಸರಿ ವರ್ಷಕ್ಕೆ 150 ರಿಂದ 200 ರೂಪಾಯಿಗಳನ್ನು ಕೊಡಬಹುದು. ಬೋರ್ಡಿನವರು 5000 ರೂಪಾಯಿಗಳನ್ನು ಖರ್ಚುಮಾಡಿದರೆ ಬಳಕೆದಾರನಿಂದ 200 ರೂಪಾಯಿ ಮಾತ್ರ ವಾಪಸ್ ಬರುತ್ತದೆ. ಅಂದರೆ ಒಂದೂವರೆ ಪರ್‌ಸೆಂಟ್ ಕೂಡ ಲಾಭ ಬರುವುದಿಲ್ಲ. ಐ.ಪಿ.ಸೆಟ್ಸ್ ಕಡೆಯಿಂದ ಬೋರ್ಡಿನವರಿಗೆ ಒಂದು ಕಾಸಿನ ಲಾಭವೂ ಬರುವುದಿಲ್ಲ. ಅಲ್ಲದೆ ರೂರಲ್ ಎಲೆಕ್ಟ್ರಿಫಿಕೇಷನ್ ನಿಂದಲೂ ಸಹ ಒಂದು ಕಾಸಿನ ಲಾಭವೂ ಬರುವುದಿಲ್ಲ. ಆದರೂ ಸಹ ನಮ್ಮ ದೇಶದಲ್ಲಿ ಹಳ್ಳಿಗಳು ಜಾಸ್ತಿಯಿವೆ, ಅವುಗಳು ಮುಂದುವರಿಯಬೇಕು ಎಂದು ಈ ರೀತಿ ಖರ್ಚು ಮಾಡುತ್ತಿದ್ದೇವೆ. ಮೊನ್ನೆತಾನೆ ಎಲ್.ಐ.ಸಿ.ಯಿಂದ 3 ಕೋಟಿ ರೂಪಾಯಿ ಸಾಲ ತಂದಿದ್ದೇವೆ. ಅದಕ್ಕೆ ಏಳೂವರೆ ಪರ್‌ಸೆಂಟ್ ಇಂಟರೆಸ್ಟ್ ಕೊಡುತ್ತಿದ್ದೇವೆ. ಬರೀ ಪಟ್ಟಣಗಳೇ ಮುಂದುವರೆಯಬಾರದು, ಹಳ್ಳಿಗಳು ಸಹ ಮುಂದುವರೆಯಬೇಕೆಂದು ಬಹಳ ಕಮ್ಮಿ ರೇಟನ್ನೇ ಹಾಕುತ್ತಿದ್ದೇವೆ. ಈಗ ಹಾಕಿರುವುದು ಹೆಚ್ಚಿನ ಹೊರೆಯಾಗಲಾರದು, ಇದನ್ನು ಮಾನ್ಯ ಸದಸ್ಯರು ಒಪ್ಪುತ್ತಾರೆಂದು ನಂಬುತ್ತೇನೆ.

ಇಂಡಸ್ಟ್ರೀಸ್ ಬಗ್ಗೆ ಇವತ್ತು ಹೇಳಬೇಕಾದರೆ, ಇಂಡಸ್ಟ್ರೀಸ್‌ಗಳಿಗೆ ಪವರ್ ಕೊಡುವುದಕ್ಕೆ ಎಲ್ಲಾ ವ್ಯವಸ್ಥೆಯನ್ನೂ ಮಾಡಿದ್ದೇವೆ. ಅದಕ್ಕಾಗಿ 33-66-220 ಕೆ. ವಿ. ಲೈನ್‌ಗಳನ್ನು ನಮ್ಮ ರಾಜ್ಯದ ಎಲ್ಲಾ ಕಡೆಯಲ್ಲೂ ಹಾಕಿದ್ದೇವೆ. ಕೆಲವು ಕಡೆ ಹಾಕದಿದ್ದರೆ ಅಲ್ಲೂ ಸಹ ಹಾಕುತ್ತೇವೆ. ಈಗ ಪರಿಸ್ಥಿತಿಯೇನಾಗಿದೆಯೆಂದರೆ, ತಮಗೆಲ್ಲರಿಗೂ ಗೊತ್ತಿರುವಂತೆ ದೊಡ್ಡ ದೊಡ್ಡ ಕಾರ್ಖಾನೆಗಳು ಬರುವುದಕ್ಕೆ ಸ್ವಲ್ಪ ತಡವಾಗುತ್ತಿದೆ. ಅಲ್ಯೂಮಿನಿಯಂ ಕಾರ್ಖಾನೆ ಬರಲು ತಡವಾಗಿದೆ. ಜಾಗ್ರತೆ ಪ್ರಾರಂಭವಾಗಬಹುದು, ಈ ಕಾರ್ಖಾನೆಯ ಸಲುವಾಗಿ 500 ಎಕರೆ ಜಾಗವನ್ನು ಸ್ವಾಧೀನಪಡಿಸಿಕೊಂಡಿದ್ದೇವೆ. ಇವತ್ತು ಅಲ್ಯೂಮಿನಿಯಂ ಫ್ಯಾಕ್ಟರಿ ನಮಗೆ ಬಂದಿದೆ. ಅದರ ಬಗ್ಗೆ ಯಾವ ಸಂಶಯವೂ ಬೇಡ. ಇನ್ನು ಯಾವಾಗ ಬರುತ್ತದೆಂದು ಕೇಳಬಹುದು. 3-4 ತಿಂಗಳುವರೆಗೆ ಹೆಚ್ಚು ಕಾಲಾವಕಾಶ ಬೇಕಾಗಬಹುದು. ಅದರೊಳಗೇ ಆಗಬಹುದೆಂಬ ನಿರೀಕ್ಷೆ ಇದೆ. ಆದ್ದರಿಂದ ಅಲ್ಯೂಮಿನಿಯಂ ಕಾರ್ಖಾನೆ ಬಂದಿದೆ, ಬಂದೇ ಬರುತ್ತದೆ. ಅದರ ಬಗ್ಗೆ ಯಾವ ಸಂಶಯವೂ ಇಲ್ಲವೆಂದು ನಾನು ಹೇಳಬಲ್ಲೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದೇನೋ ಸರಿ. ಆದರೆ ಪವರನ್ನು ಯಾವ ರೀತಿ ಕನ್‌ಸ್ಯೂಮ್ ಮಾಡುತ್ತಾರೆಂಬುದನ್ನು ಹೇಳಬೇಕು.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ನಂತರ ಉತ್ತರ ಕೊಡುತ್ತೇನೆ. ಇವತ್ತು ನಮ್ಮಲ್ಲಿ ಬೇಕಾದಷ್ಟು ಪವರ್ ಇದೆ. ಇನ್ನು ಒಂದು ತಿಂಗಳೊಳಗೆ ಅದನ್ನು ಅಭಿವೃದ್ಧಿ ಮಾಡುತ್ತೇವೆ. ನೂರಾರು ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡುವ ಪ್ರಸಂಗ ಈಗ ಬಂದಿದೆ. ಅದಕ್ಕಾಗಿ ಸ್ವಲ್ಪ ಕಾಲಾವಕಾಶವಾಗುತ್ತದೆ.

ಅದೇ ರೀತಿಯಲ್ಲಿ ಫರ್ಟಿಲೈಜರ್ಸ್ ಫ್ಯಾಕ್ಟರಿ ಬಗ್ಗೆಯೂ ಕೂಡ ಕೇಂದ್ರ ಸರ್ಕಾರದವರು letter of consent ಸಹ ಕೊಟ್ಟಿದ್ದಾರೆ. ಮಂಗಳೂರಿನಲ್ಲಿ ಇದನ್ನು ಸ್ಥಾಪನೆ ಮಾಡಬೇಕೆಂದಿದ್ದೇವೆ. ಅದರ ಬಗ್ಗೆ ಫಾರೆನ್ ಕೊಲ್ಯಾಬೊರೇಷನ್, ಫಾರೆನ್ ಎಕ್ಸ್‌ಚೇಂಜ್ ಸಹ ಬರುತ್ತಿದೆ. ಕೇಂದ್ರ ಸರ್ಕಾರದ ಅನುಮತಿಯೂ ಸಹ ಒದಗಿದೆ. ಇಷ್ಟರಲ್ಲಿಯೇ ಆ ಕೆಲಸಗಳನ್ನು ಪ್ರಾರಂಭ ಮಾಡುತ್ತೇವೆ. ಆ ವಿಚಾರದಲ್ಲಿ ಈಗಾಗಲೇ ಬೇಕಾದಷ್ಟು ತಕ್ಕ ಕ್ರಮಗಳನ್ನು ಕೇಂದ್ರದವರು ತೆಗೆದುಕೊಳ್ಳುತ್ತಿದ್ದಾರೆ.

ಇನ್ನು ಉಕ್ಕಿನ ಕೈಗಾರಿಕೆ ಬಗ್ಗೆ ಅದು ಯಾವಾಗ ಬರುತ್ತದೆಂದು ಕೆಲವರು ಕೇಳಿದ್ದಾರೆ. ಅದು ಎಂದು ಬರುತ್ತದೆಂಬ ಬಗ್ಗೆ ಯಾರೂ ಹೇಳುವುದಕ್ಕಾಗುವುದಿಲ್ಲ. ಎಲ್ಲಾ ಕೈಗಾರಿಕೆಗಳನ್ನೂ ಒಂದೇ ಸಾರಿ ಸ್ಥಾಪನೆ ಮಾಡಬೇಕೆಂದು ಹೇಳಿದರೆ ಅವರಿಗೆ ಅದರಲ್ಲಿ ಬಹಳ ಕಷ್ಟವಿದೆ.

ಶ್ರೀ ಗಂಗಾಧರ ನಾಮೋಷಿ.—ತುಂಗಭದ್ರಾ ಪವರ್ ಷಟ್‌ಡೌನ್ ಆಗಿ ನಮ್ಮ ಪ್ರಾಂತದವರಿಗೆ ತುಂಬಾ ತ್ರಾಸು ಆಗಿದೆ. ಆ ಬಗ್ಗೆ ಟೆಕ್ನಿಕಲ್ ಒಪಿನಿಯನ್ ಕೊಡಬಾರದೇ? ಬೋರ್ಡಿನವರೂ ಮತ್ತು ಸರ್ಕಾರದವರು ಇದರ ವಿಷಯದಲ್ಲಿ ಏನು ಹೇಳುತ್ತಾರೆ?

ಶ್ರೀ ವೀರೇಂದ್ರ ಪಾಟೀಲ್.—ಆ ವಿಚಾರವನ್ನು ಮುಂದೆ ಹೇಳುತ್ತೇನೆ. ಇನ್ನು ಕೈಗಾರಿಕೆಗಳು ಹೆಚ್ಚು ಬೆಳೆಯಬೇಕೆಂದು ಹೇಳುವಾಗ ಅದರಲ್ಲಿ ನಮ್ಮ ಒಬ್ಬರ ಕೈವಾಡವೇನೂ ಇಲ್ಲ. ಅದು ನಮ್ಮ ಒಬ್ಬರ ಕೈವಾಡವೇನೂ ಇಲ್ಲ. ಅದು ನಮ್ಮ ಒಬ್ಬರ ಕೈಕೆಳಗೆ ಇಲ್ಲ. ಆಂಧ್ರ ಪ್ರದೇಶಕ್ಕೂ ಕೇಂದ್ರ ಸರ್ಕಾರದವರೇ ಲೈಸೆನ್ಸ್ ಕೊಡಬೇಕು, ಇಂಪೋರ್ಟ್ ಲೈಸೆನ್ಸ್ ಬೇಕು, ಫಾರಿನ್ ಎಕ್ಸ್‌ಚೇಂಜು ಬೇಕು. ಹೀಗೆ ಅನೇಕ ಕಷ್ಟಗಳಿವೆ. ಕೈಗಾರಿಕೆಗಳ ಅಭಿವೃದ್ಧಿ ನಮ್ಮ ದೇಶದಲ್ಲಿ ಎಷ್ಟರಮಟ್ಟಿಗೆ ಆಗಬೇಕಾಗಿತ್ತೋ ಅಷ್ಟು ಆಗಲು ಸ್ವಲ್ಪ ಮಟ್ಟಿಗೆ ಆತಂಕಗಳಿವೆ. ಅವು ಇನ್ನು ಮುಂದೆ ದೂರವಾಗುತ್ತವೆಂಬುದಾಗಿ ಈ ಸಮಯದಲ್ಲಿ ಹೇಳಬಯಸುತ್ತೇನೆ.

ಇನ್ನು ಕೆಲವು ಮಾನ್ಯ ಸದಸ್ಯರು ಹೆಚ್ಚು ಪವರ್ ಇಂಟರಪ್‌ಷನ್ಸ್ ಆಗುತ್ತವೆಂಬುದಾಗಿ ಹೇಳಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುವುದು ಸ್ವಲ್ಪಮಟ್ಟಿಗೆ ಕಷ್ಟವಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಇಂಟರಪ್‌ಷನ್ಸ್ ಆಗುತ್ತವೆ. ಹಳೆಯ ಮೈಸೂರಿನಲ್ಲಿ ಟ್ರಾನ್ಸ್‌ಮಿಷನ್ ಲೈನ್ಸ್ ಬಗ್ಗೆ ಉಳಿದಿರುವ ಕೆಲಸಗಳು ಪೂರ್ತಿಯಾಗಲು ಎಲ್ಲ ಸಿದ್ಧತೆಗಳೂ ಆಗಿವೆ. ಸ್ಟೆಪ್‌ಡೌನ್ ಸ್ಟೇಷನ್ಸ್‌ಗಳಲ್ಲಿ ಸ್ವಿಚ್ ಗೇರ್ ವರ್ಕ್ಸ್ ಎಲ್ಲಾ ಅನೇಕ ವರ್ಷಗಳಿಂದ ಆಗುತ್ತಿವೆ. ಇಂತಹ ಕಡೆಗಳಲ್ಲಿ ಇಂಟರಪ್‌ಷನ್ಸ್ ಅಷ್ಟು ಇಲ್ಲ. ಶ್ರೀಮಾನ್ ಬಸಪ್ಪನವರು ಹೇಳಿದ ಹಾಗೆ ಈಗ ಒಬ್ಬೊಬ್ಬ ಲೈನ್‌ಮೆನ್ನಿಗೆ 20 ಮೈಲಿ ಅಥವಾ 15 ಮೈಲಿಯವರೆಗೆ ಕೆಲಸಗಳನ್ನು ಕೊಟ್ಟಿರಬಹುದು, ಅಂತಹ ಕಡೆಗಳಲ್ಲಿ ಅಲ್ಪಸ್ವಲ್ಪ ಇಂಟರಪ್‌ಷನ್ಸ್ ಆಗಿದ್ದರೂ ಆಗಿರಬಹುದು. ಅದರ ಬಗ್ಗೆ ನಾನು ಬೋರ್ಡ್‌ನಲ್ಲಿ ವಿಚಾರ ಮಾಡಬೇಕಾಗಿದೆ. ಹೆಚ್ಚು ಹೆಚ್ಚಾಗಿ ಆಗಾಗ್ಗೆ ಇಂಟರಪ್‌ಷನ್ಸ್ ಆಗುತ್ತಿರುವುದು ಸರಿಯಾದುದಲ್ಲ. ಬರೀ ಲೈನುಮೆನ್ನುಗಳನ್ನು ಹೆಚ್ಚಾಗಿ ಹಾಕುವುದರಿಂದ ಇಂಟರಪ್‌ಷನ್ಸ್‌ನ್ನು ತಡೆಗಟ್ಟುವುದಕ್ಕೆ ಸಾಧ್ಯವಿದೆಯೆಂದು ಹೇಳಿದರೆ ಅದಕ್ಕೆ ಬೋರ್ಡ್ ಮತ್ತು ಸರ್ಕಾರ ಹಿಂದು ಮುಂದು ನೋಡುವ ಹಾಗೆ ಇಲ್ಲ. ಈ ವಿಚಾರದಲ್ಲಿ ಇಂಟಿಗ್ರೇಟೆಡ್ ಏರಿಯಾಗಳಲ್ಲಿ ಈ ಒಂದು ಪ್ರಶ್ನೆ ಬಹಳವಾಗಿ ಹೆಚ್ಚಿದೆ. ಅಲ್ಲಿ ಇಂಟರಪ್‌ಷನ್ಸ್ ಬಹಳವಾಗಿವೆ. ಅದಕ್ಕೋಸ್ಕರವೇ ಹೊರಗಡೆ ಇರತಕ್ಕ ಪ್ರದೇಶಗಳಲ್ಲಿ ಅಷ್ಟು ತೊಂದರೆ ಜಾಸ್ತಿ ಇರುತ್ತದೆ. ಅದೇ ಒಂದು ಪರಿಸ್ಥಿತಿ ಅಲ್ಲಿ ಇನ್ನೂ ಹಾಗೆಯೇ ಉಳಿದುಕೊಂಡಿದೆ. ಅಲ್ಲಿ ಏನಾಗಿದೆಯೆಂದರೆ ನಮಗೆ ಬೇಕಾದಂಥ ಸ್ವಿಚ್‌ಗೇರ್ಸ್ ಕಂಟ್ರೋಲ್ಡ್ ರೇಟ್‌ನಲ್ಲಿ ಸಿಗುವುದಿಲ್ಲ. ದೊಡ್ಡದೊಡ್ಡ ಲೈನುಗಳಿಗೆ ಬೇಕಾದ ಸ್ವಿಚ್‌ಗೇರ್ಸ್ 33-110-120, ಕೆ. ವಿ. ಲೈನ್ ಮಾಡಲ್ ನಮ್ಮ ದೇಶದಲ್ಲಿ ದೊರೆಯುವುದಿಲ್ಲ. ಅವನ್ನು ಪರದೇಶಗಳಿಂದ ನಾವು ಇಂಪೋರ್ಟ್ ಮಾಡಿಕೊಳ್ಳಬೇಕಾಗಿರೆ. ಆದ್ದರಿಂದ ಈ ಮೇಟಿರಿಯಲ್ ಅಭಾವ ಹೆಚ್ಚಾಗಿರುವುದರಿಂದ ಅಲ್ಲಿ ಆರೀತಿ ಪರಿಸ್ಥಿತಿ ಉಂಟಾಗಿದೆ. ನಮ್ಮ ಚೀಫ್ ಇಂಜನಿಯರುಗಳು ಅಲ್ಲಿ ಹೋಗಿ ನೋಡಿ ಯಾವ ರೀತಿಯಲ್ಲಿ ಅಲ್ಲೆ ಬ್ರೇಕ್‌ಡೌನ್ ಆಗುತ್ತದೆಯೆಂದು ನೋಡಿಕೊಂಡು ಬಂದಿರುವುದು ಎಲ್ಲರಿಗೂ ಮನವರಿಕೆಯಾಗಿದೆ. ಈಗಾಗಲೇ ನಾವು ಎಲ್ಲಾ ಮೇಟಿರಿಯಲ್ಸಗೂ ಆರ್ಡರ್ ಮಾಡಿದ್ದರೂ ಏನೂ ಬರುತ್ತಾ ಇಲ್ಲ, ಎಲ್ಲೋ ಕೆಲವುಮಾತ್ರ ಬರುತ್ತವೆ. ಹೆಚ್ಚುಹೆಚ್ಚಾಗಿ ಆ ಸಾಮಾನುಗಳನ್ನು ತರಿಸಿಕೊಳ್ಳುವುದಕ್ಕೆ ಪ್ರಯತ್ನಮಾಡುತ್ತಿದ್ದೇವೆ. ಒಂದೇ ಸ್ವಿಚ್‌ನಲ್ಲಿ ನಾಲ್ಕೈದು ಲೈನುಗಳನ್ನು ಕಂಟ್ರೋಲ್ ಮಾಡುವುದಕ್ಕೆ ಪ್ರಯತ್ನಮಾಡುತ್ತಿದ್ದೇವೆ. ಎಲ್ಲಿ ಹೊಸದಾಗಿ ಈಗ ಲೈನುಗಳನ್ನು ತೆಗೆದುಕೊಂಡಿದ್ದೇವೋ ಅಲ್ಲಿ ಈ ರೀತಿಯಾಯ ತೊಂದರೆಗಳು ಆಗುತ್ತಿವೆ ಎನ್ನುವ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ಕಷ್ಟವನ್ನು ನಿವಾರಣೆಮಾಡುವ ಬಗ್ಗೆ ಬೇಕಾದಷ್ಟು ಪ್ರಯತ್ನಗಳನ್ನು ಸರ್ಕಾರದವರು ಮಾಡುತ್ತಿದ್ದಾರೆ. ಯಾವ್ಯಾವ ಸಾಮಾನುಗಳು ನಮಗೆ ಬಹಳವಾಗಿ ಅಗತ್ಯವಿದೆ ಅವುಗಳನ್ನು ಜಾಗ್ರತೆಯಾಗಿ ಇಂಪೋರ್ಟ್‌ಮಾಡಿ ಹೊರಗಡೆಯಿಂದ ತರಿಸುವ ಪರಿಸ್ಥಿತಿಯಲ್ಲಿ ಈಗ ನಾವು ಇದ್ದೇವೆ. ಆದರೆ ಅವು ಇಷ್ಟೇ ದಿವಸಗಳಲ್ಲಿ ಇಲ್ಲಿಗೆ ಬರುತ್ತವೆ, ಜನರ ಕಷ್ಟಗಳನ್ನು ಇಷ್ಟೇ ದಿವಸಗಳಲ್ಲಿ ನಿವಾರಣೆಮಾಡಬಹುದು ಎಂದು ಹೇಳುವ ಪರಿಸ್ಥಿಯಲ್ಲಿ ನಾವು ಈಗ ಇಲ್ಲ.

ಶ್ರೀ ಪಿ. ವೆಂಕಟಗಿರಿಯಪ್ಪ.—ಕೋಲಾರದಲ್ಲಿ ಸುಮಾರು ಎರಡು ವರ್ಷಗಳಿಂದಲೂ ಅಲ್ಲಿರತಕ್ಕ ವೈರುಗಳನ್ನು ಎಳೆದಿರುವ ಲೈನ್ ಬ್ರೇಕ್‌ಡೌನ್ ಆಗುತ್ತಲೇ ಇದೆ.

ಶ್ರೀ ವೀರೇಂದ್ರ ಪಾಟೀಲ್.—ಆರೀತಿ ಆಗಬಹುದ. ನೋಡೋಣ. ಇನ್ನು ತುಂಗಭದ್ರಾ ಪವರನ್ನು ಬ್ರೇಕ್‌ಡೌನ್ ಮಾಡಿದರು, ಆ ಪವರನ್ನು ಷಟ್‌ಡೌನ್ ಮಾಡಿ ಆಂಧ್ರಕ್ಕೆ ಕೊಟ್ಟು ಈ ಶರಾವತಿ ಅಷ್ಟು ದೂರದಿಂದ ಪವರನ್ನು ನಾವು ನಿರೀಕ್ಷಣೆ ಮಾಡಬೇಕಾಗಿದೆ, ಇದರಿಂದ ಎ.ಸಿ.ಸಿ. ಯವರಿಗೂ ಮತ್ತು ಹೈದರಾಬಾದ್ ಕರ್ಣಾಟಕದ ಮೂರು ಜಿಲ್ಲೆಗಳಿಗೂ ಕಷ್ಟವಾಗಿದೆ, ಪವರೇನೋ ಷಟ್‌ಡೌನ್ ಆಗುತ್ತಲೇ ಇದೆ ಎಂಬ ಮಾತನ್ನು ಶ್ರೀ ಗಂಗಾಧರ ನಮೋಶಿಯವರು ಹೇಳಿದರು. ಅದು ಯಾವ ಕಾರಣದಿಂದ ಆಗುತ್ತದೆಂಬುದನ್ನು ನಾನು ಈಗಾಗಲೇ ಹೇಳಿದ್ದೇನೆ. ತುಂಗಭದ್ರಾದಲ್ಲಿ ಪವರನ್ನು ಷಟ್‌ಡೌನ್ ಮಾಡಿದರೂ ಇವತ್ತು ಜೋಗ್‌ನಿಂದ ಪವರ್ ಬರುತ್ತಿದೆ, ಅಲ್ಲಿಂದಲೇ ತುಂಗಭದ್ರಾಕ್ಕೂ ಪವರ್ ಹೋಗುತ್ತದೆ. ಆದರೆ ಮಾನ್ಯ ಸದಸ್ಯರು ತುಂಗಭದ್ರಾ ಪವರ್ ಹೋಗುತ್ತದೆ. ಅದರಿಂದ ಕಷ್ಟವಿದೆಯೆಂದು ಇವತ್ತಿನ ದಿವಸ ಮಾನ್ಯ ಸದಸ್ಯರಿಗೆ ಅನ್ನಿಸುತ್ತಿದೆ. ಆದರೆ ತುಂಗಭದ್ರಾ ವಾಟರ್ ಲೆವೆಲ್ ರೈಜ್ ಆದರೆ ಈಗಿರತಕ್ಕ ತುಂಗಭದ್ರಾ ಪವರ್ ಷಟ್‌ಡೌನ್ ಇರುತ್ತದೋ ಇಲ್ಲವೋ ಎನ್ನುವುದು ಮಾನ್ಯ ಸದಸ್ಯರಿಗೆ ಅನುಭವ ಬರುತ್ತದೆ. ತುಂಗಭದ್ರಾ ಪವರ್ ಷಟ್‌ಡೌನ್ ಮಾಡಬೇಕು ಎಂಬುದಾಗಿ ಬೋರ್ಡಿನವರು ಹೇಳಲಿಲ್ಲ. ಆ ರೀತಿಯಾಗಿ ಮಾಡಲೂ ಇಲ್ಲ. ಅದು ನಮಗೂ ಗೊತ್ತಿದೆ. ಪ್ರತಿಯೊಬ್ಬ ಇಂಜನಿಯರಿಗೂ ಗೊತ್ತಿದೆ. ಪವರ್ ತುಂಗಭದ್ರಾದಿಂದ ಬಂದರೂ ಅಷ್ಟೇ, ಶರಾವತಿಯಿಂದ ಬಂದರೂ ಅಷ್ಟೇ, ಕೊನೆಯಪಕ್ಷ ಜೋಗಿನಿಂದ ಬಂದರೂ ಅಷ್ಟೇ. ದೂರದಿಂದ ಪವರ್ ಬಂದರೆ ಬಹಳ ಕಷ್ಟವಾಗುತ್ತದೆ, ಸಮೀಪದಿಂದ ಬಂದರೆ ಅಷ್ಟು ಕಷ್ಟವಿಲ್ಲವೆಂದು ಹೇಳುವಹಾಗೆ ಇಲ್ಲ. ಅದಕ್ಕೆ ಬೇಕಾದಂಥ ಸಾಮಗ್ರಿಗಳನ್ನು ಒದಗಿಸಿಕೊಳ್ಳುವವರೆಗೂ ಸ್ವಲ್ಪಮಟಿಗೆ ಇಂತಹ ತೊಂದರೆಗಳು ಸಂಭವಿಸುವುದು ಸ್ವಾಭಾವಿಕ. ಹೈದರಾಬಾದಿನಲ್ಲಿ ಸರ್ಕಾರದ ಪರವಾಗಿ ಟೆಲಿಫೋನ್ ಲೈನುಗಳು ಸಾಕಷ್ಟಿಲ್ಲ. ತಮ್ಮದೇ ಆದಂಥ ಒಂದು ಟೆಲಿಫೋನ್ ಎಕ್ಸ್‌ಚೇಂಜನ್ನು ಇಟ್ಟುಕೊಂಡಿರುತ್ತಾರೆ. ಒಮ್ಮೆ ಅಲ್ಲಿ ಪವರ್ ಬ್ರೇಕ್‌ಡೌನ್ ಆಯಿತೆಂದರೆ, ಅಲ್ಲಿ ಟೆಲಿಫೋನ್ ಸಿಸ್ಟಂ ಇತ್ತೆಂದರೆ ಏನಾದರೂ ಅನುಕೂಲವಾದೀತು. ಯಾವುದಾದರೂ ಒಂದು ಜೀಪಿನಲ್ಲಿ ಇವರ ಸ್ಕ್ವ್ಯಾಡ್ ಅಂದರೆ ಸಂಬಂಧಪಟ್ಟ ಅಧಿಕಾರಿಗಳು, ಲೈನುಮೆನ್ನುಗಳು ಹೋಗಿ ಅದನ್ನು ಸರಿಮಾಡುತ್ತಾರೆ. ಎಲ್ಲಾದರೂ ಕರೆಂಟ್ ಫೇಲ್ ಆಯಿತು, ಕಂಬ ಬಿದ್ದುಹೋಯಿತು ಅಂದರೆ ಅದಕ್ಕಾಗಿ ಪೋಸ್ಟ್ಸ್ ಅಂಡ್ ಟೆಲಿಗ್ರಾಫ್ ಆಫೀಸಿಗೆ ಹೋಗಿ ಅಲ್ಲಿಂದ ಹೆಡ್‌ಕ್ವಾಟರ್ಸಿಗೆ ಟ್ರಂಕ್ ಕಾಲ್ ಮಾಡಿ ಆ ವಿಷಯವನ್ನು ಹೇಳುವವರೆಗೂ ಸಂಬಂಧಪಟ್ಟವರಿಗೆ ಗೊತ್ತಾಗುವುದಿಲ್ಲ. ಈ ರೀತಿ ಅಲ್ಲಿ ಕಷ್ಟವಿದೆ. ಅದಕ್ಕಾಗಿ ಈಗ ಸಾಕಷ್ಟು ಟ್ರಂಕ್ ಕಾಲ್ ಮೆಷಿನರಿಗಳಿಗೆ ಆರ್ಡರ್ ಮಾಡಿದ್ದಾರೆ. ಅವು ಸಾಕಷ್ಟು ಪ್ರಮಾಣದಲ್ಲಿ ಸಿಕ್ಕುವ ಭರವಸೆಯನ್ನೂ ಸಹ ನಾನು ಈಗ ಕೊಡಬಲ್ಲೆ. ಎಷ್ಟು ವೈರುಗಳು ಬಂದರೂ ಜಾಗ್ರತೆಯಾಗಿ ಟೆಲಿಫೋನ್ ವೈರುಗಳನ್ನು ಹಾಕಬೇಕೆಂದು ಹೇಳಿದ್ದೇವೆ. ಟೆಲಿಫೋನ್ ಸಿಸ್ಟಂ ಅಲ್ಲಿಗೆ ಬಂದಮೇಲೆ ಬಹಳ ಮಟ್ಟಿಗೆ ಈಗಿರತಕ್ಕ ದೂರುಗಳು ನಿಜವಾಗಿ ದೂರವಾಗುತ್ತವೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ಒಂದೆರಡು ವಿಚಾರಗಳನ್ನು ಮಾನ್ಯ ಸದಸ್ಯರು ಕೆಲವರು ಹೇಳಿದ್ದಾರೆ. ಒಂದು ಜಿಲ್ಲೆಗೆ 25ಸಾವಿರ, ಇನ್ನೊಂದುಜಿಲ್ಲೆಗೆ 15ಸಾವಿರ, ಒಂದು ಕಡೆ 700, ಮತ್ತೊಂದು ಕಡೆ 800—ಹೀಗೆ ಮಂತ್ರಿಗಳು ಇರುವ ಕಡೆಗಳಲ್ಲಿ ಅದರಲ್ಲೂ ಪೊಲಿಟಿಕಲ್ ಪ್ರೆಷರ್ ಬಂದ ಕಡೆಗಳಲ್ಲಿ ವಿದ್ಯುಚ್ಛಕ್ತಿ ಸರಬರಾಜನ್ನು ಬೇಕಾದಷ್ಟು ಹೆಚ್ಚುಮಾಡಿಕೊಂಡಿದ್ದಾರೆಂದು ಕೆಲವರು ಹೇಳಿದ್ದಾರೆ. ಅದು ಸರಿಯಾದುದಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದರ ಬೇಸಿಸ್ ಏನು ಎನ್ನುವುದನ್ನು ಇಲ್ಲಿ ಹೇಳುತ್ತೇನೆ.

ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿಯೂ ಎಷ್ಟು ಬಾವಿಗಳಿವೆಯೋ ಅದರ ಶೇಕಡ 40ರಷ್ಟು ಬಾವಿಗಳಿಗೆ ಪಂಪುಸೆಟ್ಟುಗಳ ಸರ್ವಿಸ್ಸನ್ನು ಮಾಡಬೇಕೆಂಬ ಧೋರಣೆಯನ್ನು ನಾವು ಈಗ ಇಟ್ಟುಕೊಂಡಿದ್ದೇವೆ. ಆ ರೀತಿಯಾಗಿ ಪ್ರತಿಯೊಂದು ಜಿಲ್ಲೆಯಲ್ಲಿಯೂ ಎಷ್ಟೆಷ್ಟು ಬಾವಿಗಳಿವೆಯೋ ಎಂಬುದಕ್ಕೆ ಅಂಕಿಅಂಶಗಳ ಶೇಖರಣೆಯನ್ನು ಸಹ ಮಾಡಿಕೊಂಡಿದ್ದೇವೆ. ಆ ಪ್ರಕಾರ ಈಗ ಪ್ರತಿಯೊಂದು ಜಿಲ್ಲೆಯಲ್ಲಿಯೂ ಶೇಕಡ 40ರಷ್ಟು ಬಾವಿಗಳಿಗೆ ಪಂಪುಸೆಟ್ಟುಗಳ ಸರ್ವಿಸ್ಸನ್ನು ಮಾಡಬೇಕೆಂದು ಪ್ರಯತ್ನಮಾಡಿದ್ದೇವೆ. ಹೊಸ ಮೈಸೂರು ರಾಜ್ಯ ಸ್ಥಾಪನೆಯಾಗಿ 10 ವರ್ಷಗಳಾಗಿದ್ದರೂ ಕೂಡ ಮೊನ್ನೆಯವರೆಗೂ ಬೆಳಗಾಮಿಗೆ ವಿದ್ಯುಚ್ಛಕ್ತಿ ಲೈನನ್ನು ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವಾಗಿರಲಿಲ್ಲ. ಬಿಜಾಪುರ ಹೆಡ್‌ಕ್ವಾರ್ಟರಿಗೆ ವಿದ್ಯುಚ್ಛಕ್ತಿ ಲೈನನ್ನು ಹಾಕುವುದಕ್ಕೆ ಸಾಧ್ಯವಾಗಿರಲಿಲ್ಲ. ಮೊನ್ನೆತಾನೆ ಮುಖ್ಯಮಂತ್ರಿಗಳು ಬಾಗಲಕೋಟೆಯಲ್ಲಿ ಪವರ್ ರಿಸೀವಿಂಗ್ ಸ್ಟೇಷನ್ ಅನ್ನು ಓಪನ್ ಮಾಡಿದರು. ಈಗ ಹೊಸಲೈನನ್ನು ಹಾಕಿ ಅಲ್ಲಿ ಹಳ್ಳಿಗಳಿಗೆ ಮತ್ತು ಬಾವಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಬೇಕು. ಯೋಜನೆಯ ಪ್ರಕಾರ ನಾವು ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆಯೋ ಅದರ ಪ್ರಕಾರ ಅದರ ಒಂದು ಆಧಾರದ ಮೇಲೆ ಲೆಕ್ಕ ಹಾಕಿಕೊಂಡು ನಾವು ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಮತ್ತು ಬಾವಿಗಳಿಗೆ ಪಂಪುಸೆಟ್ಟುಗಳನ್ನು ಒದಗಿಸುತ್ತಿ

ದ್ದೇವೆ. ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವ ವಿಷಯದಲ್ಲಿ ನಾಲ್ಕನೆಯ ಪಂಚವಾರ್ಷಿಕ ಯೋಜನೆ ಯಲ್ಲಿ ಪ್ರತಿಯೊಂದು ಜಿಲ್ಲೆಗೂ 50 ಪರ್ಸೆಂಟ್ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ಅಂಕಿ ಅಂಶಗಳ ಆಧಾರದ ಮೇಲೆ ನಾವು ನಿರ್ಧಾರ ಮಾಡಿದ್ದೇವೆ.

ಇನ್ನು ದಕ್ಷಿಣಕನ್ನಡ ಜಿಲ್ಲೆ ಮತ್ತು ಹಾಸನ ಜಿಲ್ಲೆಗಳಿಗೆ ವಿದ್ಯುಚ್ಛಕ್ತಿ ಪಂಪುಸೆಟ್ಟುಗಳನ್ನು ಒದಗಿಸುವುದು ಕಡಿಮೆಯಾಗಿದೆ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ದಕ್ಷಿಣಕನ್ನಡ ಜಿಲ್ಲೆಯ ವಿಷಯದಲ್ಲಿ ಮಾನ್ಯ ಸದಸ್ಯರು ಹೇಳುವುದರಲ್ಲಿ ಸ್ವಲ್ಪ ಸತ್ಯಾಂಶ ಇದೆ. ಅಲ್ಲಿ ದೊಡ್ಡ ದೊಡ್ಡ ಕೆರೆ ಕಟ್ಟೆಗಳಿಲ್ಲ. ಅಲ್ಲಿ ವೆಂಟೆಡ್ ಡ್ಯಾಮ್‌ಗಳನ್ನು ಹಾಕಿದ್ದಾರೆ. ಅಲ್ಲಿ ಬೇಕಾದಷ್ಟು ನೀರು ಇದೆ. ಅಲ್ಲಿ ಸಿಹಿನೀರಿನ ನದಿಗಳು ಹರಿಯುತ್ತವೆ. ಆದ್ದರಿಂದ ಅಲ್ಲಿ ಹೆಚ್ಚು ಅನುಕೂಲತೆಯನ್ನು ಮಾಡಿ ಕೊಡುವುದಕ್ಕೆ ಅವಕಾಶವಿದೆ. ಅಲ್ಲಿಗೆ ವಿದ್ಯುಚ್ಛಕ್ತಿ ಪಂಪುಸೆಟ್ಟುಗಳನ್ನು ಒದಗಿಸುವುದರಲ್ಲಿ ಸ್ವಲ್ಪ ಕಡಿಮೆಯಾಗಿದೆ ಅದನ್ನು ನಾನು ಒಪ್ಪುತ್ತೇನೆ. ಹಾಸನ ಜಿಲ್ಲೆಯ ಪರಿಸ್ಥಿಯೂ ಹಾಗೆಯೇ ಇದೆ. ಅದರ ಸಲುವಾಗಿ ನಾವು ಏನು ಮಾಡಿದ್ದೇವೆ ಎಂದರೆ, ಆ ಜಿಲ್ಲೆಗಳಿಗೆ 53-50 ಐ.ಪಿ. ಸೆಟ್ಟುಗಳನ್ನು ರಿಜರ್ವ್ ಮಾಡಿದ್ದೇವೆ. ನಾಲೆಗಳು, ನದಿಗಳು ಮತ್ತು ಹೊಳೆಗಳು ಇವುಗಳಲ್ಲಿ ನೀರನ್ನು ತೆಗೆದುಕೊಳ್ಳುವುದಕ್ಕೆ ಐ.ಪಿ. ಸೆಟ್ಟುಗಳನ್ನು ಕೊಡಬೇಕೆಂದು ಇಟ್ಟಿದ್ದೇವೆ. ಈ ದೃಷ್ಟಿಯಿಂದ ಅವರಿಗೆ ಪಂಪ್‌ಸೆಟ್ಟುಗಳನ್ನು ಕೊಡುವುದು ಸ್ವಲ್ಪ ಕಡಿಮೆಯಾಗಿದೆ. ಎಲ್ಲೆಲ್ಲಿ ಜನಗಳು ಸಾಕಷ್ಟು ಉತ್ಸಾಹದಿಂದ ಪಂಪುಸೆಟ್ಟುಗಳನ್ನು ಪಡೆಯುವುದಕ್ಕೆ ಮುರಿದೆ ಬಂದಿದ್ದಾರೆಯೋ ಅಂಥಾ ಕಡೆಗಳಲ್ಲೆಲ್ಲಾ ನಾವು ಹೆಚ್ಚು ಪಂಪ್‌ಸೆಟ್ಟುಗಳನ್ನು ಕೊಡುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆಂದು ನಾನು ಹೇಳುತ್ತೇನೆ. ಐ.ಪಿ. ಸೆಟ್ಟಿನಿಂದ ಇಂಡಿವಿಜುಯಲ್ ಸರ್ವಿಸಿಂಗ್ ಬರುತ್ತದೆ. ಐ.ಪಿ. ಸೆಟ್ಟುಗಳು ಬಾವಿಗಳಿಗೂ ಹಾಕಿಕೊಳ್ಳುವುದಕ್ಕೆ ಬರುತ್ತದೆ. ಕೋ-ಆಪರೇಟೀವ್ ಲಿಫ್ಟ್ ಇರಿಗೇಷನ್ ಸೊಸೈಟಿಯನ್ನು ಮಾಡಿಕೊಳ್ಳುತ್ತೇವೆಂದು ಜನಗಳು ಮುಂದೆ ಬಂದರೆ ಅವರಿಗೂ ಕೊಡುತ್ತೇವೆ. ಈಗ ನಾವು ಲಿಫ್ಟ್ ಇರಿಗೇಷನ್ ಯೋಜನೆಯನ್ನು ತೆಗೆದುಕೊಂಡಿದ್ದೇವೆ. ಈ ಯೋಜನೆಗಳಿಗೆ ಸಂಬಂಧಪಟ್ಟ ಹಾಗೆ ಈಗಾಗಲೇ ಕೇಂದ್ರ ಸರ್ಕಾರದವರು 31 ಯೋಜನೆಗಳನ್ನು ಮಂಜೂರು ಮಾಡಿದ್ದಾರೆ. ಆ ಪೈಕಿ 13-14 ಯೋಜನೆಗಳನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಕೊಟ್ಟಿದ್ದೇವೆ. ನಾನು ತಮಗೆ ಹೇಳುವುದಾದರೆ ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ಕೇಂದ್ರ ಸರ್ಕಾರದವರು ಸಾಕಷ್ಟು ಮಂಜೂರು ಮಾಡಿದ್ದಾರೆ. ಈ ವರ್ಷ ಇನ್ನೂ ಹೆಚ್ಚು ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ಕೇಂದ್ರ ಸರ್ಕಾರದಿಂದ ಮಂಜೂರು ಮಾಡಿಸಬೇಕೆಂದು ನಾವು ಅಭಿಪ್ರಾಯವನ್ನು ಇಟ್ಟುಕೊಂಡಿದ್ದೇವೆ.

ಇನ್ನು ಹಾಸನ ಜಿಲ್ಲೆಯಲ್ಲಿ ನದಿಗಳಿಗೆ ಹೊಳೆಗಳಿಗೆ ಜನಗಳು ಪಂಪುಸೆಟ್ಟುಗಳನ್ನು ಹಾಕಿಕೊಳ್ಳುವುದಕ್ಕೆ ತಯಾರಾಗಿದ್ದರೆ ಅವರಿಗೆ ನಾವು ಪಂಪುಸೆಟ್ಟುಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅದೇ ರೀತಿ ಅಲ್ಲಿ ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ಅಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ ಎಂದು ನಾನು ಈಗಾಗಲೇ ಹೇಳಿದ್ದೇನೆ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ನಾವು ಏನು ಕಾರ್ಯಕ್ರಮವನ್ನು ಹಾಕಿ ಕೊಂಡಿದ್ದೇವೆಯೋ ಅದರ ಪ್ರಕಾರ ನಾವು ಈ ಕೆಲಸಗಳನ್ನು ಮಾಡುತ್ತೇವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಒಂದು ಮಾತು ಅನೇಕ ಕಡೆ ಕೇಳಿ ಬರುತ್ತಿದೆ. ಅದೇನೆಂದರೆ, ಪಂಪುಸೆಟ್ಟುಗಳಿಗಾಗಿ ರೈತರು ಹಾಕಿದಂತಹ ಅರ್ಜಿಗಳು 2 ವರ್ಷ, 3 ವರ್ಷ 4 ವರ್ಷ 5 ವರ್ಷಗಳಿಂದ ಪೆಂಡಿಂಗ್ ಇವೆ ಎಂದು ಕೆಲವರು ಹೇಳಿದರು. ಈ ಅರ್ಜಿಗಳಲ್ಲಿ ಎರಡು ತರಹ ಇದೆ. ಕೆಲವರು ಪಂಪುಸೆಟ್ಟುಗಳನ್ನು ಖರೀದಿ ಮಾಡಿಕೊಂಡು ಬಂದು ಸರ್ವೀಸಿಂಗ್‌ಗೋಸ್ಕರವಳಿಗಿ ಅರ್ಜಿಯನ್ನು ಹಾಕಿದ್ದಾರೆ. ಅದು ಒಂದು ಕೆಟಗಿರಿ, ಎರಡನೆಯ ಕೆಟಗಿರಿ ಐ.ಪಿ. ಸೆಟ್ಟುಗಳಿಗಾಗಿ ಕೆಲವರು ಅರ್ಜಿಯನ್ನು ಹಾಕಿದ್ದಾರೆ. ಐ.ಪಿ. ಸೆಟ್ಟನ್ನು ಕೊಡುವ ಜವಾಬ್ದಾರಿ ಬೋರ್ಡಿಗೆ ಸಂಬಂಧಪಟ್ಟಿದ್ದಲ್ಲ. ತಹಶೀಲ್ದಾರರು ಸಾಲವನ್ನು ಮಂಜೂರು ಮಾಡುತ್ತಾರೆ. ಯಾರಿಗೆ ಸಾಲ ಮಂಜೂರಾಗಿರುತ್ತದೆಯೋ ಅವರು ಅಪ್ರೂವ್ಡ್ ಲಿಸ್ಟಿನಲ್ಲಿರತಕ್ಕ ಕಂಪನಿಗಳವರಲ್ಲಿ ಪಂಪು ಸೆಟ್ಟುಗಳನ್ನು ತೆಗೆದುಕೊಳ್ಳುತ್ತಾರೆ. ಅರ್ಜಿದಾರರು ತಮಗೆ ಯಾವ ಕಂಪೆನಿಯಲ್ಲಿ ತಯಾರಾದ ಪಂಪು ಸೆಟ್ಟುಬೇಕೆಂದು ತಮ್ಮ ಫಾರಂನಲ್ಲಿ ಬರೆದಿರುತ್ತಾರೆಯೋ, ಅದನ್ನು ಅವರಿಗೆ ಕೊಡಲಾಗುತ್ತದೆ. ಸರ್ಕಾರದಿಂದ ಸಾಲವನ್ನು ಪಡೆಯದೆ ಇರುವವರು ಯಾವ ಕಪೆಂನಿಯಲ್ಲಿ ತಯಾರಾದ ಪಂಪುಸೆಟ್ಟನ್ನು ಬೇಕಾದರೂ ತೆಗೆದುಕೊಳ್ಳಬಹುದು. ಆದರೆ ಸರ್ಕಾರದಿಂದ ಸಾಲವನ್ನು ಪಡೆದಿರತಕ್ಕವರು ಅಪ್ರೂವ್ಡ್ ಲಿಸ್ಟಿನಲ್ಲಿರತಕ್ಕ ಕಂಪೆನಿಗಳಲ್ಲಿ ತಯಾರಾಗಿರತಕ್ಕ ಪಂಪುಸೆಟ್ಟುಗಳನ್ನು ಮಾತ್ರ ತೆಗೆದುಕೊಳ್ಳಬೇಕು. ವಿದ್ಯುಚ್ಛಕ್ತಿಬೇಕೆಂದು ಎಷ್ಟು ಜನಗಳು ಅರ್ಜಿಯನ್ನು ಹಾಕಿರುತ್ತಾರೆಯೋ ಅವರೆಲ್ಲರಿಗೂ ಜವಾಬನ್ನು ಕೊಡುವುದು ಕಷ್ಟವಾಗುತ್ತದೆ. ಅದಕ್ಕಾಗಿ ಈಗ ನಾವು ಏನು ಮಾಡಿದ್ದೇವೆ ಎಂದರೆ, ಈಗ ಅರ್ಜಿಗಳನ್ನೇನೋ ತೆಗೆದುಕೊಳ್ಳುತ್ತೇವೆ ಆದರೆ ಅದಕ್ಕೆ ಡಿಪಾಜಿಟ್ ಇಲ್ಲ. ಒಂದು ಅರ್ಜಿಗೆ 10-20 ರೂಪಾಯಿ ಡಿಪಾಜಿಟ್ ತೆಗೆದುಕೊಂಡರೆ ಆಗ ವಿದ್ಯುಚ್ಛಕ್ತಿಯನ್ನು ಕೊಡುವ ಪ್ರಶ್ನೆ ಬರುತ್ತದೆ. ಮೊದಲು ಅರ್ಜಿಗಳನ್ನು ತೆಗೆದುಕೊಳ್ಳು

(ಶ್ರೀ ವೀರೇಂದ್ರ ಪಾಟೀಲ್)

ತ್ತೇವೆ, ಅವರಿಗೆ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಖರ್ಚು ಎಷ್ಟಾಗುತ್ತದೆ, ಎಷ್ಟು ಜನಗಳು ಅಲ್ಲಿ ವಿದ್ಯುಚಕ್ತಿಯನ್ನು ತೆಗೆದುಕೊಳ್ಳುವುದಕ್ಕೆ ಸಿದ್ಧರಾಗಿದ್ದಾರೆ, ಅವರಿಗೆ ಕೊಡುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ನೋಡಿಕೊಂಡು ಅವರಿಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆ. ಸಾಧ್ಯವಾದ ಮಟ್ಟಿಗೆ ಎಲ್ಲರಿಗೂ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಟ್ರಾನ್ಸ್‌ಮಿಷನ್ ಲೈನ್ ಸಬ್ ಟ್ರಾನ್ಸ್‌ಮಿಷನ್ ಲೈನ್ ಎಳೆಯುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಈ ಸಭೆಯಲ್ಲಿ ನಾನು ಅನೇಕ ಸಾರಿ ಹೇಳಿದ್ದೇನೆ. ವಿದ್ಯುಚ್ಛಕ್ತಿ ಸಾಮಾನುಗಳ ಕೊರತೆ ನಮಗೆ ಇದೆಯೆಂದು. ಅದು ನಮ್ಮ ಕೈಯಲ್ಲಿ ಇಲ್ಲ. ಅದು ಹೊರಗಡೆಯಿಂದ ನಮಗೆ ಬರಬೇಕು. ನಮಗೆ ಸ್ವಿಚ್ ಗೇರುಗಳು ಬೇಕು. ಟ್ರಾನ್ಸ್‌ಫಾರ್‌ಮರ್‌ಗಳು ಬೇಕು, ಪೋಲುಗಳು ಬೇಕು. ಈಗ ನಾವು ಮರದ ಪೋಲುಗಳನ್ನು ಉಪಯೋಗ ಮಾಡುತ್ತಿದ್ದೇವೆ. ಮತ್ತು ಕೆಲವರು ಖಾಸಗೀಯವರು ತಯಾರು ಮಾಡಿದಂತಹ ಆರ್. ಸಿ. ಸಿ. ಪೋಲುಗಳನ್ನು ಸಹ ಈಗ ನಾವು ಉಪಯೋಗ ಮಾಡುತ್ತಿದ್ದೇವೆ. ಕಂಡಕ್ಟರುಗಳು, ಟ್ರಾನ್ಸ್‌ಫಾರ್‌ಮರ್‌ಗಳು ಇವುಗಳನ್ನು ಒದಗಿಸಿಕೊಳ್ಳುವುದು ನಮಗೆ ಕಷ್ಟವಾಗಿದೆ. ಇದನ್ನು ನಿವಾರಣೆ ಮಾಡುವುದಕ್ಕೆ ಈಗ ನಾವು ಪ್ರಯತ್ನ ಮಾಡುತ್ತಿದ್ದೇವೆ.

ಆದರೆ ಹೆಚ್ಚಿನ ಮಟ್ಟಿಗೆ ಕಂಡಕ್ಟರ್‌ಗಳಿಗೆ ಕಷ್ಟ ಇದೆ. ಅದನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಬಹುಶಃ ಕೆಲವು ಜನ ಪ್ರಶ್ನೆ ಕೇಳಬಹುದು. ಅದನ್ನು ಮೊದಲು ತಿಳಿದು ಕೊಂಡಿರಲಿಲ್ಲವೇ ? ಏತಕ್ಕೆ ಯೋಜನೆ ಮಾಡಿಲ್ಲ ಎಂದು. ಅದಕ್ಕಾಗಿ ನಾನು ಹೇಳುತ್ತೇನೆ. 2 ಎ. ಸಿ. ಎಸ್. ಆರ್. ಕಂಡಕ್ಟರ್‌ಗೆ 47,600 ಕಿಲೋ ಮಿಟರ್ಸ್‌ಗೆ ಆರ್ಡರ್ ಕೊಟ್ಟಿದ್ದೇವೆ. 1966-67ರಲ್ಲಿ 16 ಸಾವಿರ ಕಿಲೋ ಮೀಟರ್ಸ್ ಬರುತ್ತದೆ. ಆರ್ಡರ್ ಕೊಟ್ಟ ಡೇಟ್ ಇಲ್ಲಿ ಇಲ್ಲ. ಅದೇ ರೀತಿ 4 ಎ. ಸಿ. ಎಸ್. ಆರ್. ಕಂಡಕ್ಟರ್ 1,16,400 ಕಿಲೋ ಮೀಟರ್‌ಗೆ ಆರ್ಡರ್ ಮಾಡಿದ್ದೇವೆ. 10,2?0 ಟ್ರಾನ್ಸ್‌ಫಾರ್ಮರಿಗೆ ಆರ್ಡರ್ ಮಾಡಿದೆ. ಲೈಟನಿಂಗ್ ಅರೆಸ್ಟರ್ಸ್ 19,750 ನಂಬರ್ಸ್‌ಗೆ ಆರ್ಡರ್ ಮಾಡಿದ್ದೇವೆ. ಇನ್ಸುಲೇಟರ್ಸ್ 8 ಲಕ್ಷ 33 ಸಾವಿರಕ್ಕೆ ಆರ್ಡರ್ ಮಾಡಿದ್ದೇವೆ. ಪೋಲ್ಸ್ 2 ಲಕ್ಷಕ್ಕೆ ಆರ್ಡರ್ ಮಾಡಿದ್ದೇವೆ.

7-00 P.M.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ವಿದ್ಯುಚ್ಛಕ್ತಿ ಕನ್‌ಸಮ್‌ಷನ್ ಆಗಬೇಕಾದರೆ, ಮೆಟೀರಿಯಲ್ಸ್ ಬೇಕು. ವೇರಿಯಸ್ ಮೆಟೀರಿಯಲ್ಸ್ ಯಾವಾಗ ಇಂಡೆಂಟ್ ಮಾಡಿದ್ದೀರಿ ? ಅದನ್ನು ಇಲ್ಲಿ ಒದಿದ್ದೀರಿ ಅದೆಲ್ಲವೂ ನೀವು ಮುದುಕರು ಆದಾಗಲೋ ಅಥವಾ ನಿಮ್ಮ ಮೊಮ್ಮಕ್ಕಳ ಕಾಲಕ್ಕೋ ಬರುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ಜೂನ್ ತಿಂಗಳಿನಲ್ಲಿ ಮಾಡಿಲ್ಲ. ಮೊದಲೇ ಆರ್ಡರ್ ಮಾಡಿದ್ದೇವೆ. ಡೆಫನಟ್ ಆಗಿ ಡೇಟ್ ಬೇಕಾದರೆ ಅದನ್ನು ಕೊಡುವುದಕ್ಕೆ ತಯಾರಾಗಿದ್ದೇನೆ. ಇವೊತ್ತು ನನ್ನ ಮುಂದೆ ಇಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ.—ಉಡುಪಿಗೆ ಇನ್ಸುಲೇಟರ್ಸ್ ಬಗ್ಗೆ ಆರ್ಡರ್ ಮಾಡಿ 6 ತಿಂಗಳು ಆಯಿತು. ಅದು ಇದುವರೆಗೂ ಬಂದಿಲ್ಲ.

ಶ್ರೀ ವೀರೇಂದ್ರಪಾಟೀಲ್.—ಆರ್ಡರ್ ಮಾಡಿದ್ದೇವೆ. 5 ಲಕ್ಷ 61 ಸಾವಿರ ಇನ್ಸುಲೇಟರ್ 1966-67ರಲ್ಲಿ ಬರುತ್ತದೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಮಾರ್ಚಿಯವರಿಗೆ ವರ್ಷ ಇದೆ.

ಶ್ರೀ ವಿರೇಂದ್ರಪಾಟೀಲ್.—ಆರ್ಡರ್ ಮಾಡುವುದರಲ್ಲಿ ಹಿಂದೆ ಮುಂದೆ ನೋಡಿಲ್ಲ. ಪ್ರತಿಯೊಂದು ಸ್ಟೇಟಿಗೂ ಮೆಟೀರಿಯಲ್ ಬೇಕು. 1966-67ರಲ್ಲಿ 2 ಎ.ಸಿ.ಎಸ್.ಆರ್. ಕಂಡಕ್ಟರ್ಸ್ 12 ಸಾವಿರ ಕಿಲೋಮೀಟರ್ಸ್ ಈ ವರ್ಷದ ಅಂತ್ಯದೊಳಗೆ ಬರುತ್ತದೆ. ಮಂತ್‌ವೈಸ್ ಪ್ರೋಗ್ರಾಂ ಮಾಡಿರುತ್ತೇವೆ ಡೆಸ್ಪಾರ್ಜಿಂಗ್ ಸ್ಟೇಷನ್ನಿನಿಂದ ಹೋಗುತ್ತದೆ. ಈಗಾಗಲೇ ಬಂದಿದೆ ಎಷ್ಟು ಬಂದಿದೆ ಎನ್ನುವ ವಿವರ ಬೇಕಾದರೆ ಕೊಡುವುದಕ್ಕೆ ತಯಾರಾಗಿದ್ದೇನೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಬೇಕಾದ ಮೆಟೀರಿಯಲ್ಸ್ ಕಳುಹಿಸಿಕೊಡುವುದಕ್ಕೆ ತಯಾರು ಇದ್ದೀರಾ?

ಶ್ರೀ ವೀರೇಂದ್ರ ಪಾಟೀಲ್.—ಖರೀದಿ ಮಾಡಲು ತಯಾರು ಇದ್ದೇವೆ. ಪರ್ಚೇಸ್ ಮಾಡುವುದಕ್ಕೂ ತಯಾರಾಗಿದ್ದೇವೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಇದ್ದುದರಲ್ಲಿ ಕಳುಹಿಸಿಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಪ್ಲಾನ್ ಮಾಡಿ ಪ್ರತಿಯೊಂದು ಕಡೆಯೂ ಮೆಟೀರಿಯಲ್ಸ್ ಹೋಗುತ್ತಾ ಇದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎಷ್ಟು ಪವರ್ ಪ್ರೊಡ್ಯೂಸ್ ಮಾಡುತ್ತಾ ಇದ್ದೇವೋ ಅದಕ್ಕೆ ಪ್ರಪೋರ್ಷನೇಟ್ ಆಗಿ ಕೇಂದ್ರ ಸರ್ಕಾರದವರು ನಮಗೆ ಮೆಟೀರಿಯಲ್ಸ್ ಕೊಡುತ್ತಾ ಇದ್ದಾರೋ ಇಲ್ಲವೇ ಸ್ಟೇಟ್‌ವೈಸ್ ಈಕ್ವಲ್ ಆಗಿ ಡಿಸ್ಟ್ರಿಬ್ಯೂಟ್ ಮಾಡುತ್ತಾ ಇದ್ದಾರೋ ?

ಶ್ರೀ ವೀರೇಂದ್ರಪಾಟೀಲ್.—ಪವರ್ ಎಷ್ಟು ಪ್ರೊಡ್ಯೂರ್ಷ ಮಾಡುತ್ತೇವೋ, ಅದಕ್ಕೆ ಪ್ರಪೋರ್ಷನೇಟ್ ಆಗಿ ಮೆಟೀರಿಯಲ್ಸ್ ಕೊಡುತ್ತಾರೆ ಎಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ನಮ್ಮ ರಿಕ್ವೈರ್‌ಮೆಂಟ್ ಪ್ಲಾನ್‌ನಲ್ಲಿ ಇದೆ. ಒಂದು ಲಕ್ಷ ಬಾವಿಗಳಿಗೆ ಐ.ಪಿ. ಸೆಟ್. ಕೊಡುತ್ತೇವೆ, 4 ಸಾವಿರ ಹಳ್ಳಿಗಳಿಗೆ ರೂರಲ್ ಎಲೆಕ್ಟ್ರಿಫಿಕೇಷನ್ ಪ್ರೋಗ್ರಾಂ ಇಟ್ಟುಕೊಂಡಿದ್ದೇವೆ ಎಂದು ಹೇಳಿದ್ದೇವೆ ನಮ್ಮ ರಿಕ್ವೈರ್‌ಮೆಂಟ್ ನೋಡಿಕೊಂಡು ಅಲಾಟ್ ಮಾಡುತ್ತಾರೆ. ಅದನ್ನು ಮ್ಯಾನ್ಯುಫ್ಯಾಕ್ಚರರಿಂದ ತರಬೇಕು. ಕೆಲವು ಅಲ್ಯುಮಿನಿಯಮ್ ಕ್ವೋಟಾ ಡೈರಕ್ಟ್ ಆಗಿ ಅಲಾಟ್ ಮಾಡುತ್ತಾರೆ. ಹಾಗೆ ಅಲಾಟ್ ಮಾಡಿದರೆ ಯಾರಿಗೆ ಕಂಡಕ್ಟರ್ಸ್ ಮತ್ತು ವೈರ್ಸ್ ಬೇಕೋ ಅವರಿಗೆ ಕೊಡಲಾರದೆ ಇರಬಹುದು. ಆದ್ದರಿಂದ ಕ್ವೋಟಾವನ್ನು ನಮಗೇ ಕೊಡಿ ಅದನ್ನು ಮ್ಯಾನ್ಯುಫ್ಯಾಕ್ಚರ್ರ್ಸಿಗೆ ಕೊಟ್ಟು ಅವರಿಂದ ವೈರ್ ಮಾಡಿಸಿ ತರಿಸುತ್ತೇವೆಂದು ಕೇಂದ್ರಕ್ಕೆ ಈಗಾಗಲೇ ಬರೆದು ಕೊಂಡಿದ್ದೇವೆ. ಅಂತಹ ಪರಿಸ್ಥಿತಿ ಇದೆ. ಕಷ್ಟ ಏನು ಇದೆ ಅದನ್ನು ನಿವಾರಣೆ ಮಾಡುವ ಪ್ರಯತ್ನ ಮಾಡುತ್ತಿದ್ದೇವೆ. ಬಹಳ ದಿವಸಗಳವರೆಗೂ ಈ ಕಂಡಕ್ಟರ್ ಮತ್ತು ಲೈನಿನ ಮೆಟೀರಿಯಲ್ಸ್ ಕಷ್ಟ ಉಳಿಯಲಿಕ್ಕಿಲ್ಲ. ಇಂಪೋರ್ಟ್ ಲಿಬರಲೈಸ್ ಮಾಡಿರುವುದರಿಂದ ಅಷ್ಟು ಕಷ್ಟ ಆಗಲಿಕ್ಕಿಲ್ಲ; ಎಂದು ಅನಿಸುತ್ತದೆ. ಒಂದು ಮಾತು ಕೆಲವು ಸದಸ್ಯರು ಹೇಳಿದರು. ಇಲ್ಲಿ ಅನೇಕ ಜನ 15—20 ವರ್ಷಗಳಿಂದ ಟೆಂಪೊರರಿ ಲೇಬರರ್ಸ್ ಆಗಿ ಉಳಿದು ಕೊಂಡಿದ್ದಾರೆ. ಎಂದು.

ಶ್ರೀ ಬಿ. ಭಾಸ್ಕರ ಶೆಟ್ಟಿ.—27 ಸಾವಿರ ಜನ.

ಶ್ರೀ ವೀರೇಂದ್ರ ಪಾಟೀಲ್.—ಅವರಿಗೆ ಏನು ಡೇಲಿ ವೇಜಸ್ ಕೊಡುತ್ತಾ ಇದ್ದೇವೆ, ಅದು ಕಡಿಮೆ. ಎಲೆಕ್ಟ್ರಿಸಿಟಿ ಬೋರ್ಡಿನವರು ಅವರಿಗೆ ಅನ್ಯಾಯ ಮಾಡುತ್ತಾ ಇದ್ದಾರೆ ಎಂದು ಹೇಳಿದರು ಟೆಂಪೊರರಿ ಆಗಿ ಯಾರು ಇದ್ದಾರೆ, ನಮಗೆ ಅವರ ಬಗ್ಗೆ ಸಹಾನುಭೂತಿ ಇದೆ ಎಂದು ಬಿಚ್ಚು ಮನಸ್ಸಿನಿಂದ ಹೇಳುತ್ತೇನೆ. ಆದರೆ ಒಂದು ಪ್ರಶ್ನೆ ತಾವು ವಿಚಾರ ಮಾಡಬೇಕಾಗಿದೆ. ತಾವು ಹೇಳಿದಂತೆ 12—13 ಸಾವಿರ ಹಂಗಾಮಿ ನೌಕರರು ಇಲ್ಲ. ಇವೊತ್ತು 8—9 ಸಾವಿರ ಹಂಗಾಮಿ ನೌಕರರು ಇದ್ದಾರೆ. 8—9 ಸಾವಿರ ಹಂಗಾಮಿ ನೌಕರರ ಪೈಕಿ ಬಹುಶಃ ಕೆಲವು ಜನ ಬಿಟ್ಟರೆ ಅವರೆಲ್ಲಾ ಟ್ರಾನ್ಸ್‌ಮಿಷನ್ ಲೈನು ಕಟ್ಟುವ ಕೆಲಸದಲ್ಲಿ ನಿರತರಾಗಿದ್ದಾರೆ. ಈಗ ಏನಾಗಿದೆ ಎಂದರೆ, ಪಿ. ಡಬ್ಲ್ಯು. ಡಿ. ಯವರು ಅನೇಕ ಕೆಲಸಗಳನ್ನು 99 ಪರ್ಸೆಂಟು ಕಂಟ್ರಾಕ್ಟರರಿಂದ ಕೆಲಸ ಮಾಡಿಸುತ್ತಾ ಇದ್ದಾರೆ. ಲೇಬರ್ ಇಡುವಂಥಾದ್ದು ಇಲ್ಲವೇ ಇಲ್ಲ. ಸೂಪರ್‌ವಿಷನ್ ಮಾತ್ರ ಮಾಡುತ್ತಾರೆ. ಟ್ರಾನ್ಸ್‌ಮಿಷನ್‌ಲೈನು ಕಟ್ಟುವುದಕ್ಕೆ ಕಂಟ್ರಾಕ್ಟ್ ಕೊಡುವ ಹಾಗೆ ಇಲ್ಲ. ಒಂದೆರಡು ಕಡೆ ಕಂಟ್ರಾಕ್ಟ್ ಕೊಟ್ಟು ಕೈಸುಟ್ಟು ಕೊಂಡಿದ್ದೇವೆ. ಆದ್ದರಿಂದ ನಮ್ಮವರೇ ಮಾಡುತ್ತಾರೆ. ಟ್ರಾನ್ಸ್‌ಮಿಷನ್ ಲೈನಿನ ಕೆಲಸ ಮುಗಿದ ಮೇಲೆ ಏನು ಮಾಡುವುದು ಎಂದು ಪ್ರಶ್ನೆ ಬರುತ್ತದೆ. 220 ಕೆ. ವಿ. ಲೈನ್ ಹಾಕಿಕೊಂಡು ಹೋಗುವುದಕ್ಕಾಗುವುದಿಲ್ಲ. ಅದಕ್ಕೆ ಒಂದು ಲಿಮಿಟ್ ಇದೆ. ಹಳೇ ಮೈಸೂರಿನಲ್ಲಿ 220 ಕೆ. ವಿ. ಲೈನ್ ಹಾಕಿ ಎಂದು ಯಾರು ಕೇಳುತ್ತಾರೆ? ಅಲ್ಲಿ ಟ್ರಾನ್ಸ್‌ಮಿಷನ್ ಲೈನು ನೆಟ್ ವರ್ಕ್ಸ್ ಇದೆ. ಅದೇ ರೀತಿ 220, 33, ಮತ್ತು 66 ಕೆ. ವಿ. ಲೈನ್ ಕೆಲಸ ಮುಗಿದುಹೋಗಿದೆ. 11ರದ್ದು ಸ್ವಲ್ಪಮಟ್ಟಿಗೆ ಕೆಲಸ ಉಳಿದಿರಬಹುದು. ಇವರು ಮಾಡಿದಂಥ ಕೆಲಸ ಮುಗಿದ ಮೇಲೆ, ಏನು ಮಾಡಬೇಕು 8—9 ಸಾವಿರ ಜನ ಮಾಡುವಂಥ ಕೆಲಸ ಮುಗಿದ ಮೇಲೆ ಅವರಿಂದ ಏನು ಕೆಲಸ ತೆಗೆದುಕೊಳ್ಳಬೇಕು ಎನ್ನುವ ವಿಚಾರ ಬರುತ್ತದೆ. ಇದು ಗವರ್ನ್‌ಮೆಂಟ್ ಕನ್‌ಸರ್ನ್ ಒಬ್ಬರದು ಅಲ್ಲ ಅವರ ಬಾಯಿ ಬಡಿದು ಲಾಭ ಮಾಡಿಕೊಳ್ಳಬೇಕು ಎನ್ನುವ ವ್ಯಕ್ತಿಗತ ಲಾಭದ ಪ್ರಶ್ನೆಯಲ್ಲ. ಅವರಿಗೆ ಕೊಡುವ ವೇಜಸ್ ಫೇರ್ ವೇಜಸ್ ಆಗಿರಬೇಕು ಎನ್ನುವ ದೃಷ್ಟಿಯಿಂದ, ವೇಜಸ್ ನಿಗದಿ ಮಾಡುವ ಅಧಿಕಾರವನ್ನು ಸೂಪರಿಂಟೆಂಡಿಂಗ್ ಇಂಜನೀಯರಿಗೆ ಕೊಟ್ಟಿದೆ. ಪ್ರತಿಯೊಂದು ಜಿಲ್ಲೆಯ ಮಾರ್ಕೆಟ್ ರೇಟು ಮತ್ತು ಲಿವಿಂಗ್ ಕಾಸ್ಟ್ ಲೆಕ್ಕಕ್ಕೆ ತೆಗೆದು ಕೊಂಡು ಎಷ್ಟರಮಟ್ಟಿಗೆ ವೇಜಸ್ ಕೊಡಬೇಕು ಎನ್ನುವ ತೀರ್ಮಾನ ಮಾಡಬೇಕು ಎಂದು ಹೇಳಿದ್ದೇವೆ. ಆರೀತಿ ಮಾಡುತ್ತಾ ಇದ್ದೇವೆ. ಪ್ರಾವಿಡೆಂಟ್ ಫಂಡಿನ ಅನುಕೂಲತೆಗಳನ್ನು ಕೂಡ ಕೊಡುತ್ತಾ ಇದ್ದೇವೆ, ಪರ್ಮನೆಂಟ್ ಮಾಡುವುದರಿಂದ ಅವರು ಮಾಡಿದ ಕೆಲಸ ಮುಗಿದ ಮೇಲೆ,

(ಶ್ರೀ ವೀರೇಂದ್ರ ಪಾಟೀಲ್)

ಅವರ ಲೈಯಬಿಲಿಟಿ ನಮ್ಮ ತಲೆಯಮೇಲೆ ಬೀಳುತ್ತದೆ. ಏನೂ ಕೆಲಸ ಇಲ್ಲದೆ ಸೂಪರ್‌ನ್ಯೂಮರಿಯಾಗಿ ಇಟ್ಟು ಸಂಬಳ ಕೊಡುವುದನ್ನು ಬೋರ್ಡ್ ಮಾಡುವುದಕ್ಕೆ ಸಾಧ್ಯವಿಲ್ಲ, ಸರ್ಕಾರ ಮಾಡಬೇಕು. ಈ ಪ್ರಶ್ನೆ ಬಗ್ಗೆ ಎಲ್ಲರ ಸಹಾನುಭೂತಿಯೂ ಇದೆಯೆಂದು ಹೇಳುತ್ತೇನೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಮುಂದೆ ಕೆಲಸ ಇರುವುದಿಲ್ಲವೇ? ಮುಂದೆ ಬೇಕಾದಷ್ಟು ಅಭಿವೃದ್ಧಿ ಕಾರ್ಯ ನಡೆಯುವುದಿಲ್ಲವೆ?

ಶ್ರೀ ವೀರೇಂದ್ರ ಪಾಟೀಲ್.—ಟ್ರಾನ್ಸ್‌ಮಿಷನ್ ಲೈನ್ ಮುಗಿದ ಮೇಲೆ ಮುಂದೆ ನಡೆಯುವಂಥಾದ್ದು ಮೆಯಿಂಟನೆನ್ಸ್ ಕೆಲಸ. ಅದರ ಸಲುವಾಗಿ ಈ ಜನಗಳನ್ನು ತೆಗೆದುಕೊಳ್ಳಬೇಕು ಹೊರಗಿನವರನ್ನು ತೆಗೆದುಕೊಳ್ಳುವ ಹಾಗಿಲ್ಲ, ಸ್ವಲ್ಪಮಟ್ಟಿಗೆ ಐದು ಪರ್ಸೆಂಟು ಅಥವಾ 10 ಪರ್ಸೆಂಟು ಅಬ್ಸಾರ್ಬ್ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬಹುದು, ಎಲ್ಲರನ್ನೂ ಪರ್ಮನೆಂಟ್ ಮಾಡಲು ಕಷ್ಟವಾಗುತ್ತದೆ. ಎಲ್ಲಾ ಲೈನು ಹಾಕಿದ ಮೇಲೆ ಟ್ರಾನ್ಸ್‌ಮಿಷನ್ ಲೈನ್ ಹಾಕಿದ ಮೇಲೆ ಮೆಯಿಂಟೆನನ್ಸ್ ಸಲುವಾಗಿ ಸ್ಟಾಫ್ ಬೇಕಾದಾಗ, ಫೀಲ್ಡ್‌ಮನ್ ಮತ್ತು ಲೈನ್‌ಮನ್ ಆಗಿ ಯಾರು ಉದ್ಯೋಗ ಮಾಡಿದ್ದಾರೋ ಅವರನ್ನೇ ಅಬ್‌ಸಾರ್ಬ್ ಮಾಡಿಕೊಳ್ಳುವ ಪ್ರಯತ್ನ ಮಾಡುತ್ತೇವೆ. ಹೊರಗಡೆಯವರನ್ನು ತೆಗೆದುಕೊಂಡು ಟೆಂಪೊರರಿಯವರನ್ನು ಹಾಗೆಯೇ ಇಟ್ಟುಕೊಳ್ಳಬೇಕೆಂದು ಇಲ್ಲ. ಪೋಸ್ಟ್ ಕ್ರಿಯೇಟ್ ಆಗಿದ್ದರೆ, ಇವರ ವಿಚಾರ ಮಾಡುತ್ತೇನೆ. ಹೊರಗಿನವರನ್ನು ಹೊಸದಾಗಿ ನೇಮಿಸಲು ವಿಚಾರ ಮಾಡುತ್ತಾ ಇಲ್ಲ.

ಈಗ ಈ ಜುರಿಸ್‌ಡಿಕ್ಷನ್ ಬಗ್ಗೆ ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಒಂದು ತಾಲ್ಲೂಕಿನಲ್ಲಿ ಯಾವ ರೀತಿ ಡಿವಿಜನ್ಸ್ ಸಬ್ ಡಿವಿಜನ್ಸ್ ಮಾಡಬೇಕೆಂದೂ, ಅದರಿಂದ ನಮ್ಮ ಅಧಿಕಾರಿಗಳಿಗೆ ಅನುಕೂಲವಾಗುತ್ತದೆಂದೂ ತಿಳಿಸಿದ್ದಾರೆ. ನಾವು ಈಗ ಮಾಡಿದ ಪದ್ಧತಿಯಿಂದ ಜನರಿಗೆ ಕಷ್ಟವಾಗಲಾರದೆಂದು ನನ್ನ ಅಭಿಪ್ರಾಯ. ಒಂದು ವೇಳೆ ಅಂತ ಅನಾನುಕೂಲವಾದರೆ ನಾನು ಖಂಡಿತವಾಗಿಯೂ ಅದನ್ನು ಸರಿಪಡಿಸುವುದಕ್ಕೆ ಬೋರ್ಡಿಗೆ ತಿಳಿಸುತ್ತೇನೆ.

ಇನ್ನೊಬ್ಬ ಮಾನ್ಯ ಸದಸ್ಯರು ಐ. ಪಿ. ಸೆಟ್ಸ್‌ನ್ನು ಹೈರ್‌ಪರ್ಚೆಸಿನಲ್ಲಿ ಪಡೆದವರಿಂದ ಅಲಾಟ್ ಮಾಡಿದ ತಾರೀಕಿನಿಂದ ವಸೂಲು ಮಾಡುತ್ತಿದ್ದಾರೆ, ಎಂದು. ಆದರೆ, ಅದು ಅಲಾಟ್ ಮಾಡಿದ ತಾರೀಕಿನಿಂದ ವಸೂಲು ಮಾಡುವುದಲ್ಲ. ಸರ್ವಿಸಿಂಗ್ ಕೊಡುವ ತಾರೀಖಿನಿಂದ ಒಂದು ವೇಳೆ ಯಾರಾದರೂ ತಪ್ಪು ಮಾಡಿದರೆ, ಅದನ್ನು ನನ್ನ ಗಮನಕ್ಕೆ ತಂದಲ್ಲಿ, ನಾನು ರೈತರಿಗೆ ಅನಾನುಕೂಲವಾಗದ ರೀತಿಯಲ್ಲಿ ಸರಿಪಡಿಸುತ್ತೇನೆ.

ಇನ್ನು ತರ್ಮಲ್ ಸ್ಟೇಶನ್ ವಿಚಾರ. ಈಗ ತರ್ಮಲ್ ಸ್ಟೇಶನ್ಸ್ ಯಾವುದೂ ಇಲ್ಲ. ಕೆಲವು ಕಡೆ ಡೀಸೆಲ್ ಸ್ಟೇಶನ್ಸ್ ಇತ್ತು. ಈಗಾಗಲೇ ಎರಡು ಮೂರು ಸ್ಟೇಶನುಗಳನ್ನು ರಾಮದುರ್ಗ ಮತ್ತು ಅತೇನಿಗಳಲ್ಲಿ ನ್ಯಾಶನಲೈಸ್ ಮಾಡಿದ್ದಾರೆ, ಇದನ್ನು ನ್ಯಾಶನಲೈಸ್ ಮಾಡುವಾಗ ಅವರೇ ವಹಿಸಿಕೊಡುವುದಾದರೆ ಏನೂ ಕಷ್ಟವಿಲ್ಲ. ಇಲ್ಲದಿದ್ದರೆ ನ್ಯಾಶನಲೈಸ್ ಪ್ರೋಗ್ರಾಂ ಪ್ರಾರಂಭ ಮಾಡಬೇಕಾಗುತ್ತದೆ. ಇದಕ್ಕೆ ಕಂಪನ್ಸೇಶನ್ ಮುಂತಾದುವುಗಳನ್ನು ಕೊಡಬೇಕಾಗುತ್ತದೆ; ಅದ್ದರಿಂದ ನಾವು ಪವರ್ ಕೊಡುತ್ತಿದ್ದೇವೆ, ನೀವು ಕನ್‌ಸ್ಯೂಮರ್ಸಿಗೆ ಸಪ್ಲೈ ಮಾಡಿ ಎಂದು ಹೇಳಿದ್ದೇವೆ. ಇವರ ದರವು ಒಬ್ಬ ಲೈಸೆನ್ಸಿ ಏನು ಚಾರ್ಜು ಮಾಡುತ್ತಾನೆ, ಅದಕ್ಕಿಂತಲೂ ಕಡಿಮೆಯಾಗಿದೆ. ಅದಕ್ಕೂ ಕಾನೂನಿನಲ್ಲಿ ಒಂದು ಪ್ರೊವಿಜನ್ ಇದೆ. ಯಾರಾದರೂ ಮನಸ್ಸು ಬಂದಂತೆ ದರ ಏರಿಸಿದರೆ, ಅವರನ್ನು ಕಾನೂನು ಪ್ರಕಾರ ಶಿಕ್ಷಿಸಬಹುದು. ಆ ನಿಗದಿ ಮಾಡಿದ ದರದ ಪ್ರಕಾರ ಅವರು ದರ ಹಾಕಬೇಕು, ಅದಕ್ಕಿಂತ ಹೆಚ್ಚು ಮಾಡುವುದಕ್ಕಾಗುವುದಿಲ್ಲ. ನಮಗೆ ಈ ರೀತಿಯಿಂದ ಹೆಚ್ಚು ಹಣ ಬಂದರೆ, ಇನ್ನೂ ಹೆಚ್ಚು ಹಳ್ಳಿಗಳಿಗೆ ಐ. ಪಿ. ಸೆಟ್ಟುಗಳಿಗೆ ಸರ್ವಿಸ ಕೊಡುವುದಕ್ಕೆ ಅನುಕೂಲವಾಗುತ್ತದೆ, ಅದ್ದರಿಂದ ರಾಷ್ಟ್ರೀಕರಣ ಬೇಡ. ಮತ್ತು ಅದಕ್ಕೆ ಖರ್ಚು ಮಾಡುವುದು ಬೇಡ ಎಂಬ ವಿಚಾರ ಇರುವುದರಿಂದ ಅದನ್ನು ಏನೂ ಮಾಡುವುದಕ್ಕಾಗುವುದಿಲ್ಲ. ಕನ್‌ಸೂಮರ್ಸಿಗೆ ಕಷ್ಟ ಕೊಟ್ಟರೆ, ಅದಕ್ಕೆ ಶಿಕ್ಷೆ ಮಾಡಲು ಎಲೆಕ್ಟ್ರಿಸಿಟಿ ಆಕ್ಟಿನಲ್ಲಿ ಸಾಕಷ್ಟು ಅಧಿಕಾರವಿದೆ; ಅದರ ಪ್ರಕಾರ ಕ್ರಮ ತೆಗೆದುಕೊಳ್ಳುತ್ತಾರೆ.

ಇನ್ನು ಸ್ಟೋರ್ಸ್ ಬಗ್ಗೆ ಕೆಲವು ಮಾನ್ಯ ಸದಸ್ಯರಗಳು ಕೆಲವು ವಿಚಾರಗಳನ್ನು ಹೇಳಿದರು. ಹಿಂದೆ ಎರಡು ಸಾವಿರ ಬೆಲೆ ಬಾಳುವಂಥ ಸಾಮಗ್ರಿಗಳನ್ನು ಇಡುವುದಕ್ಕೆ ಅಧಿಕಾರ ಕೊಟ್ಟಿತ್ತು ಈಗ ಅದರಲ್ಲಿರುವ ಕಷ್ಟವನ್ನು ತಪ್ಪಿಸುವುದಕ್ಕೋಸ್ಕರ ಈ ರೀತಿ ಮಾಡಿದ್ದಾರೆ ಮತ್ತು ಶ್ರೀಮಾನ್ ರೇವಣ್ಣ ಸಿದ್ದಪ್ಪನವರು ಬಹುಶಃ ಕಂಬಗಳು ಮಾಯವಾಗಬಹುದು, ಲೈನ್ಸ್ ಮಾಯವಾಗಬಹುದು

ಎನ್ನುವ ಭಯವನ್ನು ವ್ಯಕ್ತಪಡಿಸಿದರು. ಈಗ ಒಂದೊಂದುಕಡೆ ಸ್ಟಾಕ್ ತೆಗೆದು ಒಂದು ಕೇಂದ್ರವಾಗಿ ಮಾಡಿದ್ದಾರೆ. ಇದರಿಂದ ಕಷ್ಟವಾಗುತ್ತದೆಂದು ಕೆಲವರು ಹೇಳಿದ್ದಾರೆ. ಆದರೆ ಇದನ್ನು ಮೊನ್ನೆ ಮೊನ್ನೆ ಜಾರಿಗೆ ತಂದಿದ್ದಾರಷ್ಟೆ. ಒಂದು ವೇಳೆ ಇದರಲ್ಲಿ ಕಷ್ಟ ಕಂಡು ಬಂದರೂ ಅದನ್ನು ಸರಿಪಡಿಸುವುದಕ್ಕೆ ನಾವು ಹಿಂದುಮುಂದು ನೋಡುವುದಿಲ್ಲ, ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಒಬ್ಬರು ಹೇಳಿದರು, ನೀವು ಏಕೆ ಸಾಮಾಗ್ರಿಗಳನ್ನು ತಯಾರು ಮಾಡಬಾರದು ಎಂದು. ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ, ಟ್ರಾನ್ಸ್‌ಫಾರ್ಮರ್ ಮತ್ತು ದೊಡ್ಡ ದೊಡ್ಡ ಸ್ವಿಚ್ ಗೇರ್ಸ್, ಕಂಡಕ್ಟರ್ಸ್ ಮೊದಲಾದವುಗಳನ್ನು ಮಾಡುವುದಕ್ಕೆ ಕೋಟ್ಯಾಂತರ ರೂಪಾಯಿ ಬೇಕಾಗುತ್ತದೆ. ಪೋಲು ತಯಾರು ನಾವೇ ಮಾಡಬೇಕಾಗುತ್ತದೆ ಮತ್ತು ಕ್ಯಾಸ್ಟ್ ಐರನ್ ನಾವೇ ಮಾಡಬೇಕಾಗುತ್ತದೆ. ಸಣ್ಣ ಪುಟ್ಟ ಟವರ್ಸ್ ಟೂಲ್ ಬಾಕ್ಸ್, ಹಾಗೂ ಇನ್ನಿತರ ಸಾಮಗ್ರಿಗಳನ್ನು ನಾವೇ ತಯಾರು ಮಾಡಿಕೊಳ್ಳುತ್ತೇವೆಂದು ನಾನು ತಮ್ಮ ಮುಂದೆ ಹೇಳುತ್ತೇನೆ.

ಇನ್ನು ಶರಾವತಿಯ 9—10 ಯೂನಿಟ್ಟಿನ ಬಗ್ಗೆ ಒಬ್ಬರು ಹೇಳಿದರು. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಅಗಾಲೇ ಹೇಳಿದ್ದಾರೆ. ಬಹುಶಃ ಇದಕ್ಕೆ ಬೇಕಾಗುವಂತಹ ಸಾಮಗ್ರಿಗಳನ್ನು ಇಂಪೋರ್ಟ್ ಮಾಡಬೇಕಾಗುವ ಒಂದು ಪರಿಸ್ಥಿತಿ ಇರುವುದರಿಂದ ಕೇಂದ್ರ ಸರ್ಕಾರದವರು ಸ್ವಲ್ಪ ಹಿಂದೆ ಮುಂದೆ ನೋಡುತ್ತಿದ್ದಾರೆ. ಇಲ್ಲಿ ಎಲ್ಲಾ ಸಿವಿಲ್ ಇಂಜಿನಿಯರಿಂಗ್ ಕೆಲಸಗಳನ್ನು ಮಾಡಿಕೊಂಡಿದ್ದೇವೆ. ಈಗಾಗಲೆ 40-50 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುವಾಗ, 9-10 ಯುನಿಟ್ಟು ಬಾರದಿದ್ದರೆ ನಮಗೆ ಕಷ್ಟವಾಗುತ್ತದೆ. ಬಹುಶಃ ಇವರಿಗೆ ಏನಾದರೂ ಸಂಶಯ ಇರಬಹುದು, ಏನೆಂದರೆ ಇವರಲ್ಲ ಪವರ್ ಲೋಡ್ ಬಿಲ್ಡ್ ಅಪ್ ಅಗಿಲ್ಲ, ಆದರಿಂದ ನಿಧಾನ ಮಾಡಬಹುದು. ಅದಕ್ಕಾಗಿ ನಾವು ಅದನ್ನೆಲ್ಲಾ ವಿವರವಾಗಿ ಹೇಳಿದ್ದೇವೆ. ಒಂದು ವೇಳೆ, ನಾವು ಈಗ ಹೇಗೆ ನೆರೆ ಪ್ರಾಂತ್ಯಗಳಿಗೆ ಸಹಾಯ ಮಾಡುತ್ತೇವೆ, ಅದೇ ರೀತಿಯಿಂದ ಮುಂದೆಯೂ ಸಹಾಯ ಮಾಡವುದಕ್ಕೋಸ್ಕರ ಮಾಡಬೇಕೆಂದು ಹೇಳುತ್ತೇನೆ. ಆದ್ದರಿಂದ ಇದಕ್ಕೆ ನಾವು ಶಕ್ತಿ ಮೀರಿ ಕೆಲಸ ಮಾಡುತ್ತೇವೆಂದು ತಮಗೆ ಭರವಸೆ ಕೊಡುತ್ತೇನೆ ; ಮತ್ತು ಯಾವ ಅನುಮಾನಕ್ಕೂ ಅಸ್ಪದ ಕೊಡುವುದಿಲ್ಲ.

Sri C. J. MUCKANNAPPA.—When we are not able to utilise the power generated in the Sharavathy Project, what is the fun in taking up the Kalinadi project ?

ಶ್ರೀ ವೀರೇಂದ್ರ ಪಾಟೀಲ್.—ಕಾಳಿ ನದಿ ಯೋಜನೆಗೆ ಫಾರಿನ್ ಎಕ್ಸ್ಚೇಂಜ್ ಆಗತ್ಯವಿಲ್ಲ. ಅದು ಸಿವಿಲ್ ಇಂಜನಿಯರಿಂಗ್ ಕೆಲಸ. ಅದರೆ 9 ಮತ್ತು 10 ಯುುನಿಟ್‌ಗೆ ಬೇಕಾದಂಥದ್ದು ಶೇಕಡಾ 100 ಅಂಶದಷ್ಟು ಸಾಮಾಗ್ರಿಗಳನ್ನು ಅಮದುಮಾಡಬೇಕಾಗುತ್ತದೆ, ಅದಕ್ಕೆ ಏನಾದರೂ ಕಷ್ಟ ಇರಬಹುದು ಎಂಬ ಅಭಿಪ್ರಾಯ ಇದೆ. ಈಗ ನಮ್ಮ ಹರಿದ್ವಾರ ಬೋಪಾಲ್‌ನಲ್ಲಿ ಬೇಕಾದ ಇಂಡಿ ಜಿನಸ್ ಸಾಮಾಗ್ರಿಗಳು ತಯಾರಾಗುವಾಗ ತುಂಬಾ ವಿಳಂಬವಾಗಬಹುದು. ಇದನ್ನೆಲ್ಲಾ ನಾವು ಕೇಂದ್ರದವರಿಗೆ ಸ್ಪಷ್ಟಪಡಿಸಿದ್ದೇವೆ. ಅದರಿಂದ ಕಾಳಿ ನದಿ ಯೋಜನೆಗೂ, 9-10 ಯುನಿಟ್ ಸ್ಯಾಕ್ಷನ್ ಮಾಡುವುದಕ್ಕೂ ಏನೂ ಸಂಬಂಧವಿಲ್ಲ.

ಕೊನೆಯದಾಗಿ ಕೆಲವರು ಇಲಾಖೆಯವರ ನಡತೆಯ ವಿಚಾರ ಪಸ್ತಾಪಿಸಿದರು. ಅದು ಆಗಿರಲಿಕ್ಕಿಲ್ಲವೆಂದೂ ನಾನು ಹೇಳುವುದಿಲ್ಲ. ನನಗೂ ಕೆಲವು ದೂರುಗಳು ಬಂದಿವೆ. ಎಲ್ಲಾ ಕಛೇರಿಗಳಲ್ಲೂ ಸಾಮಾನ್ಯವಾಗಿ ಕೆಲವರು ಅಂಥವರು ಇರಬಹುದು. ಮತ್ತು ಕೆಟ್ಟ ರೀತಿಯಿಂದ ನಡೆದಿರಬಹುದು. ಆದರೆ ಅಂತಹ ವಿಚಾರಗಳನ್ನು ನನ್ನ ಗಮನಕ್ಕೆ ತಂದರೆ ಅದನ್ನು ಸರಿಯಾದ ರೀತಿಯಲ್ಲಿ ವಿಚಾರಣೆ ಮಾಡೋಣ. ಮತ್ತು ಕೆಲವರು ಚೇರ್‌ಮೆನ್ ಮಿಸ್ ಬಿಹೇವ್ ಮಾಡಿದ್ದಾರೆಂದು ಕೂಡ ಹೇಳಿದರು. ಅದನ್ನು ನಾನು ಒಪ್ಪಿಕೊಳ್ಳಬೇಕಾದರೆ, ಅದು ಸರಿಯಾದುದು ಅಲ್ಲ ಎಂದು ಹೇಳಬಹುದು. ಮಿಸ್ ಬಿಹೇವ್ ಮಾಡಿದರು ಎಂದು ಹೇಳಿದರೆ ಅದು ನನ್ನಿಂದ ತಪ್ಪಾಗುತ್ತದೆ. ಯಾರೇ ಆದರೂ ತಪ್ಪು ಮಾಡಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಲು ನಾವು ಹಿಂದೆ ಮುಂದೆ ನೋಡುವುದಿಲ್ಲ ಎಂಬುದನ್ನು ನಾನು ಇಲ್ಲಿ ತಮಗೆಲ್ಲಾ ಹೇಳುತ್ತಿದ್ದೇನೆ.

ಈ ಹೊತ್ತು ಮೇಲಿಂದ ಮೇಲೆ ಹೆಚ್ಚಿಗೆ ವಿದ್ಯುಚ್ಛಕ್ತಿ ನಮಗೆ ದೊರಕಿರುವುದರಿಂದ ಅನೇಕ ಕಡೆ ತ್ವರಿತದಿಂದ ಹೆಚ್ಚು ಹೆಚ್ಚು ಕೆಲಸಮಾಡಬೇಕಾಗಿದೆ. ಜನರಿಗೂ ಕೂಡ ನಮ್ಮಲ್ಲಿ ಹೆಚ್ಚಿಗೆ ವಿದ್ಯುಚ್ಛಕ್ತಿಯಿದೆ, ಕೇಳಿದರೆ ದೊರೆಯುತ್ತದೆ ಎಂಬ ತಿಳಿವಳಿಕೆ ಉಂಟಾಗಿದೆ. ಎಲ್ಲರೂ ಈಗ ಪವರ್ ಕೇಳಲು ಪ್ರಾರಂಭಮಾಡಿದ್ದಾರೆ. ಅವರ ಕೇಳಿಕೆಯನ್ನು ಬೇಗ ಪೂರೈಸುವುದಕ್ಕಾಗದೆ ಕೆಲವರಿಗೆ ಅಸಮಾಧಾನವಾಗಿದೆ. ಆದರೆ ಸಧ್ಯದಲ್ಲ ಈ ಅಸಮಾಧಾನ ದೂರ ಮಾಡಬಹುದೆಂಬ ಭರವಸೆಯಿದೆ. ಇಡೀ

(ಶ್ರೀ ವೀರೇಂದ್ರ ಪಾಟೀಲ್)

ದೇಶಕ್ಕೆ ಅನುಕೂಲವಾಗುವಂತೆ ಹೊಸ ಹೊಸ ಕಾರ್ಖಾನೆಗಳನ್ನು ಏರ್ಪಡಿಸುವ ಉದ್ಯಮದಲ್ಲಿ ತೊಡಗುತ್ತೇವೆ, ಎಲ್ಲ ಜನರಿಗೂ ಹೆಚ್ಚು ಹೆಚ್ಚು ಸಮಾಧಾನ ಪಡಿಸುವ ರೀತಿಯಲ್ಲಿ ವರ್ತಿಸುತ್ತೇವೆಂದು ಮಾನ್ಯ ಸದಸ್ಯರುಗಳಿಗೆ ಭರವಸೆ ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. DEPUTY SPEAKER.—The House will now adjourn and meet again at one p.m. tomorrow.

The House adjourned at Twenty-one Minutes past Seven of the Clock to meet again at One of the Clock on Friday, the 22nd July 1966.